بِسْمِ اللہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ಸಂಚಿಕೆ: 03

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18 ಜನವರಿ 2024, 18 ಸುಲಹ್ 1403 ಹಿಜರಿ ಶಮ್ಸಿ,
05 ರಜಬ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوا اسْتَجِيْبُوْا لِلّٰهِ
وَلِلرَّسُوْلِ اِذَا دَعَاكُمْ لِمَا
يُحْيِيْكُمْ (سورۃ الانفال:25)

(ಅಲ್ ಅನ್‌ಫಾಲ್: 25)

ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**(2500)** ಹಝ್ರತ್ ಉಕ್ಬಾ ಬಿನ್ ಆಮಿರ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರು ತನ್ನ ಸಹಚರರಿಗೆ ವಿತರಿಸಲು ಕೆಲವು ಮೇಕೆಗಳನ್ನು ಅವರಿಗೆ ನೀಡಿದರು. ಈ ಮೇಕೆಗಳು ಖುರ್ಬಾನಿಗಾಗಿ ಇದ್ದವು, ಅದರಲ್ಲಿ ಒಂದು ವರ್ಷದ ಮೇಕೆಯು ಉಳಿದಿತ್ತು. ಹಝ್ರತ್ ಉಕ್ಬಾ(ರ) ರಸೂಲುಲ್ಲಾಹ್(ಸ) ಅವರಿಗೆ ಇದನ್ನು ಪ್ರಸ್ತಾಪಿಸಿದಾಗ ಅವರು(ಸ) ಹೇಳಿದರು: ಅದನ್ನು ನೀವು ತ್ಯಾಗ ಮಾಡಿ.

**(2501/2)** ಅಬ್ದುಲ್ಲಾ ಬಿನ್ ಹಿಶಾಮ್(ರ) ವರದಿ ಮಾಡುತ್ತಾರೆ ಅವರು ಹಝ್ರತ್ ಪೈಗಂಬರ್(ಸ)ರ ಕಾಲಾವಧಿಯನ್ನು ಪಡೆದಿದ್ದರು. ಅವರ ತಾಯಿ ಹಝ್ರತ್ ಝೈನಬ್ ಬಿನ್ತ್ ಹಮೀದ್(ರ)ಅವರನ್ನು ರಸೂಲುಲ್ಲಾಹ್(ಸ)ರ ಬಳಿಗೆ ಕರೆದುಕೊಂಡು ಹೋಗಿ (ಹಝ್ರತ್ ಝೈನಬ್(ರ)) ಹೇಳಿದರು: ಯಾ ರಸೂಲಲ್ಲಾಹ್(ಸ)! ಈ ಮಗುವಿನಿಂದ ಬೈಅತ್ ಅನ್ನು ತೆಗೆದುಕೊಳ್ಳಿ, ಅದಕ್ಕೆ ಅವರು(ಸ) ಅವನು ಇನ್ನು ಚಿಕ್ಕವನಾಗಿದ್ದಾನೆ ಎಂದು ಹೇಳಿ ಅವನ ತಲೆಯ ಮೇಲೆ ತನ್ನ ಕೈಗಳನ್ನಿಟ್ಟು ಅವನಿಗಾಗಿ ಪ್ರಾರ್ಥಿಸಿದರು. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಶಿರ್ಕಾ, 2008 ಖಾದಿಯಾನ್ ಪ್ರಕಟಿತ)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ." ***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

ಯಾವುದೇ ಬಾಹ್ಯ ಸಂಪತ್ತು ಅಥವಾ ಆಡಳಿತ, ಸಿರಿವಂತಿಕೆ ಮತ್ತು ಗೌರವ, ಮಕ್ಕಳ ಸಮೃದ್ಧಿಯು ಒಬ್ಬ ವ್ಯಕ್ತಿಯನ್ನು ಸೌಕರ್ಯ ಮತ್ತು ನೆಮ್ಮದಿ ನೀಡುತ್ತದ ಮತ್ತು ಈ ವಿಷಯಗಳಿಂದ ಅವನಿಗೆ ಸ್ವರ್ಗ ಲಭಿಸುತ್ತದೆ ಎಂದು ಎಂದಿಗೂ ಭಾವಿಸಬೇಡಿ. ಖಂಡಿತವಾಗಿಯೂ ಇಲ್ಲ. ಸ್ವರ್ಗದ ಪ್ರತಿಫಲಗಳಲ್ಲಿ ಇರುವ ಸೌಕರ್ಯ ಅಥವಾ ನೆಮ್ಮದಿ ಅಥವಾ ಸಮೃದ್ಧಿಯು ಈ ವಿಷಯಗಳಿಂದ ಖಂಡಿತವಾಗಿಯೂ ಲಭಿಸುವುದಿಲ್ಲ ಬದಲಿಗೆ ಅದು ದೇವನಲ್ಲಿಯೇ ಜೀವಿಸುವುದರಲ್ಲಿ ಹಾಗೂ ಸಾಯುವುದರಲ್ಲಿ ಲಭಿಸುತ್ತದೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ನರಕದ ವಾಸ್ತವತೆ

ಈಗ ನಾವು ಅರ್ಥಮಾಡಿಕೊಳ್ಳಬೇಕು ನರಕ ಎಂದರೇನು? ಅಲ್ಲಾಹನು ಮರಣದ ನಂತರ ವಾಗ್ದಾನ ಮಾಡಿರುವುದು ನರಕವಾಗಿದೆ? ಎರಡನೆಯದಾಗಿ, ಈ ಜೀವನವು ಸರ್ವಶಕ್ತನಾದ ಅಲ್ಲಾಹನಿಗಾಗಿ ಇಲ್ಲದಿದ್ದರೆ ಅದು ನರಕವಾಗಿದೆ. ಅಂತಹ ವ್ಯಕ್ತಿಯನ್ನು ತೊಂದರೆಗಳಿಂದ ರಕ್ಷಿಸಲು ಮತ್ತು ಅವನಿಗೆ ಸಾಂತ್ವಾನ ಮತ್ತು ನೆಮ್ಮದಿಯನ್ನು ನೀಡಲು ಸರ್ವಶಕ್ತನಾದ ಅಲ್ಲಾಹನು ಜವಾಬ್ದಾರನಲ್ಲ. ಯಾವುದೇ ಬಾಹ್ಯ ಸಂಪತ್ತು ಅಥವಾ ಆಡಳಿತ, ಸಿರಿವಂತಿಕೆ ಮತ್ತು ಗೌರವ, ಮಕ್ಕಳ ಸಮೃದ್ಧಿಯು ಒಬ್ಬ ವ್ಯಕ್ತಿಯನ್ನು ಸೌಕರ್ಯ ಮತ್ತು ನೆಮ್ಮದಿ ನೀಡುತ್ತದ ಮತ್ತು ಈ ವಿಷಯಗಳಿಂದ ಅವನಿಗೆ ಸ್ವರ್ಗ ಲಭಿಸುತ್ತದೆ ಎಂದು ಎಂದಿಗೂ ಭಾವಿಸಬೇಡಿ. ಖಂಡಿತವಾಗಿಯೂ ಇಲ್ಲ. ಸ್ವರ್ಗದ ಪ್ರತಿಫಲಗಳಲ್ಲಿ ಇರುವ ಸೌಕರ್ಯ ಅಥವಾ ನೆಮ್ಮದಿ ಅಥವಾ ಸಮೃದ್ಧಿಯು ಈ ವಿಷಯಗಳಿಂದ ಖಂಡಿತವಾಗಿಯೂ ಲಭಿಸುವುದಿಲ್ಲ ಬದಲಿಗೆ ಅದು ದೇವನಲ್ಲಿಯೇ ಜೀವಿಸುವುದರಲ್ಲಿ ಹಾಗೂ ಸಾಯುವುದರಲ್ಲಿ ಲಭಿಸುತ್ತದೆ. ಅದಕ್ಕಾಗಿಯೇ ಪ್ರವಾದಿಗಳು ವಿಶೇಷವಾಗಿ ಹಝ್ರತ್ ಇಬ್ರಾಹೀಮ್(ಅ) ಮತ್ತು ಯಾಖೂಬ್(ಅ)ರವರ ಉಯಿಲು ಸಹ ಹೀಗಾಗಿತ್ತು: **ಲಾ ತಮೂತುನ್ನ ಇಲ್ಲಾ ವ ಅನ್‌ತುಮ್ ಮುಸ್ಲಿಮೂನ** (ಅಲ್‌ಬಖರ: 133) ಅಂದರೆ: ನೀವು (ಅಲ್ಲಾಹನಿಗೆ) ಸಂಪೂರ್ಣ ವಿಧೇಯತೆ ತೋರುವವರಾಗಿ ವಿನಾ ನಿಮಗೆ ಮರಣ ಬಾರದಿರಲಿ ಎಂದು ಉಪದೇಶಿಸಿದರು. ಲೌಕಿಕ ಭೋಗಗಳು ಒಂದು ರೀತಿಯ ಅಶುದ್ಧ ಆಸೆಯನ್ನು ಹುಟ್ಟಿಸಿ ದಾಹವನ್ನು ಹೆಚ್ಚಿಸುತ್ತದೆ. ಇಸ್ತಿಸ್‌ಖಾದ (ಅಸ್ಸೈಟಿಸ್) ರೋಗಿಯ ಹಾಗೆ ಆತನು ನಾಶವಾಗುವವರೆಗೆ ದಾಹ ತಣಿಸುವುದಿಲ್ಲ. ಆದ್ದರಿಂದ, ಈ ನಿರರ್ಥಕ ಆಸೆಗಳು ಮತ್ತು ಹಂಬಲಗಳ ಬೆಂಕಿಯು ಅದೇ ನರಕದ ಬೆಂಕಿಯ ಹಾಗಿದೆ ಅದು ಮಾನವನ ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿ ನೀಡುವುದಿಲ್ಲ ಬದಲಿಗೆ ಆತನಿಗೆ ಸಂದಿಗ್ಧತೆ ಹಾಗೂ ಅಶಾಂತತೆಯ ಸ್ಥಿತಿಯಲ್ಲಿ ಇರಿಸುತ್ತದೆ. ಆದುದರಿಂದ ಈ ವಿಷಯವು ನನ್ನ ಸ್ನೇಹಿತರ ಕಣ್ಣುಗಳಿಂದ ಎಂದಿಗೂ ಮರೆಯಾಗಬಾರದು, ಒಬ್ಬ ವ್ಯಕ್ತಿಯು ಸಂಪತ್ತು ಮತ್ತು ಸಂಪತ್ತಿನ ಪ್ರೀತಿ ಅಥವಾ ಹೆಂಡತಿ ಮತ್ತು ಮಕ್ಕಳ ಪ್ರೀತಿಯಿಂದ ಹುಚ್ಚನಾಗಬಾರದು ಮತ್ತು ಅವನ ಹಾಗೂ ಸರ್ವಶಕ್ತನಾದ ಅಲ್ಲಾಹನ ನಡುವೆ ಮುಸುಕನ್ನು ಸೃಷ್ಟಿಸಬಾರದು. ಅದಕ್ಕಾಗಿಯೇ ಸಂಪತ್ತು ಮತ್ತು ಮಕ್ಕಳನ್ನು ಪ್ರಲೋಭನೆ ಎಂದು ಕರೆಯಲಾಗುತ್ತದೆ. ಅವುಗಳಿಂದ ಮನುಷ್ಯನಿಗೆ ನರಕವನ್ನು ಸಿದ್ಧಪಡಿಸಲಾಗಿದೆ, ಮತ್ತು ಅವನು ಅವುಗಳಿಂದ ಬೇರ್ಪಟ್ಟಾಗ, ಅವನು ತೀವ್ರ ಆತಂಕ ಮತ್ತು ಗಾಬರಿಯನ್ನು ತೋರಿಸುತ್ತಾನೆ ಮತ್ತು ಈ ರೀತಿಯಲ್ಲಿ, **ನಾರುಲ್ಲಾಹಿಲ್ ಮೂಖದುಲ್ಲತಿ ತತ್ತಲಿಉ ಅಲಲ್ ಅಫ್‌ಇದತಿ** (ಅಲ್‌ಹುಮಝ: 7,8) ಅಂದರೆ: ಅದು ಅಲ್ಲಾಹನ ಜ್ವಲಿಸುವ ಅಗ್ನಿಯಾಗಿದೆ. ಅದು ಹೃದಯಗಳ ಮೇಲೆ ಎರಗುವುದು. ಇದು ಪರಿವರ್ತಿಕ ಬಣ್ಣದಲ್ಲಿ ಉಳಿಯುವುದಿಲ್ಲ ಆದರೆ ತರ್ಕಬದ್ಧ ರೂಪವನ್ನು ಪಡೆಯುತ್ತದೆ. ಆದ್ದರಿಂದ ಈ ಬೆಂಕಿಯು ಮಾನವನ ಹೃದಯವನ್ನು ಸುಡುತ್ತದೆ ಮತ್ತು ಸುಟ್ಟ ಕಲ್ಲಿದ್ದಲಿಗಿಂತ ಕಪ್ಪು ಮತ್ತು ಕತ್ತಲೆ ಮಾಡುತ್ತದೆ. ಇದು ಅದೇ ಸರ್ವಶಕ್ತನಾದ ಅಲ್ಲಾಹನ ಪ್ರೀತಿಯಾಗಿದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-503, ಪ್ರಕಟಿತ 2018, ಖಾದಿಯಾನ್)**

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

# ಖುತ್‌ಬ ಜುಮುಅ

**ಯುದ್ಧದ ಪರಿಸ್ಥಿತಿಯಲ್ಲಿ ಪವಿತ್ರ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮಾದರಿ**

ಹಝ್ರತ್ ಪೈಗಂಬರ್(ಸ)ರಿಗೆ ಯಾರೊಂದಿಗೂ ವೈಯಕ್ತಿಕ ಶತ್ರುತ್ವ ಇರಲಿಲ್ಲ. ಬದಲಿಗೆ ಯುದ್ಧವು ಅಲ್ಲಾಹನ ದೀನನ್ನು ಅಳಿಸಿ ಹಾಕಲು ಪ್ರಯತ್ನಿಸುವವರ ವಿರುದ್ಧವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಹಝ್ರತ್ ಪೈಗಂಬರ್(ಸ) ಯುದ್ಧ ನಿಬಂಧನೆಗಳನ್ನು ಮತ್ತು ಕಾನೂನುಗಳನ್ನು ನಿಶ್ಚಯಿಸಿದ್ದರು, ಒಪ್ಪಂದಗಳಿಗೆ ಬೆಲೆ ನೀಡಿದ್ದರು ಮತ್ತು ಅವುಗಳ ಪ್ರಕಾರ ಅತ್ಯುತ್ತಮವಾಗಿ ನಡೆದರು. ಇಂದಿನ ಲೋಕದ ಹಾಗೆ ಅನೇಕ ನಿಬಂಧನೆಗಳನ್ನು ಮತ್ತು ಕಾನೂನುಗಳನ್ನು ಮಾಡಿಕೊಂಡು ಅದರ ಪ್ರಕಾರ ನಡೆಯದೇ ದ್ವಿಮುಖ ಧೋರಣೆ ತೋರಿಸುತ್ತಿರಲಿಲ್ಲ.

ಹಝ್ರತ್ ಪೈಗಂಬರ್(ಸ)ರ ಜೀವನವು ನ್ಯಾಯಪಾಲನೆ, ನೀತಿ ಮತ್ತು ಶಾಂತಿಸ್ಥಾಪನೆಯ ಮೂಲತತ್ವಗಳ ಬಗ್ಗೆ ಪವಿತ್ರ ಖುರ್‌ಆನಿನ ಆಜ್ಞೆಗಳ ಕ್ರಿಯಾರೂಪದ ವ್ಯಾಖ್ಯಾನವಾಗಿತ್ತು.

**ಉಹದ್ ಯುದ್ಧದ ಕಾರಣಗಳು ಹಾಗೂ ಹಿನ್ನೆಲೆಯ ವಿವರಾತ್ಮಕ ಪ್ರಸ್ತಾವನೆ**

ಪೆಲಸ್ತೀನಿನ ಮುಸ್ಲಿಮರಿಗಾಗಿ ದುಆ ಮಾಡಲು ಪುನಃ ಮನವಿ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **01–12–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಹಝ್ರತ್ ಪೈಗಂಬರ್(ಸ)ರ ಯುದ್ಧಗಳಿಗೆ ಸಂಬಂಧಿಸಿ ಕೆಲವು ಸಂಗತಿಗಳನ್ನು ಹೇಳುವೆನು. ಹಝ್ರತ್ ಪೈಗಂಬರ್(ಸ)ರ ವ್ಯಕ್ತಿತ್ವದ ಮಗ್ಗುಲುಗಳು ಮತ್ತು ಅವರ ಮಾದರಿ ಈ ಸ್ಥಿತಿಗಳಲ್ಲಿ ನಮಗೆ ಹೇಗೆ ಕಂಡುಬರುತ್ತಿದೆ ಎಂಬುದನ್ನು ತಿಳಿಸುತ್ತೇನೆ.

ಹಝ್ರತ್ ಪೈಗಂಬರ್(ಸ) ಕೈದಿಗಳಿಗೆ ಹೇಗೆ ಸೌಲಭ್ಯಗಳನ್ನು ಒದಗಿಸಿದ್ದರು ಎಂಬುದನ್ನು ಬದ್ರ್ ಯುದ್ಧಕ್ಕೆ ಸಂಬಂಧಿಸಿ ನಾವು ನೋಡಿದ್ದೇವೆ. ಹಝ್ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ ಸಹಾಬಿಯರು ಅವರು ಸ್ವತಃ ಸೇವಿಸುವ ಆಹಾರಕ್ಕಿಂತ ಉತ್ತಮವಾದ ಆಹಾರವನ್ನು ನಮಗೆ ಕೊಡುತ್ತಿದ್ದರು ಎಂದು ಕೈದಿಗಳು ಸ್ವತಃ ಹೇಳಿದ್ದರು. ಅನಂತರ ಹಝ್ರತ್ ಪೈಗಂಬರ್(ಸ) ಬಹಳ ಲಘುವಾದ ನಿಬಂಧನೆಗಳೊಂದಿಗೆ ಆ ಕೈದಿಗಳನ್ನು ಬಿಡುಗಡೆಗೊಳಿಸಿದ್ದರು. ವಿದ್ಯಾವಂತರಾಗಿರುವವರು ಮುಸ್ಲಿಮರಿಗೆ ಓದುಬರಹ ಕಲಿಸಬೇಕು ಎಂದು ಮಾತ್ರವಾಗಿತ್ತು ಕೆಲವರಿಗೆ ವಿಧಿಸಲಾದ ಪರಿಹಾರಧನ.

ಹಝ್ರತ್ ಪೈಗಂಬರ್(ಸ)ರಿಗೆ ಯಾರೊಂದಿಗೂ ವೈಯಕ್ತಿಕ ಶತ್ರುತ್ವ ಇರಲಿಲ್ಲ. ಬದಲಿಗೆ ಯುದ್ಧವು ಅಲ್ಲಾಹನ ದೀನನ್ನು ಅಳಿಸಿ ಹಾಕಲು ಪ್ರಯತ್ನಿಸುವವರ ವಿರುದ್ಧವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಕೆಲವು ಜನರು ತಮ್ಮ ನಿರ್ಬಂಧಗಳ ಕಾರಣದಿಂದ ಯುದ್ಧದಲ್ಲಿ ಭಾಗಿಯಾಗುತ್ತಿದ್ದರು. ಇದಕ್ಕೆ ಅನೇಕ ಉದಾಹರಣೆಗಳಿವೆ. ಅವರು ಮುಸ್ಲಿಮರೊಂದಿಗೆ ಹೋರಾಡಲು ಬಯಸಿರಲಿಲ್ಲ, ಆದರೆ ಅವರು ಅಸಹಾಯಕರಾಗಿದ್ದರಿಂದ ಹೋರಾಡಬೇಕಾಗಿತ್ತು. ಹಝ್ರತ್ ಪೈಗಂಬರ್(ಸ)ರವರು ಅವರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದರು. ನಂತರ ಅವರಲ್ಲಿ ಹಲವರು ಮುಸ್ಲಿಮರಾದರು.

ಹಝ್ರತ್ ಪೈಗಂಬರ್(ಸ) ಯುದ್ಧ ನಿಬಂಧನೆಗಳನ್ನು ಮತ್ತು ಕಾನೂನುಗಳನ್ನು ನಿಶ್ಚಯಿಸಿದ್ದರು, ಒಪ್ಪಂದಗಳಿಗೆ ಬೆಲೆ ನೀಡಿದ್ದರು ಮತ್ತು ಅವುಗಳ ಪ್ರಕಾರ ಅತ್ಯುತ್ತಮವಾಗಿ ನಡೆದರು. ಇಂದಿನ ಲೋಕದ ಹಾಗೆ ಅನೇಕ ನಿಬಂಧನೆಗಳನ್ನು ಮತ್ತು ಕಾನೂನುಗಳನ್ನು ಮಾಡಿಕೊಂಡು ಅದರ ಪ್ರಕಾರ ನಡೆಯದೇ ದ್ವಿಮುಖ ಧೋರಣೆ ತೋರಿಸುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ)ರ ಜೀವನವು ನ್ಯಾಯಪಾಲನೆ, ನೀತಿ ಮತ್ತು ಶಾಂತಿಸ್ಥಾಪನೆಯ ಮೂಲತತ್ವಗಳ ಬಗ್ಗೆ ಪವಿತ್ರ ಖುರ್‌ಆನಿನ ಆಜ್ಞೆಗಳ ಕ್ರಿಯಾರೂಪದ ವ್ಯಾಖ್ಯಾನವಾಗಿತ್ತು. ಅಲ್ಲಾಹನು ಒಂದೆಡೆ ಹೇಳುತ್ತಾನೆ:

**ಯಾ ಅಯ್ಯುಹಲ್ಲಝೀನ ಆಮನೂ ಖವ್ವಾಮೀನ ಲಿಲ್ಲಾಹಿ ಶುಹದಾಅ ಬಿಲ್ ಖಿಸ್ತಿ, ವಲಾ ಯಜ್ರಿಮನ್ನಕುಮ್ ಶನಾಆನು ಖೌಮಿನ್ ಅಲಾ ಅಲ್ಲಾ ತಅ್‌ದಿಲೂ, ಇಅ್‌ದಿಲೂ. ಹುವ ಅಖ್ರಬು ಲಿತ್ತಖ್ವಾ. ವತ್ತಖುಲ್ಲಾಹ, ಇನ್ನಲ್ಲಾಹ ಖಬೀರುಮ್ ಬಿಮಾ ತಅ್‌ಮಲೂನ** (ಅಲ್‌ಮಾಇದಃ:09)

ಅರ್ಥ: ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ.

ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ)ರ ಮಾದರಿ ಈ ಬೋಧನೆಯ ಬೆಳಕಿನಲ್ಲಿ ಎಲ್ಲ ರೀತಿಯಲ್ಲೂ ಉತ್ತಮವಾಗಿತ್ತು ಮತ್ತು ಅದರ ಉನ್ನತ ಮಟ್ಟವನ್ನು ನೆಲೆನಿಲ್ಲಿಸುವಂಥದ್ದಾಗಿತ್ತು.

ನಾನು ಹೇಳಿದಂತೆ, ಹಝ್ರತ್ ಪೈಗಂಬರ್(ಸ) ಅವರು ಯುದ್ಧಗಳಲ್ಲಿ ಅನುಸರಿಸಿದ ಕಾರ್ಯನೀತಿ ಏನಾಗಿತ್ತು. ಇದರ ಬಗ್ಗೆ ಬದರ್ ಯುದ್ಧದ ಜೊತೆಗೆ ಉಳಿದ ಯುದ್ಧಗಳ ಬಗ್ಗೆಯೂ ಪ್ರಸ್ತಾಪಿಸುತ್ತೇನೆ. ಅವುಗಳಲ್ಲಿ, ಸರ್‌ಯಾಗಳೂ ಸಹ ಇವೆ ಅಂದರೆ ಹಝ್ರತ್ ಪೈಗಂಬರ್(ಸ)ರವರು ತಮ್ಮ ಜೀವಿತಕಾಲದಲ್ಲಿ ಸ್ವತಃ ಯುದ್ಧಗಳಲ್ಲಿ ಭಾಗಿಯಾಗದೆ ಬೇರೆಯವರನ್ನು ಆ ಯುದ್ಧಪಡೆಗೆ ನಾಯಕನನ್ನಾಗಿ ನೇಮಿಸಿ ಕಳುಹಿಸುತ್ತಿದ್ದರು. ಆದಾಗ್ಯೂ, ಇದು ಸುದೀರ್ಘ ಇತಿಹಾಸವಾಗಿದೆ, ಅದನ್ನು ವಿವರಿಸಲು ಕೆಲವು ಖುತ್‌ಬಗಳಾಗಬಹುದು.

ಇಂದು ಉಹದ್ ಯುದ್ಧಕ್ಕೆ ಸಂಬಂಧಿಸಿ ಕೆಲವು ವಿಷಯಗಳನ್ನು ವಿವರಿಸುತ್ತೇನೆ.

ಈ ಯುದ್ಧವನ್ನು ಕೂಡ ಶತ್ರುಗಳು ತಮ್ಮ ವೈರದ ಬೆಂಕಿಯ ಕಾರಣದಿಂದ ಆರಂಭಿಸಿದ್ದರು ಮತ್ತು ನಿರ್ಬಂಧಿತ ಸ್ಥಿತಿಯಲ್ಲಿ ಮುಸ್ಲಿಮರಿಗೂ ಯುದ್ಧಕ್ಕಾಗಿ ಹೊರಡಬೇಕಾಗಿ ಬಂತು ಎಂದು ಘಟನೆಗಳಿಂದ ಸಾಬೀತಾಗುತ್ತದೆ. ಈ ಯುದ್ಧವು ಬದ್ರ್ ಯುದ್ಧದ ಒಂದು ವರ್ಷದ ನಂತರ ಹಿಜರೀ 3, ಶವ್ವಾಲ್ ತಿಂಗಳಲ್ಲಿ ಶನಿವಾರದಂದು ನಡೆದಿತ್ತು. ಉಹದ್ ಯುದ್ಧವು ಹಿಜರೀ 3ರಲ್ಲಿ ನಡೆದಿತ್ತು ಎಂಬುದರಲ್ಲಿ ಹೆಚ್ಚಿನ ಎಲ್ಲ ಚರಿತ್ರೆಗಾರರು ಒಮ್ಮತಾಭಿಪ್ರಾಯವನ್ನು ಹೊಂದಿರುವರು. ಆದರೆ ಹಿಜರೀ 4ರಲ್ಲಿ ನಡೆದಿತ್ತು ಎಂಬ ಒಂದು ಹೇಳಿಕೆ ಕೂಡ ಇದೆ. ಹೆಚ್ಚಾಗಿ ಶವ್ವಾಲ್ 7 ಮತ್ತು 15ರಲ್ಲಿ ನಡೆದಿತ್ತು ಎಂದೂ ಪ್ರಸ್ತಾಪಿಸಲಾಗುತ್ತದೆ.

ಹಝ್ರತ್ ಪೈಗಂಬರ್(ಸ) ಮದೀನದಿಂದ ಜುಮುಅದಂದು ಅಸರ್ ನಮಾಝಿನ ನಂತರ ಹೊರಟರು ಮತ್ತು ಶನಿವಾರದಂದು ಸೂರ್ಯೋದಯಕ್ಕೆ ಮುಂಚೆ ಉಹದ್ ಮೈದಾನಕ್ಕೆ ತಲುಪಿದರು. ಉಹುದ್ ಮದೀನದ ಪರ್ವತಗಳಲ್ಲಿನ ಒಂದು ಪರ್ವತವಾಗಿದೆ. ಇದು ಮದೀನದಿಂದ ಮೂರು ಮೈಲಿ ದೂರಲದಲಿದೆ.

(ದಾಎರಃ ಮಾರಿಫ್ ಸೀರತ್ ಮುಹಮ್ಮದ ರಸೂಲುಲ್ಲಾಹ್(ಸ), ಸಂಪುಟ–6, ಪುಟ–456, ಬಝ್ಮ್ ಅತ್ಫಾಲ್ ಲಾಹೋರ್ 2022) (ಸೀರತುಲ್ ಹಲಬೀಯ ಅನುವಾದ, ಸಂಪುಟ–2, ಪುಟ–132, ದಾರುಲ್ ಇಶಾಅತ್ ಕರಾಚಿ)

ಉಹದ್ ಪರ್ವತವು ಪ್ರಸ್ತುತ ಮಸ್ಜಿದೆ ನಬವೀ(ಸ)ನಿಂದ ಉತ್ತರಕ್ಕೆ ನಾಲ್ಕು ಕಿಲೋಮೀಟರ್ ದೂರದಲ್ಲಿದೆ. ಪ್ರಸ್ತುತ ಮದೀನಾದ ಜನರು ಹೇಳುತ್ತಾರೆ ಇದು ಪರ್ವತದ ಬುಡ ಮಾತ್ರವಲ್ಲ, ಅದರ ಸುತ್ತಲೂ ಹರಡಿಕೊಂಡಿದೆ. ಉಹದ್ ಪರ್ವತವು ಹರಮ್‌ನಲ್ಲಿ ಸೇರಿಕೊಂಡಿದೆ. ಉಹುದ್ ಪೂರ್ವದಿಂದ ಪಶ್ಚಿಮಕ್ಕೆ ಹರಡಿಕೊಂಡಿದೆ ಅದರ ಉದ್ದ 6 ಕಿಲೋಮೀಟರ್ ಮತ್ತು ಪರ್ವತವು ಕೆಂಪು ಬಣ್ಣಕ್ಕೆ ವಾಲಿದೆ.

(ಅಟ್ಲಸ್ ಸೀರತುನ್ನಬಿ(ಸ), ಪುಟ–245, ದಾರುಸ್ಸಲಾಮ್ ರಿಯಾಝ್) (ದಾಎರಾ ಮಆರಿಫ್, ಸಂಪುಟ–2, ಪುಟ–31, ಪಂಜಾಬ್ ವಿಶ್ವವಿದ್ಯಾಲಯ ಲಾಹೋರ್)

ಹಿಜರೀ 3, ಶವ್ವಾಲ್ 15 ಎಂದರೆ, ಕ್ರಿ.ಶ. 624ರಲ್ಲಿ ಮಾರ್ಚ್ 31, ಶನಿವಾರದಂದು ಉಹದ್ ಯುದ್ಧ ನಡೆದಿತ್ತು ಎಂದು ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆದಿರುವರು.

(ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ (ರ), ಪುಟ–487)

ಅದರ ಹೆಚ್ಚು ವಿವರಣೆ ಹೀಗಿದೆ. ಈ ಯುದ್ಧ ನಡೆಯಲು ಕಾರಣವೇನೆಂದರೆ, ಬದ್ರ್ ಯುದ್ಧದಲ್ಲಿ ಖುರೈಶಿಯರಿಗೆ ಹೀನಾಯ ಸೋಲು ಉಂಟಾದಾಗ ಖುರೈಶಿನ ಸರದಾರರಾದ ಅಬ್ದುಲ್ಲಾಹ್ ಬಿನ್ ಉಬಯ್ಯ್ ರಬೀಅ, ಇಕ್ರಿಮ ಬಿನ್ ಅಬೂಜಹಲ್, ಸಫ್‌ವಾನ್ ಬಿನ್ ಉಮಯ್ಯ, ಅಸ್ವದ್ ಬಿನ್ ಮುತಲ್ಲಿಬ್, ಜುಬೈರ್ ಬಿನ್ ಮುತ್‌ಅಮ್, ಹಾರಿಸ್ ಬಿನ್ ಹಿಶಾಮ್, ಹಯವೈತಬ್ ಬಿನ್ ಅಬ್ದುಲ್ ಉಝ್ಝಾ ಮತ್ತು ಖುರೈಶ್‌ನ

ಕೆಲವು ಮುಂತಾದವರು ಅಬೂಸುಫ್‌ಯಾನಿನ ಬಳಿಗೆ ಹೋದರು. ಬದ್ರ್ ಯುದ್ಧಕ್ಕೆ ಕಾರಣವಾದ ವ್ಯಾಪಾರ ತಂಡದಲ್ಲಿ ಈ ಸರದಾರರ ಸಂಪತ್ತು ಇತ್ತು. ಈ ಸಂಪತ್ತನ್ನು ಮಕ್ಕದ ದಾರುನ್ನದ್‌ವದಲ್ಲಿ ಇರಿಸಲಾಗಿತ್ತು. ಈ ಸರದಾರರು ಅಬೂಸುಫ್‌ಯಾನ್‌ನೊಡನೆ ಹೇಳಿದರು: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನಮ್ಮ ಜನರನ್ನು ವಧಿಸಿದ್ದಾರೆ. ಆದ್ದರಿಂದ ಈ ವ್ಯಾಪಾರದ ಸಂಪತ್ತಿನಿಂದ ಅವರೊಂದಿಗೆ ಯುದ್ಧದ ತಯಾರಿ ಮಾಡಿರಿ. ವಧಿಸಲ್ಪಟ್ಟವರ ಪರವಾಗಿ ಸೇಡು ತೀರಿಸಲು ನಮಗೆ ಸಾಧ್ಯವಾಗಬಹುದು. ಮತ್ತೆ ಅವರು ಹೀಗೆ ಹೇಳಿದರು:

ನಾನು ಈ ವ್ಯಾಪಾರದ ಸಂಪತ್ತಿನಿಂದ ಉಂಟಾಗುವ ಲಾಭದಿಂದ ಒಂದು ಸೈನ್ಯವನ್ನು ತಯಾರಿಸಲು ನಾವು ಸಂತೋಷದಿಂದ ಸಿದ್ಧರಾಗಿದ್ದೇವೆ. ಅವರ ಈ ಸಲಹೆಯನ್ನು ಒಪ್ಪಲಾಯಿತು.

ಇದನ್ನು ಆಲಿಸಿದ ನಂತರ ಅಬು ಸುಫ್ಯಾನ್ ಹೇಳಿದನು, ನಾನು ಈ ಪ್ರಸ್ತಾಪವನ್ನು ಒಪ್ಪುತ್ತೇನೆ ಮತ್ತು ಬನೂ ಅಬ್ದ್ ಮನಾಫ್ ನನ್ನೊಂದಿಗೆ ಇದ್ದಾನೆ. ನಂತರ ಖುರೈಷಿಗಳು ಇಪ್ಪತ್ತೈದು ಸಾವಿರ ದೀನಾರ್ ಲಾಭವನ್ನು ಬೇರ್ಪಡಿಸಿ ಮೂಲಧನವನ್ನು ಮಾಲೀಕರಿಗೆ ನೀಡಿದರು. ಮತ್ತೊಂದು ವರದಿಯ ಪ್ರಕಾರ ಅವರು ಪ್ರತ್ಯೇಕಿಸಿದ ಲಾಭವು ಇಪ್ಪತ್ತೈದು ಸಾವಿರ ದೀನಾರ್ ಆಗಿದೆ.

(ಸೀರತುಲ್ ಹಲಬೀಯ ಅನುವಾದ, ಸಂಪುಟ–2, ಪುಟ–133–134, ದಾರುಲ್ ಇಶಾಅತ್ ಕರಾಚಿ) (ಸೀರತ್ ಇನ್ಸೈಕ್ಲೊಪೀಡಿಯಾ, ಸಂಪುಟ–6, ಪುಟ–145, ದಾರುಸ್ಸ;ಲಾಮ್ ರಿಯಾಝ್)

ಆದಾಗ್ಯೂ, ಯುದ್ಧಕ್ಕೆ ಪಡೆದ ಲಾಭವನ್ನು ನೀಡಲಾಯಿತು. ಈ ನಿಟ್ಟಿನಲ್ಲಿ, ಸರ್ವಶಕ್ತನಾದ ಅಲ್ಲಾಹನು ಈ ಆಯತ್ ಅನ್ನು ಅವತರಿಸಿದನು **ಇನ್ನಲ್ಲಝೀನ ಕಫರೂ ಯುನ್‌ಫಿಖೂನ ಅಮ್ವಾಲಹುಮ್ ಲಿಯಸುದ್ದೂ ಅನ್ ಸಬೀಲಿಲ್ಲಾಹಿ ಫಸಯುನ್‌ಫಿಖೂ ನಹಾ ಸುಮ್ಮ ತಕೂನು ಅಲೈಹಿಮ್ ಹಸ್ರತನ್ ಸುಮ್ಮ ಯುಗ್‌ಲಬೂನ ವಲ್ಲಝೀನ ಕಫರೂ ಇಲಾ ಜಹನ್ನಮ ಯುಹ್‌ಶರೂನ** (ಅಲ್‌ಅನ್‌ಫಾಲ್: 37) ಖಂಡಿತವಾಗಿಯೂ ಅಲ್ಲಾಹನ ಮಾರ್ಗದಿಂದ (ಜನರನ್ನು) ತಡೆಯಲಿಕ್ಕಾಗಿ ಅವಿಶ್ವಾಸಿಗಳು ತಮ್ಮ ಸಂಪತ್ತನ್ನು ವ್ಯಯಿಸುತ್ತಾರೆ. ಹಾಗೆ ಅವರು ವೆಚ್ಚ ಮಾಡುತ್ತಲೇ ಹೋಗುವರು. (ಆದರೆ) ನಂತರ ಅದು ಅವರ ಯಾತನೆಗೆ ಕಾರಣವಾಗುವುದು.ಆ ಮೇಲೆ ಅವರು ಪರಾಜಿತರಾಗುವರು.ಅವಿಶ್ವಾಸಿಗಳು ನರಕದೆಡೆಗೆ ಕೊಂಡೊಯ್ಯಲ್ಪಡುವರು.

(ಸಬ್‌ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–182, ದಾರುಲ್ ಕುತುಬ್ ಇಲ್‌ಮಿಯ, ಬೈರುತ್)

ಈ ಸಾಮಾನ್ಯ ಕಾರಣವಲ್ಲದೇ, ಬೇರೆ ಕೆಲವು ವಿಷಯಗಳನ್ನು ಸಹ ಈ ಯುದ್ಧಕ್ಕೆ ಕಾರಣಗಳೆಂದು ಹೇಳಬಹುದಾಗಿದೆ.

ಉದಾಹರಣೆಗೆ ಹಿಂದಿನ ಖುತ್‌ಬದಲ್ಲಿ ಉಲ್ಲೇಖಿಸಿದಂತೆ, ಬದ್ರ್ ಯುದ್ಧದ ನಂತರ ಮಕ್ಕಾ ನಿವಾಸಿಗಳಿಗೆ ಸಿರಿಯಾಗೆ ಹೋಗುವುದು ಅಸಾಧ್ಯವಾಗಿತ್ತು. ಏಕೆಂದರೆ ಮಕ್ಕಾದ ವ್ಯಾಪಾರ ತಂಡಗಳಿಗೆ ಮದೀನದ ಆಸುಪಾಸಿನ ಗ್ರಾಮಗಳಿಂದ ದಾಟಬೇಕಾಗಿತ್ತು. ತಮ್ಮ ಹಿಂದಿನ ದೌರ್ಜನ್ಯ ಮತ್ತು ಪೀಡನೆಗಳ ಕಾರಣದಿಂದ ಖುರೈಶಿಗಳಿಗೆ ಅಲ್ಲಿಂದ ದಾಟಿ ಹೋಗುವುದು ಕಷ್ಟದಾಯಕವಾಗುತ್ತಾ ಹೋಗುತ್ತಿತ್ತು. ಯುದ್ಧಗಳಲ್ಲಿ ಮತ್ತು ಕಾರ್ಯಾಚರಣೆಗಳಲ್ಲಿ ಸೋಲು, ಬದ್ರ್ ಯುದ್ಧದಲ್ಲಿ ಖುರೈಶೀ ಸರದಾರರ ವಧೆ ಮತ್ತು ಎಪ್ಪತ್ತು ಮುಶ್ರಿಕರ ಬಂಧನದಂತಹ ವಿಷಯಗಳು ಅವರ ಪ್ರಸಿದ್ಧಿ ಮತ್ತು ಸಾಮಾಜಿಕ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಬೀರಿತ್ತು. ಅವರ ಖ್ಯಾತಿಯನ್ನು ನೆಲೆನಿಲ್ಲಿಸಲಿಕ್ಕಾಗಿ ಅವರು ಸೇಡು ತೀರಿಸಲು ಬಯಸುತ್ತಿದ್ದರು, ಇದರಿಂದಾಗಿ ಮಕ್ಕಾದ ಖುರೈಶ್‌ಗಳು ತಮ್ಮ ರಾಜಕೀಯ ಮತ್ತು ಧಾರ್ಮಿಕ ಖ್ಯಾತಿಯನ್ನು ಪುನಃಸ್ಥಾಪಿಸಬಹುದಾಗಿತ್ತು. (ದಾಯೆರಾ ಮಆರಿಫ್, ಸೀರತ್ ಮುಹಮ್ಮದ್ ರಸುಲುಲ್ಲಾಹ್(ಸ), ಸಂಪುಟ–6, ಪುಟ–434, ಬಝ್ಮ್ ಇಖ್ಬಾಲ್ ಲಾಹೋರ್ 2022)

ಮತ್ತೊಂದೆಡೆ, ಬದ್ರ್ ಯುದ್ಧದ ನಂತರ, ಮಕ್ಕಾದ ಖುರೈಶ್‌ಗಳು ಇನ್ನೂ ಎರಡು ಅವಮಾನಕರ ಅವಮಾನಗಳನ್ನು ಎದುರಿಸಬೇಕಾಯಿತು, ಇದರಿಂದಾಗಿ ಅಬು ಸುಫ್ಯಾನ್ ಸಮೇತ ಮಕ್ಕಾದ ಜನರು ಕೋಪಗೊಂಡರು ಮತ್ತು ಅವರು ಮಸಿಮರಿಂದ ಸೇಡು ತೀರಿಸಿಕೊಳ್ಳಲು ನಿಯಮಿತವಾದ ಸಶಸ್ತ್ರ ಯುದ್ಧವನ್ನು ನಡೆಸಲು ನಿರ್ಧರಿಸಿದರು.

ಒಬ್ಬ ಬರಹಗಾರರು ಉಹುದ್ ಯುದ್ಧದ ಒಂದು ಕಾರಣವನ್ನು ಹೀಗೆ ವಿವರಿಸಿದ್ದಾರೆ, ಖುರೈಷಿಗಳು ಕೆಲವು ಅಭಿಯಾನಗಳಲ್ಲಿ ವಿಫಲರಾದರು ಮತ್ತು ಇದರಿಂದಾಗಿ ಅವರು ತುಂಬಾ ದುಃಖಿತರಾದರು ಮತ್ತು ಸೇಡು ತೀರಿಸಿಕೊಳ್ಳಲು ಬಯಸಿದ್ದರು, ಆದ್ದರಿಂದ ಅವರು ಬರೆಯುತ್ತಾರೆ, ಅಬು ಸುಫ್ಯಾನ್, ಬದ್ರ್ ಮೈದಾನದಲ್ಲಿ ಇಳಿಯದೆ ತಮ್ಮ ವ್ಯಾಪಾರ ತಂಡಗಳನ್ನು ಸುರಕ್ಷಿತ ಮಾರ್ಗಗಳ ಮೂಲಕ ಮಕ್ಕಾಕ್ಕೆ ಕರೆತಂದನು. ಅವರು ಮಕ್ಕಾದ ಜನರಿಂದ ನಿರಂತರ ನಿಂದೆಗಳನ್ನು ಎದುರಿಸಬೇಕಾಯಿತು. ಅವರು ಮುಸ್ಲಿಮರ ಮೇಲೆ ಸೇಡು ತೀರಿಸಿಕೊಳ್ಳಲು ಪ್ರತಿಜ್ಞೆ ಮಾಡಿದರು ಮತ್ತು ಮದೀನಾಗೆ ಹೋಗಿ ಮುಸ್ಲಿಮರೊಂದಿಗೆ ಪೂರ್ಣವಾಗಿ ಹೋರಾಡಲು ಖುರೈಷರನ್ನು ಮನವೊಲಿಸಿದನು. ಅಬು ಸುಫ್ಯಾನ್ ತನ್ನ ಪ್ರತಿಜ್ಞೆಯನ್ನು ಪೂರೈಸಲು ಇನ್ನೂರು ಜನರ ಸೈನ್ಯವನ್ನು ಸಿದ್ಧಪಡಿಸಿದನು ಮತ್ತು ಮದೀನಾಗೆ ತಲುಪಿದನು, ಆದರೆ ಅವನು ಬಹಿರಂಗವಾಗಿ ಹೋರಾಡಲು ಧೈರ್ಯ ಮಾಡಲಿಲ್ಲ ಮತ್ತು ಮದೀನಾದ ಹೊರವಲಯದಲ್ಲಿ ಕೆಲವು ಮರಗಳನ್ನು ಕಡಿದು, ಹೊಲವನ್ನು ಸುಟ್ಟು ಮತ್ತು ಇಬ್ಬರನ್ನು ಕೊಂದ ನಂತರ ತಪ್ಪಿಸಿಕೊಂಡನು.

ಈ ಯುದ್ಧವನ್ನು ಸುವೈಕ್ ಯುದ್ಧ ಎಂದು ಕರೆಯಲಾಗುತ್ತದೆ. ಇದನ್ನು ನಾನು ಹಿಂದಿನ ಖುತ್‌ಬ ಜುಮುಅಗಳಲ್ಲಿಯೂ ವಿವರಿಸಿದ್ದೇನೆ. ಮಕ್ಕಾದ ಜನರು ನೀನು ನಿನ್ನ ಗೋತ್ರದವರನ್ನು ಬದ್ರ್ ಯುದ್ಧಕ್ಷೇತ್ರದಲ್ಲಿ ಬಿಟ್ಟು ಹಿಂತಿರುಗಿದ್ದೀಯ ಎಂದು ಭವಿಷ್ಯದಲ್ಲಿ ಅಬೂ ಸುಫ್ಯಾನ್‌ನನ್ನು ನಿಂದಿಸಬಾರದು ಎಂಬುದು ಅವನ ಪ್ರಯತ್ನವಾಗಿತ್ತು, ಆದರೆ ಈ ವಿಫಲ ಕಾರ್ಯಾಚರಣೆಯ ನಂತರ ಜನರು ಅಬು ಸುಫ್ಯಾನ್‌ನ ಬಾಲಿಶ ಕಾರ್ಯವನ್ನು ಟೀಕಿಸಲು ಪ್ರಾರಂಭಿಸಿದರು. ಈಗ ತನ್ನ ಅಹಂಕಾರವನ್ನು ತೃಪ್ತಿಪಡಿಸುವ ಸಲುವಾಗಿ ಮುಸ್ಲಿಮರೊಂದಿಗೆ ದೊಡ್ಡ ಯುದ್ಧಕ್ಕೆ ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತಿದ್ದನು. ಖರಾದಾದಲ್ಲಿನ ನಷ್ಟದ ಬಗ್ಗೆ ಹಿಂದಿನ ಖುತ್‌ಬ ಜುಮುಅದಲ್ಲಿ ಉಲ್ಲೇಖಿಸಿದಂತೆ, ಮದೀನಾ ವಿರುದ್ಧ ಅಬು ಸುಫ್ಯಾನ್ ವಿಫಲವಾದ ಕಾರ್ಯಾಚರಣೆಯ ನಂತರ, ಖುರೈಷಿಗಳು ತಮ್ಮ ಮಾರ್ಗವನ್ನು ಬದಲಾಯಿಸಿಕೊಂಡರು ಮತ್ತು ಇರಾಖ್‌ನ ಹೆದ್ದಾರಿಯಿಂದ ಸಿರಿಯಾಕ್ಕೆ ದೊಡ್ಡ ವ್ಯಾಪಾರ ತಂಡವನ್ನು ಕಳುಹಿಸಿದರು, ಅದರಲ್ಲಿ ಚಿನ್ನಾಭರಣಗಳು, ಬೆಳ್ಳಿಯ ಪಾತ್ರೆಗಳು ಮತ್ತು ಸುಮಾರು ಒಂದು ಲಕ್ಷ ದಿರ್ಹಮ್ ಮೌಲ್ಯದ ಇತರ ವ್ಯಾಪಾರ ಸರಕುಗಳು ಇದ್ದವು. ಈ ತಂಡವು ಕರ್ದಾ ಚಿಲುಮೆಯ ಬಳಿ ಇಳಿಯುತ್ತಿದ್ದಾಗ, ಹಝ್‌ರತ್ ಝೈದ್ ಬಿನ್ ಹಾರಿಸಾ(ರ) ಮದೀನದ ಮಿತಿಯಲ್ಲಿ ಖುರೈಶ್ ತಂಡವನ್ನು ತಡೆದರು. ಎಲ್ಲಾ ಸರಕು ಮತ್ತು ವ್ಯಾಪಾರವನ್ನು ಖುರೈಷಿಗಳಿಂದ ಕಸಿದುಕೊಂಡು ಮದೀನಾಗೆ ತರಲಾಯಿತು. ಬದ್ರ್ ಕದನದಲ್ಲಿ ಅತ್ಯಂತ ಭೀಕರವಾದ ಸೋಲಿನ ನಂತರ, ಖುರೈಷ್ ಜನರಿಗೆ ಕರ್ದಾ ಘಟನೆಯು ದೊಡ್ಡ ನಷ್ಟವಾಗಿತ್ತು. ಅದೇನೆಂದರೆ, ಆ ಸಮಯದಲ್ಲಿ ಅವರು ಮದೀನಾಗೆ ಹತ್ತಿರವಾಗಿದ್ದರು ಮತ್ತು ಅವರ ಉರಿಯುತ್ತಿರುವ ಸೇಡು ದ್ವಿಗುಣಗೊಂಡಿತು. ಉಹುದ್ ಆಕ್ರಮಣಕ್ಕೆ ಈ ಘಟನೆಯೂ ಒಂದು ಕಾರಣವಾಗಿತ್ತು.

(ಗಝ್ವಾತ್ ವ ಸರಾಯಾ, ಅಲ್ಲಾಮಾ ಮುಹಮ್ಮದ್ ಅಝ್‌ಹರ್ ಫರೀದ್, ಪುಟ–156–157, ಫರೀದೀಯಾ ಪ್ರಿಂಟಿಂಗ್ ಪ್ರೆಸ್ ಸಾಹಿವಾಲ್)

ಆದಾಗ್ಯೂ, ಇದಲ್ಲದೇ ಇತರ ಅನೇಕ ಕಾರಣಗಳಿಂದ ಖುರೈಶಿಯರು ಯುದ್ಧದ ತಯಾರಿ ಮಾಡುತ್ತಿದ್ದರು. ಲಾಲಸೆ ತೋರಿಸಿ, ಅಭಿಮಾನ ಉಂಟುಮಾಡಿಸಿ ಆಸುಪಾಸಿನ ಗೋತ್ರಗಳನ್ನು ಅವರು ತಮ್ಮ ಜೊತೆ ಸೇರಿಸಿದರು, ಇದನ್ನು ಈ ಕೆಳಗಿನಂತೆ ವಿವರಿಸಲಾಗಿದೆ: ಹಝ್‌ರತ್ ಪೈಗಂಬರ್(ಸ) ಅವರೊಂದಿಗೆ ನಿರ್ಣಾಯಕ ಯುದ್ಧಕ್ಕಾಗಿ ಬಂಡವಾಳವನ್ನು ಸಂಗ್ರಹಿಸಿದಾಗ, ಆಗ ಮುಂದಿನ ಹಂತದ ತಯಾರಿ ಪ್ರಾರಂಭವಾಯಿತು. ಖುರೈಷಿಗಳು ಯುದ್ಧಕ್ಕಾಗಿ ಸಿದ್ಧವಾಗಿದ್ದಲ್ಲದೆ ಅವರು ಸುತ್ತಮುತ್ತಲಿನ ಪ್ರದೇಶದ ವಿವಿಧ ಗೋತ್ರಗಳನ್ನು ಸಹ ಈ ಯುದ್ಧದಲ್ಲಿ ಸೇರಿಸಿಕೊಳ್ಳಲು ಅನೇಕ ರೀತಿಯ ವಿಧಾನಗಳನ್ನು ರೂಪಸಿಕೊಂಡರು. ಕೆಲವರ ಬಳಿ ಪ್ರತ್ಯೇಕವಾಗಿ ಮತ್ತು ಕೆಲವರಿಗೆ ನಿಯೋಗದ ರೂಪದಲ್ಲಿ ಹೋದರು. ಕೆಲವರಿಗೆ ಲಾಲಾಸೆ ತೋರಿಸಿದರೆ ಇನ್ನು ಕೆಲವರಿಗೆ ಧಾರ್ಮಿಕ ಮತ್ತು ಪ್ರಾದೇಶಿಕ ಗೌರವ ಹಾಗೂ ಒಗ್ಗಟ್ಟಿನ ಆಮಿಷವನ್ನು ತೋರಿಸಿ ಸೇರಿಸಿಕೊಂಡರು. ಈ ಕೆಲಸಕ್ಕೆ ಅಮ್ರ್ ಬಿನ್ ಆಸ್, ಹುಬೈರಾ ಬಿನ್ ಅಬಿ ವಹ್ಬವರ್ ಅಬ್ದುಲ್ಲಾ ಬಿನ್ ಝಿಬಅ್‌ರಾ, ಮುಸಾಫಿಹ್ ಬಿನ್ ಅಬ್ದ್ ಮನಾಫವ್ ಮತ್ತು ಅಬು ಉಝಾ ಜುಮಾಹಿ ಮೊದಲಾದವರನ್ನು ಕಳುಹಿಸಲಾಯಿತು. ಈ ಅಬು ಉಜ್ಜಾ ಜುಮಾಹಿ ಅವರನ್ನು ಹಝ್‌ರತ್ ಪೈಗಂಬರ್(ಸ) ರವರು ಬದ್ರ್‌ನ ಕೈದಿಗಳಿಂದ ಮುಕ್ತಗೊಳಿಸಿದ್ದರು. ಆ ಸಮಯದಲ್ಲಿ, ಅವನು ಹಝ್‌ರತ್ ಪೈಗಂಬರ್(ಸ) ಹೇಳಿದನು: ಓ ಮುಹಮ್ಮದ್, ಸಲ್ಲಲ್ಲಾಹು ಅಲೈಹಿವ ಸಲ್ಲಮ್ ನನಗೆ ಐದು ಹೆಣ್ಣುಮಕ್ಕಳಿದ್ದಾರೆ, ನನ್ನನ್ನು ಹೊರತುಪಡಿಸಿ ಅವರಿಗೆ ಯಾರೂ ಪೋಷಿಸುವವರಿಲ್ಲ. ನನ್ನನು ಕ್ಷಮಿಸಿ. ಅದಕ್ಕೆ ಹಝ್‌ರತ್ ಪೈಗಂಬರ್(ಸ)ರವರು ಅವರನ್ನು ಕ್ಷಮಿಸಿದ್ದಲ್ಲದೆ, ಫಿದ್ಯವಿಲ್ಲದೆ ಬಿಡುಗಡೆ ಮಾಡಿದರು. ಇದು ಹಝ್‌ರತ್ ಪೈಗಂಬರ್(ಸ) ಅವರ ಮಾದರಿಯಾಗಿದೆ. ಆ ಸಮಯದಲ್ಲಿ, ಅವನು ಭವಿಷ್ಯದಲ್ಲಿ ನಾನು ಹಝ್‌ರತ್ ಪೈಗಂಬರ್(ಸ) ಅವರ ವಿರುದ್ಧ ಹೋರಾಡುವುದಿಲ್ಲ ಅಥವಾ ಅವರ ವಿರುದ್ಧ ಯಾರಿಗೂ ಸಹಾಯ ಮಾಡುವುದಿಲ್ಲ ಎಂದು ಭರವಸೆ ನೀಡಿದ್ದನು, ಆದರೆ ಉಹದ್ ಯುದ್ಧದ ಸಂದರ್ಭದಲ್ಲಿ ಸಫ್ವಾನ್ ಬಿನ್ ಉಮಯ್ಯ ನಿಂದ ಬಹುಮಾನದ ಲಾಲಾಸೆಯಿಂದಗಿ ತನ್ನ ಈ ವಾಗ್ದಾನವನ್ನು ಮುರಿದನು ಮತ್ತು ಅರಬ್ಬರನ್ನು ತನ್ನ ಕವಿತೆಗಳ ಮೂಲಕ ಸೇಡು ತೀರಿಸಿಕೊಳ್ಳಲು ಪ್ರಚೋದಿಸಲು ಪ್ರಾರಂಭಿಸಿದನು. ಹೀಗೆ ಈ ಕವಿಗಳು ಹೋಗಿ ಬುಡಕಟ್ಟುಗಳನ್ನು ಉತ್ತೇಜಿಸುತ್ತಿದ್ದರು. ಅವರು ಗತಗಾಲವನ್ನು ನೆನಪಿಸಿ ಉತ್ತೇಜಿಸುತ್ತಿದ್ದರು ಮತ್ತು ಅವರೊಂದಿಗೆ ಸೇರಿಕೊಳ್ಳಲು ಆಹ್ವಾನಿಸುತ್ತಿದ್ದರು. ಕಿನಾನಾ, ತಹಾಮಾ ಮತ್ತು ಇತರ ಗೋತ್ರಗಳ ಅಸಂಖ್ಯಾತ ಜನರು ಅವರೊಂದಿಗೆ ಸಮ್ಮತಿಸಿದರು ಮತ್ತು ಮದೀನಾದಲ್ಲಿ ರಕ್ತಪಾತ ನಡೆಸಲು ಖಚಿತಪಡಿಸಿಕೊಂಡರು, ಖಚಿತಪಡಿಸಿದ್ದಲ್ಲದೆ ಅವರೊಂದಿಗೆ ಸೇರಿಕೊಂಡರು. (ಕಿತಾಬುಲ್ ಮಘಾಜಿ, ಸಂಪುಟ–1, ಪುಟಗಳು 110–111, ಬದ್ರ್ ಅಲ್–ಖಿತಾಲ್, ಆಲಂ ಅಲ್–ಕುತುಬ್, ಬೈರುತ್ 1984) (ದಾಯೆರಾ ಮಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–6, ಪುಟ–436 ಬಝ್ಮ್ ಇಖ್ಬಾಲ್ ಲಾಹೋರ್ 2022)

ಸತ್ಯವಿಷೇಧಿಗಳು ಯುದ್ಧಕ್ಕೆ ಮಾಡುತ್ತಿದ್ದ ಸಿದ್ಧತೆಗಳನ್ನು ಹಝ್‌ರತ್ ಅಬ್ಬಾಸ್(ರ) ಅವರು ಹಝ್‌ರತ್ ಪೈಗಂಬರ್(ಸ.ಅ) ಅವರಿಗೆ ತಿಳಿಸಿದ್ದು ಈ ಕೆಳಗಿನಂತೆ ವಿವರಿಸಲಾಗಿದೆ: ಮಕ್ಕಾದಲ್ಲಿದ್ದ ಅವರ ಚಿಕ್ಕಪ್ಪ ಹಝ್‌ರತ್ ಅಬ್ಬಾಸ್(ರ) ಅವರು ಖುರೈಷಿಗಳ ಬಗ್ಗೆ ಮಾಹಿತಿಯನ್ನು ಕಳುಹಿಸಿದರು. ಹಝ್‌ರತ್ ಅಬ್ಬಾಸ್(ರ) ಅವರು ಈ ಮಾಹಿತಿಯನ್ನು ಹಝ್‌ರತ್ ಪೈಗಂಬರ್(ಸ) ಅವರಿಗೆ ಪತ್ರದ ಮೂಲಕ ತಿಳಿಸಿದರು, ಅವರು ಬನು ಫಿಫಾರ್‌ನಿಂದ ಒಬ್ಬ ವ್ಯಕ್ತಿಗೆ ಕಳುಹಿಸಿದರು. ಹಝ್‌ರತ್ ಅಬ್ಬಾಸ್(ರ) ಅವರು ಈ ಪತ್ರವನ್ನು ತೆಗೆದುಕೊಂಡು ಹೋಗಲು ಈ ವ್ಯಕ್ತಿಯನ್ನು ನೇಮಿಸಿಕೊಂಡಿದ್ದರು ಮತ್ತು ಅವರು ಮದೀನಾಗೆ ತಲುಪಲು ಮತ್ತು ಪತ್ರವನ್ನು ಅವರಿಗೆ ನೀಡಲು ಮೂರು ಹಗಲು ರಾತ್ರಿ ನಿರಂತರವಾಗಿ ಪ್ರಯಾಣಿಸಬೇಕೆಂದು ಷರತ್ತು ವಿಧಿಸಿದ್ದರು. ಆದ್ದರಿಂದ ಅವರು ಹಗಲು ರಾತ್ರಿ ಪ್ರಯಾಣ ಮಾಡಿದರು ಮತ್ತು ಮೂರನೇ ದಿನ ಅವರು ಹಝ್‌ರತ್ ಪೈಗಂಬರ್(ಸ) ಅವರ ಸೇವೆಗೆ ತಲುಪಿದರು. ಆ ಸಂದರ್ಭದಲ್ಲಿ ಹಝ್‌ರತ್ ಪೈಗಂಬರ್(ಸ) ಅವರು ಖುಬಾದಲ್ಲಿದ್ದರು. ಈ ವ್ಯಕ್ತಿಯು ಈ ಪತ್ರವನ್ನು ಅವರಿಗೆ ತಲುಪಿಸಿದಾಗ, ಅವರು(ಸ) ಅದರ ಮುದ್ರೆಯನ್ನು ಮುರಿದು ನಂತರ ಉಬೈ ಬಿನ್

ಕಅಬ್ ಅವರಿಗೆ ಪತ್ರವನ್ನು ನೀಡಿ ಅದನ್ನು ಪಠಿಸಲು ಹೇಳಿದರು. ಉಬೈ ಬಿನ್ ಕಅಬ್ ಅವರಿಗೆ ಈ ಪತ್ರವನ್ನು ಓದಿದರು. ಈ ಪತ್ರ ಮತ್ತು ಸುದ್ದಿಯನ್ನು ಮರೆಮಾಡಲು ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಉಬೈ(ರ) ಅವರಿಗೆ ಆದೇಶಿಸಿದರು.

(ಸೀರತ್ ಅಲ್-ಹಲ್ಬಿಯಾಹ್, ಸಂಪುಟ 2, ಪುಟ 296, ದಾರುಲ್ ಕುತುಬ್ ಅಲ್-ಇಲಾಮಿಯಾ)

ಇನ್ನೊಂದೆಡೆ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಅವರು ಸ್ವತಃ ಸಅದ್ ಬಿನ್ ರಬಿಅ ಅವರ ಮನೆಗೆ ಹೋಗಿ ಹಝ್ರತ್ ಅಬ್ಬಾಸ್(ರ) ಅವರ ಪತ್ರದ ಬಗ್ಗೆ ನಾನು ಇದರಲ್ಲಿ ಒಳ್ಳೆಯ ಸುದ್ದಿ ಇರುಬಹುದು ಎಂದು ಆಶಿಸುತ್ತೇನೆ ನೀವು ಈ ಸುದ್ದಿನ್ನು ರಹಸ್ಯವಾಗಿಡಬೇಕು ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಸಾದ್ ಅವರ ಮನೆಗೆ ಭೇಟಿ ನೀಡಿದಾಗ, ಅವರ ಪತ್ನಿ ಅವರ ಬಳಿಗೆ ಬಂದು ಹೇಳಿದರು: ಹಝ್ರತ್ ಪೈಗಂಬರ್(ಸ) ಏನು ಹೇಳಿದ್ದಾರೆ? ನಾನು ಮನೆಯೊಳಗಿಂದ ಎಲ್ಲಾ ವಿಷಯಗಳನ್ನು ಆಲಿಸಿದ್ದೇನೆ. ಅದಕ್ಕೆ ಸಾದ್ ಹೇಳಿದರು: ನಿಮಗೆ ಅದರಿಂದ ಏನು? ಅವರು ಹೇಳಿದರು, ನಾನು ಎಲ್ಲಾ ವಿಷಯಗಳನ್ನು ಕೇಳಿದ್ದೇನೆ ಮತ್ತು ಅವರು ಎಲ್ಲ ವಿಷಯಗಳನ್ನೂ ಹೇಳಿದಾಗ ಸಾದ್ ಇನ್ನಾಲಿಲ್ಲಾಹ್ ಎಂದು ಹೇಳಿ, ನೀನು ನಮ್ಮ ಮಾತುಗಳನ್ನು ಕೇಳುತ್ತೀಯ ಎಂದು ನಾನು ಭಾವಿಸಿರಲಿಲ್ಲ. ಅವರು ತಮ್ಮ ಪತ್ನಿಯನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕರೆದೊಯ್ದು ಅವರ ಈ ಪ್ರಕರಣವನ್ನು ವಿವರಿಸಿ ಹೇಳಿದರು: ಯಾ ರಸೂಲಲ್ಲಾಹ್(ಸ)! ಈ ಮಾತು ಜನರಲ್ಲಿ ಹರಡುತ್ತದೆ ಎಂದು ನಾನು ಹೆದರುತ್ತಿದ್ದೆ ಮತ್ತು ನಾನು ಈ ರಹಸ್ಯವನ್ನು ಬಹಿರಂಗಪಡಿಸಿದ್ದೇನೆ ಎಂದು ನೀವು(ಸ) ಯಾಚಿಸಬಹುದು ಎಂಬ ಭಯ ನನಗಿದೆ. ನೀವು(ಸ) ಇದನ್ನು ರಹಸ್ಯವಾಗಿಡಲು ನನಗೆ ಆಜ್ಞಾಪಿಸಿದ್ದೀರಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, ಸರಿ ಹೋಗಲಿಬಿಡು. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ. 182-183, ದಾರುಲ್-ಕುತುಬ್ ಇಲ್‌ಮಿಯಾ ಬೈರುತ್ ಲೆಬನಾನ್, 1993)

ಈಗ ಈ ಮಹಿಳೆಗೆ ಎಚ್ಚರಿಕೆಯೂ ಸಹ ನೀಡಿರಬಹುದು. ಒಂದೆಡೆ ಹಝ್ರತ್ ಪೈಗಬಂರ್(ಸ)ರು ಈ ಮುಂಜಾಗ್ರತಾ ಕ್ರಮ ಕೈಗೊಂಡರೆ ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ)ರಿಗೆ ಯಾವುದೇ ಒಳ್ಳೆಯ ವಾರ್ತೆ ಲಭಿಸಿಲ್ಲವೆಂಬ ವದಂತಿಯನ್ನು ಯಹೂದಿಯರು ಮತ್ತು ಕಪಟವಿಶ್ವಾಸಿಗಳು ಹರಡಿದರು. ಅವರು ಈ ಸುದ್ದಿಯನ್ನು ರಂಗೇರಿಸಿ ಎಲ್ಲೆಡೆ ಹರಡಿ ಮುಸ್ಲಿಮರನ್ನು ಗಾಬರಿಗೊಳಿಸಲು ಪ್ರಯತ್ನಿಸಿದರು. ಇದರಿಂದ ಪ್ರತಿಯೊಬ್ಬರು ಜಾಗರೂಕರಾದರು. ಮಕ್ಕಾದ ಮುಶ್ರಿಕರು ಯುದ್ಧಕ್ಕಾಗಿ ಬರುತ್ತಿದ್ದಾರೆ ಎಂಬ ಗದ್ದಲವೆದ್ದಿತ್ತು. (ದಾಯೆರಾ ಮಾರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾ(ಸ), ಸಂಪುಟ-6, ಪುಟ-443, ಪ್ರಕಾಶಕರು ಬಝ್ಮೆ ಇಕ್ಬಾಲ್, ಲಾಹೋರ್ 2022)

ಅಲ್ಲಾಮಾ ಇಬ್ನೆ ಅಬ್ದುಲ್ ಬರ್ಕಾ ಹೇಳುತ್ತಾರೆ ಹಝ್ರತ್ ಅಬ್ಬಾಸ್(ರ) ಬಹುದೇವತಾವಾದಿಗಳ ಸುದ್ದಿಗಳನ್ನು ಬರೆದು ಹಝ್ರತ್ ಪೈಗಂಬರ್(ಸ) ಅವರಿಗೆ ಕಳುಹಿಸುತ್ತಿದ್ದರು. ಮೆಕ್ಕಾದ ಮುಸ್ಲಿಮರು ಅಬ್ಬಾಸ್(ರ) ಅವರಿಗೆ ತಮ್ಮ ಬೆಂಬಲವೆಂದು ಪರಿಗಣಿಸುತ್ತಿದ್ದರು, ಆದರೆ ಅಬ್ಬಾಸ್(ಸ) ನಾನು ಮದೀನಾಗೆ ಅವರ(ಸ) ಬಳಿಗೆ ಹೋಗಬೇಕೆಂದು ಬಯಸಿದ್ದರು, ಆದರೆ ಹಝ್ರತ್ ಪೈಗಂಬರ್(ಸ) ಅವರಿಗೆ ನೀವು ಮಕ್ಕಾದಲ್ಲಿ ಉಳಿಯುವುದು ಉತ್ತಮ ಎಂದು ಬರೆದರು. ಹಝ್ರತ್ ಅಬ್ಬಾಸ್(ರ) ಅವರು ಕಳುಹಿಸಿದ ಸುದ್ದಿ ಬಹಳ ವಿವರವಾಗಿತ್ತು. ಪತ್ರವೊಂದರಲ್ಲಿ, ಖುರೈಷಿಗಳ ಸೈನ್ಯವು ನಿಮಗಾಗಿ ಹೊರಟಿದೆ, ಆದ್ದರಿಂದ ಅವರು ಬರುವವರೆಗೆ ಅವರೊಂದಿಗೆ ಹೋರಾಡಲು ಸಾಧ್ಯವಾದಷ್ಟು ಸಿದ್ಧರಾಗಿರಿ. ಇದು ಒಟ್ಟು ಮೂರು ಸಾವಿರ ಸೈನ್ಯವಾಗಿದೆ, ಅವರ ಮುಂದೆ ಇನ್ನೂರು ಕುದುರೆಗಳು, ಏಳುನೂರು ಶಸ್ತ್ರಸಜ್ಜಿತ ಮತ್ತು ಮೂರು ಸಾವಿರ ಒಂಟೆಗಳು ಮತ್ತು ಅವರು ತಮ್ಮ ಎಲ್ಲಾ ಆಯುಧಗಳನ್ನು ತಮ್ಮೊಂದಿಗೆ ತರುತ್ತಿದ್ದಾರೆ ಎಂದು ಬರೆದಿದ್ದರು. (ಅಸ್ಸೀರತುನ್ನಬವೀಯಾ, ಅಲೀ ಮುಹಮ್ಮದ್ ಅಸ್ಸಲಾಬಿ ಅನುವಾಕ, ಸಂಪುಟ-2, ಪುಟ-561, ದಾರುಸ್ಸಲಾಮ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ತಮ್ಮ ಸೀರತ್ ಖಾತಮನ್ನಬೀಈನ್(ಸ)ನಲ್ಲಿ ಹಝ್ರತ್ ಅಬ್ಬಾಸ್(ರ) ಅವರ ಮಾಹಿತಿಯನ್ನು ಉಲ್ಲೇಖಿಸುವಾಗ ಈ ರೀತಿ ಬರೆದಿದ್ದಾರೆ: "ಬದ್ರ್ ಯುದ್ಧದ ಸಮಯದಲ್ಲಿ ಉಲ್ಲೇಖಿಸಲಾದ ವ್ಯಾಪಾರ ತಂಡದ ಲಾಭದ ಒಟ್ಟು ಮೌಲ್ಯ 50,000 ದಿನಾರ್ ಆಗಿತ್ತು. ಮಕ್ಕಾದ ನಾಯಕರ ನಿರ್ಧಾರದ ಪ್ರಕಾರ, ದಾರುನ್ನದ್‌ವಃದಲ್ಲಿದ್ದ ಮುಸಲ್ಮಾನರ ವಿರುದ್ಧದ ಆಕ್ರಮಣದ ತಯಾರಿಯಲ್ಲಿ ಸುರಕ್ಷಿತವಾಗಿ ಇತ್ತು. ಈಗ ಈ ಹಣವನ್ನು ತೆಗೆದುಕೊಳ್ಳಲಾಯಿತು ಮತ್ತು ಯುದ್ಧದ ಸಿದ್ಧತೆಗಳು ಬಹಳ ಹುರುಪಿನಿಂದ ಪ್ರಾರಂಭವಾಯಿತು. ಮುಸ್ಲಿಮರಿಗೆ ಈ ತಯಾರಿಯ ಬಗ್ಗೆ ತಿಳಿಯುತ್ತಿರಲಿಲ್ಲ ಮತ್ತು ಅವಿಶ್ವಾಸಿಗಳ ಸೈನ್ಯವು ಮುಸ್ಲಿಮರ ದ್ವಾರಗಳ ತನಕ ತಲುಪುತ್ತಿದ್ದರು, ಆದರೆ ಹಝ್ರತ್ ಪೈಗಂಬರ್(ಸ.ಅ) ಅವರ ಎಚ್ಚರಿಕೆಯಿಂದಾಗಿ ಅವರು ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದರು, ಅಂದರೆ, ಅವರು(ಸ) ತಮ್ಮ ಮನಸ್ಸಿನಿಂದ ಅವರೊಂದಿಗೆ ಇದ್ದ ಅವರ ಚಿಕ್ಕಪ್ಪ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್(ರ) ಅವರನ್ನು ಮಕ್ಕಾದಲ್ಲಿ ಉಳಿಯಲು ಒತ್ತಾಯಿಸಿದರು. ಮತ್ತು ಅವರು ಖುರೈಷಿಗಳ ಚಲನವಲನಗಳ ಬಗ್ಗೆ ಅವರಿಗೆ ತಿಳಿಸುತ್ತಲೇ ಇದ್ದರು. ಆದ್ದರಿಂದ, ಈ ಸಂದರ್ಭದಲ್ಲಿ, ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್ ಅವರು ಬನೂ ಗಫ್ಫಾರ್ ಗೋತ್ರದ ಸಾರಥಿಯನ್ನು ಒಂದು ದೊಡ್ಡ ಬಹುಮಾನವನ್ನು ನೀಡುವುದಾಗಿ ಭರವಸ ನೀಡಿ ಮದೀನಾದ ಕಡೆಗೆ ಕಳುಹಿಸಿದರು ಮತ್ತು ಖುರೈಷಿಗಳ ಈ ಉದ್ದೇಶವನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ಪತ್ರದ ಮೂಲಕ ತಿಳಿಸಿದರು. ಮತ್ತು ಮೂರು ದಿನಗಳೊಳಗೆ ಈ ಪತ್ರವನ್ನು ನಿಮಗೆ ತಲುಪಿಸುವಂತೆ ಸಂದೇಶವಾಹಕರನ್ನು ಬಲವಾಗಿ ಒತ್ತಾಯಿಸಿದರು. ಈ ಸಂದೇಶವಾಹಕನು ಮದೀನಾಗೆ ತಲುಪಿದಾಗ, ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವಸಲ್ಲಮರು) ಮದೀನಕ್ಕೆ ಸಮೀಪವಿರುವ ಖುಬಾಗೆ ಭೇಟಿ ನೀಡಿದ್ದರು. ಹೀಗಾಗಿ ಈ ಸಂದೇಶವಾಹಕನು ಹಝ್ರತ್ ಪೈಗಂಬರ್(ಸ) ಅವರ ಬಳಿ ಖುಬಾಗೆ ತಲುಪಿ ಈ ಮೊಹರು ಪತ್ರವನ್ನು ಅವರ ಮುಂದೆ ಪ್ರಸ್ತುತಪಡಿಸಿದನು. ಅವರು ತಕ್ಷಣವೇ ಈ ಪತ್ರವನ್ನು ತಮ್ಮ ವಿಶೇಷ ಲೇಖಕರಾದ ಉಬೈ ಬಿನ್ ಕಅಬ್ ಅನ್ಸಾರಿ ಅವರಿಗೆ ನೀಡಿದರು ಮತ್ತು ಅದನ್ನು ಓದಲು ಮತ್ತು ಏನು ಬರೆದಿದ್ದಾರೆ ಎಂದು ಹೇಳಲು ಹೇಳಿದರು. ಉಬೈ ಪತ್ರವನ್ನು ಓದಿದರು ಮತ್ತು ಅದರಲ್ಲಿ ಮಕ್ಕಾದಿಂದ ಖುರೈಷಿಗಳ ಸೈನ್ಯ ಬರುತ್ತಿದೆ ಎಂಬ ಭಯಾನಕ ಸುದ್ದಿ ಇತ್ತು. ಪತ್ರವನ್ನು ಕೇಳಿದ ಹಝ್ರತ್ ಪೈಗಂಬರ್(ಸ)ರು ಉಬೈ ಬಿನ್ ಕಅಬ್‌ಗೆ ಅದರ ವಿಷಯವನ್ನು ಯಾರಿಗೂ ತಿಳಿಸಬಾರದು ಎಂದು ಒತ್ತಾಯಿಸಿದರು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ 482-483)

ಆದಾಗ್ಯೂ, ಈ ಸೈನ್ಯವು ಹೊರಟುಹೋಯಿತು ಮತ್ತು ಅದರ ವಿವರಣೆಯಲ್ಲಿ ಖುರೈಷರ ಸೈನ್ಯವು 5 ನೇ ಶವ್ವಾಲ್‌ನಲ್ಲಿ ಮಕ್ಕಾವನ್ನು ತೊರೆದಿದೆ ಎಂದು ಬರೆಯಲಾಗಿದೆ.

(ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-183, ದಾರುಲ್ ಕುತುಬ್ ಅಲ್-ಇಲ್ಮೀಯಾ)

ಈ ಯುದ್ಧದಲ್ಲಿ ಖುರೈಷಿಗಳ ನಾಯಕತ್ವವು ಅಬು ಸುಫ್ಯಾನ್‌ನ ಕೈಯಲ್ಲಿತ್ತು. ಕುದುರೆಸವಾರರ ಮೇಲ್ವಿಚಾರಕರು ಖಾಲಿದ್ ಬಿನ್ ವಲೀದ್ ಮತ್ತು ಧ್ವಜಧಾರಿ ಬನೂ ಅಬ್ದ್ ಅಲ್-ದಾರ್ ಆಗಿದ್ದರು. ಹಾಗೆಯೇ ಕತ್ತಿಗಳನ್ನು ಹಿಡಿದು, ರಕ್ಷಾಕವಚಗಳನ್ನು ಧರಿಸಿ, ಗುರಾಣಿಗಳನ್ನು ಹಿಡಿದು ಬಿಲ್ಲು ಬಾಣಗಳನ್ನು ಹಿಡಿದು, ಸೇಡು ತೀರಿಸಿಕೊಳ್ಳುವ ಉತ್ಸಾಹವನ್ನು ಎದೆಯಲ್ಲಿ ತುಂಬಿಕೊಂಡು, ಸಾವಿರಾರು ಯೋಧರು ಮಕ್ಕಾದಿಂದ ಮದೀನಾಕ್ಕೆ ಹಝ್ರತ್ ಪೈಗಂಬರ್(ಸ) ವಿರುದ್ಧ ಹೋರಾಡಲು ಹೊರಟರು.

ಅವರಲ್ಲಿ ಎರಡು ಸಾವಿರದ ಒಂಭೈನೂರು ಮಂದಿ ಖುರೈಷರು ಮತ್ತು ಅವರ ಅನುಯಾಯಿಗಳು ಮತ್ತು ಇತರ ಗೋತ್ರಗಳಿಂದ ಬಂದಿದ್ದರೆ, ನೂರು ಮಂದಿ ಕಿನಾನ ಗೋತ್ರಗಳಿಂದ ಬಂದವರು. ಮೊದಲೇ ಹೇಳಿದಂತೆ ಏಳುನೂರು ಕವಚಗಳು, ಇನ್ನೂರು ಕುದುರೆಗಳು ಮತ್ತು ಮೂರು ಸಾವಿರ ಒಂಟೆಗಳನ್ನು ತೆಗೆದುಕೊಂಡು ಹೋಗಲಾಯಿತು. ದಾರಿಯಲ್ಲಿ ಆಹಾರಕ್ಕಾಗಿ ವಧಿಸಬೇಕಾದ ಒಂಟೆಗಳಿದ್ದವು ಅದಲ್ಲದೆ ಅವರು ಆಡಲು ತಂಬೂರಿ ಮತ್ತು ಕುಡಿಯಲು ವಿಶೇಷ ಪ್ರಮಾಣದ ಶರಾಬನ್ನೂ ತಂದರು. (ದಾಯೆರಾ ಮುಆರಿಫ್, ಸೀರತ್ ಮುಹಮ್ಮದ್(ಸ), ಸಂಪುಟ-6, ಪುಟ-441, ಬಝ್ಮೆ ಇಖ್ಬಾಲ್ ಲಹೋರ್ 2022) (ಗಝ್ವಾ ಉಹುದ್ ಮುಹಮ್ಮದ್ ಅಹ್ಮದ್ ಬಾಶ್ಮೀಲ್, ಪುಟ-75)

ಒಂದು ಜೀವನ ಚರಿತ್ರೆಯ ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ: ಈ ಯುದ್ಧದಲ್ಲಿ ಖುರೈಷಿಗಳು ಹಝ್ರತ್ ಅಬ್ಬಾಸ್ ಅವರನ್ನು ತಮ್ಮೊಂದಿಗೆ ಕರೆದೊಯ್ಯಲು ಪ್ರಯತ್ನಿಸಿದರು ಆದರೆ ಅಬ್ಬಾಸ್ ತನ್ನನ್ನು ಕ್ಷಮಿಸಿ ಎಂದು ಹೇಳಿದರು ಮತ್ತು ಬದ್ರ್ ಯುದ್ಧದ ಸಂದರ್ಭದಲ್ಲಿ ಅವರಿಗೆ ಮಾಡಿದ ಖುರೈಷರ ಅಸಡ್ಡೆಯನ್ನು ಉಲ್ಲೇಖಿಸಿದರು ಅಂದರೆ ಅವರನ್ನು ಬಂಧಿಸಲಾಗಿತ್ತು ಯಾರೂ ಅವರನ್ನು ಬಿಡುಗಡೆಗೊಳಿಸಲು ಒಬ್ಬರು ಸಹಾಯ ಮಾಡಲಿಲ್ಲ. (ಸಿರತ್ ಅಲ್-ಹಲ್ಬಿಯಾಹ್, ಸಂಪುಟ 2, ಪುಟ 296, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಅನೇಕ ಮಹಿಳೆಯರೂ ಪ್ರತೀಕಾರದ ಉತ್ಸಾಹದಲ್ಲಿ ಪುರುಷರೊಂದಿಗೆ ಯುದ್ಧದಲ್ಲಿ ಹೋಗಬೇಕೆಂದು ಒತ್ತಾಯಿಸಿದರು, ಈ ಕುರಿತು ಮಜ್ಲಿಸ್ ಮುಶಾವಿರತ್ (ಸಮಾಲೋಚನ ಸಭೆ) ನಲ್ಲಿ ವ್ಯಕ್ತಿಯೊಬ್ಬರು ನಾವು ತಲೆಯ ಕಫನ್ ಹೊತ್ತಿಕೊಂಡು ಹೋಗುತ್ತಿದ್ದೇವೆ ಅವರು ಕೊಲ್ಲಲ್ಪಟ್ಟವರಿಗೆ ಪ್ರತೀಕಾರ ತೀರಿಸಲು ಸಾಧ್ಯವಾಗದಿದ್ದರೆ, ಅವರು ಜೀವಂತವಾಗಿ ಹಿಂತಿರುಗುವುದಿಲ್ಲ ಎಂದು ಹೇಳಿದನು. ಆದ್ದರಿಂದ, ಮಹಿಳೆಯರ ನೆರವು ನಮಗೆ ಉಪಯುಕ್ತವಾಗಿರುತ್ತದೆ. ಇದು ನಮ್ಮ ಚೈತನ್ಯವನ್ನು ಹೆಚ್ಚಿಸುತ್ತದೆ ಮತ್ತು ಬದ್ರ್ ಘಟನೆಗಳನ್ನು ನಮಗೆ ನೆನಪಿಸುವ ಮೂಲಕ ಮುಂದುವರಿಯಲು ಪ್ರೇರೇಪಿಸುತ್ತದೆ.

ನೌಫಲ್ ಬಿನ್ ಮುಆವಿಯಾ ದೇಲಿ ಹೇಳಿದರು ಈ ಮಹಿಳೆಯರು ನಮ್ಮ ಗೌರವ ಮತ್ತು ಘನತೆಯಾಗಿದ್ದಾರೆ, ನಾವು ಸೋಲಲ್ಪಟ್ಟರೆ ಅವರ ಅಗೌರವದಿಂದ ನಮ್ಮ ಗರ್ವವು ಮಣ್ಣುಪಾಲಾಗುತ್ತದೆ. ವಿಭಿನ್ನ ಅಭಿಪ್ರಾಯಗಳು ಹೊರಹೊಮ್ಮಿದವು. ಈ ಸಂದರ್ಭದಲ್ಲಿ ಅಬು ಸುಫ್ಯಾನ್‌ನ ಪತ್ನಿ ಹಿಂದ್ ಕೂಡ ಉಪಸ್ಥಿತರಿದ್ದಳು. ಈ ಎರಡು ಅಭಿಪ್ರಾಯಗಳು ಪುರುಷರಿಂದ ಬಂದಾಗ, ಈ ಮಹಿಳೆ ಹೇಳಿದಳು, ಓ ಜನರೇ! ನೀವು ಜೀವಂತವಾಗಿ ಹಿಂತಿರುಗುವುದಿಲ್ಲ ಎಂದು ಭಯಪಡಬೇಡಿ. ನೀವು ಬದ್ರ್‌ನಿಂದ ಸುರಕ್ಷಿತವಾಗಿ ಮರಳಿದ್ದೀರಿ ಮತ್ತು ನಿಮ್ಮ ಮಹಿಳೆಯರನ್ನೂ ನೋಡಿದ್ದೀರಿ. ನಾವು ಒಟ್ಟಿಗೆ ಈ ಯುದ್ಧಕ್ಕೆ ಹೋಗುವುದನ್ನು ನೀವು ನಿಷೇಧಿಸಲು ಸಾಧ್ಯವಿಲ್ಲ. ಬದ್ರ್‌ನಲ್ಲಿ ನೀವು ನಿಮ್ಮ ಮಹಿಳೆಯರನ್ನು ಹಿಂದಿರುಗಿಸಿದಾಗ ಇದು ನೀವು ಮಾಡಿದ ತಪ್ಪು. ಬದ್ರ್ ಯುದ್ಧದ ಸಮಯದಲ್ಲಿ ಈ ಮಹಿಳೆಯರು ನಿಮ್ಮೊಂದಿಗೆ ಇದ್ದಿದ್ದರೆ, ನೀವು ಜನರನ್ನು ಗೌರವದಿಂದ ಮುನ್ನಡೆಸುತ್ತಿದ್ದಿರಿ. ವಿಷಾಧದ ಸಂಗತಿ ಎಂದರೆ ಬದ್ರ್ ಮೈದಾನದಲ್ಲಿ ನಮ್ಮ ಆತ್ಮೀಯರು ಶತ್ರುಗಳಿಂದ ಕೊಲ್ಲಲ್ಪಟ್ಟರು.

(ಹಯಾತ್ ಮುಹಮ್ಮದ್(ಸ), ಮುಹಮ್ಮದ್ ಹುಸೇನ್ ಹೈಕಲ್, ಪುಟ 379, ಬುಕ್ ಕಾರ್ನರ್ ಝೀಲಂ)

ಆದಾಗ್ಯೂ, ಖುರೈಷರ ಮುಖ್ಯಸ್ಥರು ಹಿಂದ್‌ನ ಮಾತಿಗೆ ಒಪ್ಪಿದರು ಮತ್ತು ಮಹಿಳೆಯರನ್ನು ಸೈನ್ಯದೊಂದಿಗೆ ಕರೆದೊಯ್ಯಲು ಒಪ್ಪಿದರು. ಸೇನೆಯ ಜೊತೆಗಿರುವ ಮಹಿಳೆಯರ ಸಂಖ್ಯೆ ಹದಿನೈದು ಎಂದು ಹೇಳಲಾಗಿದೆ (ಗಝ್ವಾ ಉಹುದ್ ಮುಹಮ್ಮದ್ ಅಹ್ಮದ್ ಬಶ್ಮಾಯಿಲ್, ಪುಟ 76), ಇದರಲ್ಲಿ ಅಬು ಸುಫ್ಯಾನ್‌ನ ಪತ್ನಿ ಹಿಂದ್ ಬಿಂತ್ ಉತ್ಬಾಳನ್ನು ಸೇರಿಸಿದರು ಮತ್ತು ಹಾರಿಸ್ ಬಿನ್ ಹಿಶಾಮ್ ತನ್ನ ಪತ್ನಿ ಫಾತಿಮಾ

ಬಿಂತ್ ವಲೀದ್ ಅವರನ್ನು ಕರೆದುಕೊಂಡು ಹೋದರು. ಸಫ್ವಾನ್ ಬಿನ್ ಉಮಯ್ಯ ಅವರು ಅಬ್ದುಲ್ಲಾ ಬಿನ್ ಸಫ್ವಾನ್ ಅವರ ತಾಯಿಯಾದ ಅವರ ಪತ್ನಿ ಬರ್ಜಾ ಬಿಂತ್ ಮಸೂದ್ ಅವರನ್ನು ಕರೆದೊಯ್ದರು. ಅಮ್ರ್ ಬಿನ್ ಆಸ್ ತನ್ನ ಪತ್ನಿ ರೈತಾ ಬಿಂತ್ ಮುನಾಬಿಯೊಂದಿಗೆ ಹೊರಟರು ಮತ್ತು ತಲ್ಹಾ ಬಿನ್ ಅಬಿ ತಲ್ಹಾ ಅವರು ತಮ್ಮ ಪತ್ನಿ ಸಲಾಫಹ್ ಬಿಂತ್ ಸಾದ್ ಅವರನ್ನು ಕರೆದುಕೊಂಡು ಹೋದರು ಎಂದು ಇಬ್ನ್ ಇಸ್‌ಹಾಕ್ ಹೇಳಿದ್ದಾರೆ. ಅವಳು ತಲ್ಹಾನ ಗಂಡುಮಕ್ಕಳು ಮುಸಾಫಿ, ಜುಲಾಸ್ ಮತ್ತು ಕಿಲಾಬ್‌ನ ತಾಯಿಯಾಗಿದ್ದಳು ಮತ್ತು ಅವರೆಲ್ಲರೂ ಉಹುದ್ ದಿನದಂದು ಕೊಲ್ಲಲ್ಪಟ್ಟರು ಮತ್ತು ಬನೂ ಮಾಲಿಕ್ ಗೋತ್ರದ ಖುನಾಸ್ ಬಿಂತ್ ಮಾಲಿಕ್ ಅವರ ಪುತ್ರ ಅಬಿ ಅಝೀಝ್ ಬಿನ್ ಉಮೈರ್ ಅವರೊಂದಿಗೆ ಇದ್ದರು. ಅವರು ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ) ಅವರ ತಾಯಿ ಮತ್ತು ಬನೂ ಹಾರಿಸ್ ಗೋತ್ರದ ಉಮ್ರಾ ಬಿಂತ್ ಅಲ್ ಕಮಾಹ್ ಕೂಡ ಸೈನ್ಯದಲ್ಲಿದ್ದರು.

ಯುದ್ಧದ ಸಮಯದಲ್ಲಿ, ಹಿಂದ್ ಬಿಂತ್ ಉತ್ಬಾ ವಹ್‌ಶಿಯ ಬಳಿಗೆ ಬಂದಾಗ ಅಥವಾ ವಹ್‌ಶಿ ಆಕೆಯ ಬಳಿಗೆ ಹೋದಾಗ, ಅವಳು ಅವನಿಗೆ ಹೇಳುತ್ತಿದ್ದಳು, ಅಬು ದಸ್ಮಾ, ಇದು ವಹಶಿಯ ಉಪನಾಮವಾಗಿತ್ತು, ನಮ್ಮ ಹೃದಯಕ್ಕೆ ಸಾಂತ್ವನವನ್ನು ತರುವಂತಹದನ್ನು ಮಾಡು. ಇವನು ಅಬಿಸ್ಸಿನಿಯನ್ ಗುಲಾಮನಾಗಿದ್ದನು. ಹಬ್‌ಶಿಯು ಈಟಿಯನ್ನು ಹೊಂದಿದ್ದನು, ಅದು ಬಹಳ ಅಪರೂಪವಾಗಿ ತಪ್ಪಿಸಿಕೊಳ್ಳುತ್ತಿತ್ತು ಮತ್ತು ಯಾರನ್ನೂ ಜೀವಂತವಾಗಿ ಬಿಡುತ್ತಿರಲಿಲ್ಲ. ಹಬ್‌ಶಿ ಝುಬೈರ್ ಬಿನ್ ಮುತ್‌ಯಿಮ್‌ನ ಗುಲಾಮನಾಗಿದ್ದನು. ಅವನು ಹಬ್‌ಶಿಯನ್ನು ಕರೆದು ನೀನು ಕೂಡ ಸೈನ್ಯದೊಂದಿಗೆ ಹೋಗು ಮತ್ತು ನೀನು ಹಂಝಾನನ್ನು ಕೊಂದರೆ ನಾನು ನಿನ್ನನ್ನು ಬಿಡುಗಡೆ ಮಾಡುತ್ತೇನೆ ಏಕೆಂದರೆ ಹಂಝಾ ನನ್ನ ಚಿಕ್ಕಪ್ಪ ತುಯ್ಮಾ ಬಿನ್ ಆದಿಯನ್ನು ಕೊಂದಿದ್ದನು ಎಂದು ಹೇಳಿದನು.

ಈ ಸೇನೆಯು ಮದೀನದ ಮುಂದಿರುವ ಉಹುದ್ ಮೈದಾನದಲ್ಲಿ ಸಬ್ಖಾದ ಮಧ್ಯಭಾಗದಲ್ಲಿ ಕನಾತ್ ಕಣಿವೆಯ ದಡದಲ್ಲಿ ಜಬಲ್ ಐನೈನ್‌ನಲ್ಲಿ ಬೀಡುಬಿಟ್ಟರು. ಸಬ್ಖಾ ಮದೀನಾದಲ್ಲಿ ಜಬಲ್ ಐನೈನ್ ಮತ್ತು ಜುರ್ಫ್ ಬಳಿಯಿರುವ ಸ್ಥಳವಾಗಿದೆ, ಮತ್ತು ಜುರ್ಫ್ ಮದೀನಾದಿಂದ ಮೂರು ಮೈಲುಗಳಷ್ಟು ಉತ್ತರಕ್ಕೆ ಒಂದು ಸ್ಥಳವಾಗಿದೆ ಮತ್ತು ಐನೈನ್ ಎಂಬುದು ಉಹುದ್ ಪರ್ವತದ ಹೆಸರಾಗಿದೆ. ಉಹುದ್ ಮತ್ತು ಅದರ ನಡುವೆ ಕಣಿವೆಯಿದೆ ಮತ್ತು ಉಹುದ್ ಮತ್ತು ಮದೀನಾ ನಡುವಿನ ಮದೀನಾದ ಮೂರು ಪ್ರಸಿದ್ಧ ಕಣಿವೆಗಳಲ್ಲಿ ಕನಾತ್ ಒಂದಾಗಿದೆ. (ಅಲ್–ಸಿರತುನ್ನಬವಿಯಾ ಲಿಇಬ್ನೆ ಹಿಶಾಮ್, ಪುಟ–522, ದರುಲ್ ಕುತುಬ್ ಇಲ್‌ಮಿಯಾ ಬೈರೂತ್) (ಫರ್ಹಾಂಗ್ ಸೀರತ್, ಪುಟಗಳು 87, 146, 216, 239, ಝ್ವಾರ ಅಕಾಡೆಮಿ ಕರಾಚಿ) (ಸೀರತ್ ಅಲ್–ಹಲ್ಬಿಯಾಹ್, ಪುಟ–2, ಸಂಪುಟ–2, 6 , ದಾರುಲ್ ಕುತುಬ್ ಅಲ್–ಇಲ್‌ಮಿಯಾ ಬೈರೂತ್)

ಇದು ಅದರ ಸ್ಥಳವಾಗಿದೆ.

ಹಝ್ರತ್ ಅಬ್ಬಾಸ್(ರ) ಖುರೈಶಿಯರ ಸೈನ್ಯದ ಕುರಿತು ಹಝ್ರತ್ ಪೈಗಂಬರ್(ಸ)ರಿಗೆ ವಿವರಗಳನ್ನು ಒದಗಿಸಿದರು ಮತ್ತು ಅಮ್ರ್ ಬಿನ್ ಸಾಲಿಂ ಹಝ್ರತ್ ಪೈಗಂಬರ್(ಸ)ರಿಗೆ ಮಕ್ಕಾದ ಮುಶ್ರಿಕರ ರವಾನೆಯ ಬಗ್ಗೆ ಸುದ್ದಿ ತಲುಪಿಸಿದರು. ಇದರ ಬಗ್ಗೆ ಅಬೂಸುಫ್‌ಯಾನಿಗೆ ಗೊತ್ತಾದಾಗ ತಬ್ಬಿಬ್ಬಾದನು. ಅದರ ವಿವರಣೆ ಹೀಗಿದೆ: ಅಮ್ರ್ ಬಿನ್ ಸಾಲಿಮ್ ತನ್ನ ಕೆಲವು ಸಂಗಡಿಗರೊಂದಿಗೆ ಝೀ ತುವಾ ಎಂಬ ಸ್ಥಳದಿಂದ ಖುರೈಶ್ ಸೈನ್ಯದಿಂದ ಬೇರ್ಪಟ್ಟು ಬೇಗ ಬೇಗ ಮದೀನಕ್ಕೆ ತಲುಪಿ ಹಝ್ರತ್ ಪೈಗಂಬರ್ ಸಲ್ಲಲ್ಲಹು ಅಲೈಹಿವ ಸಲ್ಲಮ್ ಅವರಿಗೆ ಅವಿಶ್ವಾಸಿಗಳ ಕಾರ್ಯಾಚರಣೆಯ ಬಗ್ಗೆ ಸುದ್ದಿ ನೀಡಿದನು. ಅಮ್ರ್ ಬಿನ್ ಸಾಲಿಮ್‌ನ ಈ ತಂಡವು ಮದೀನದಿಂದ ಹಿಂದಿರುಗುವಾಗ ಅಬವಾ ಎಂಬ ಸಥಳದಲ್ಲಿ ಅಬೂ ಸುಫ್ಯಾನ್‌ನ ಸೈನ್ಯದೊಂದಿಗೆ ರಾತ್ರಿಯ ಹೊತ್ತು ಮುಂದೆ ಸಾಗಿತು. ಅಂದರೆ ಅವರು ಅಲ್ಲಿರುವಾಗ ಅವರಿಗೆ ದಾಟಿ ಹೋದರು. ಮುಂಜಾನೆ ಅಬೂ ಸುಫ್ಯಾನ್ ಮಕ್ಕಾದ ಕಡೆಗೆ ಹೋದನು. ಅಬು ಸುಫ್ಯಾನ್‌ಗೆ ದಾರಿಯಲ್ಲಿ ಅಮ್ರ್ ಬಿನ್ ಸಾಲಿಮ್ ತನ್ನ ಕೆಲವು ಸಹಚರರೊಂದಿಗೆ ರಾತ್ರಿಯ ಹೊತ್ತಿಗೆ ಮಕ್ಕಾಕ್ಕೆ ಹೊರಟಿದ್ದಾರೆ ಎಂದು ತಿಳಿಸಲಾಯಿತು. ಅಬು ಸುಫ್ಯಾನ್ ಗಾಬರಿಗೊಂಡು ಹೇಳಿದನು: ಅವನು ಮುಹಮ್ಮದ್‌ನ ಬಳಿಗೆ ಹೋಗಿ ನಮ್ಮ ಮುಂಗಡವನ್ನು ಅವನಿಗೆ ತಿಳಿಸಿರಬೇಕು ಎಂದು ನಾನು ಅಲ್ಲಾಹನ ಮೇಲೆ ಪ್ರಮಾಣ ಮಾಡುತ್ತೇನೆ. ಅವನು ನಮ್ಮ ಬಗ್ಗೆ ಎಲ್ಲಾ ಮಾಹಿತಿಯನ್ನು (ಹಝ್ರತ್ ಪೈಗಂಬರ್) ಅವರಿಗೆ ನೀಡಿದ್ದಾನೆ ಮತ್ತು ಈಗಾಗಲೇ ಅವರನ್ನು ಎಚ್ಚರಿಸಿದ್ದಾನೆ. ಈಗ, ನಾವು ಬರುವ ಮೊದಲು, ಮುಸ್ಲಿಮರು ಕೋಟೆಗಳಲ್ಲಿ ತಮ್ಮನ್ನು ತಾವು ಭದ್ರಪಡಿಸಿಕೊಳ್ಳುತ್ತಾರೆ. ಈ ರೀತಿಯಾಗಿ, ನಾವು ಅವರಿಗೆ ಹಾನಿ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ನಮ್ಮ ಗುರಿಯಲ್ಲಿ ನಾವು ಯಶಸ್ವಿಯಾಗುವುದಿಲ್ಲ. ಸಫ್ವಾನ್ ಬಿನ್ ಉಮಯ್ಯ ತಕ್ಷಣವೇ ಹೇಳಿದನು: ಅವರು ಕ್ಷೇತ್ರದಲ್ಲಿ ನಮ್ಮೊಂದಿಗೆ ಹೋರಾಡಲು ಕೋಟೆಯಿಂದ ಹೊರಗೆ ಬರದಿದ್ದರೆ ಭಯಪಡುವ ಅಗತ್ಯವಿಲ್ಲ. ಅವರು ಎಂದಿಗೂ ಚೇತರಿಸಿಕೊಳ್ಳದ ಔಸ್ ಮತ್ತು ಖಝ್‌ರಜ್‌ನ ತಾಳೆ ತೋಟಗಳನ್ನು ನಾವು ಕಡಿದು ಹಾಕುತ್ತೇವೆ ಮತ್ತು ಅವರು ತಮ್ಮ ಸಂಪತ್ತು ಮತ್ತು ಧಾನ್ಯವನ್ನು ಕಳೆದುಕೊಳ್ಳುತ್ತಾರೆ ಮತ್ತು ಅವರು ತಮ್ಮ ಕೋಟೆಗಳಿಂದ ಮರುಭೂಮಿಯಲ್ಲಿ ಹೋರಾಡಲು ಬಂದರೆ, ಚಿಂತಿಸಬೇಕಾಗಿಲ್ಲ ನಮ್ಮ ಸಂಖ್ಯೆ ಹೆಚ್ಚಿದೆ, ಯುದ್ಧ ಸಾಮಾನುಗಳು ಹೆಚ್ಚಿವೆ, ಅವರಿಗೆ ಜೀವಹಾನಿ ಮತ್ತು ಧನ ನಷ್ಟ ಉಂಟುಮಾಡಲು ನಮಗೆ ಶಕ್ತಿಯಿದೆ. ಆದರೆ ಅವರಿಗೆ ಅದರ ಸಾಮರ್ಥ್ಯವಿಲ್ಲ. (ದಾಯೆರಾ ಮುಆರಿ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–6, ಪುಟ–443–444, ಬಝ್ಮ್ ಇಖ್ಬಾಲ್ ಲಾಹೋರ್ 2022)

ಹೀಗೆ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ಖುರೈಷಿಗಳು ಮದೀನಾದ ಕಡೆಗೆ ಸಾಗುತ್ತಿರುವಾಗ ಅಬುವಾ ಸ್ಥಳದಲ್ಲಿ ಬೀಡುಬಿಟ್ಟಾಗ, ಅಬೂಸುಫ್‌ಯಾನಿನ ಪತ್ನಿ ಹಿಂದ ಹೇಳಿದಳು: ನೀವು ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ತಾಯಿಯ ಖಬರನ್ನು ಅಗೆಯಿರಿ ಮತ್ತು ಅವರ ಮೃತದೇಹವನ್ನು ತಮ್ಮ ಬಳಿ ಇರಿಸಿರಿ ಹಾಗೂ ನಮ್ಮಲ್ಲಿ ಬಂಧಿತರಾಗುವ ಪ್ರತಿಯೊಬ್ಬರ ಬಿಡುಗಡೆಗಾಗಿ ಅವರ ತಾಯಿಯ ಒಂದು ಅವಯವವನ್ನು ನೀಡೋಣ. ಇದು ವಿಚಿತ್ರವಾದ ಪೈಶಾಚಿಕತನದ ಚಿಂತನೆಯಾಗಿತ್ತು. ಅಬೂ ಸುಫ್ಯಾನ್ ಈ ಮತನ್ನು ಖುರೈಶರಿಗೆ ತಿಳಿಸಿದಗ ಖುರೈಶರು ಅದನ್ನು ಒಪ್ಪಲಿಲ್ಲ. ಹಾಗೆ ಮಾಡಿದರೆ ಅವರು ನಮ್ಮವರ ಖಬರನ್ನು ಅಗೆಯುವರು ಎಂದು ಹೇಳಿದರು. (ಸಬ್ಲುಲ್ ಹುದಾ ವ ಅಲ್–ರಶಾದ್, ಸಂಪುಟ 4, ಪುಟ 183, ದಾರುಲ್ ಕಿತಾಬ್ ಅಲ್–ಇಲಾಮಿಯಾ)

ಇದು ತುಂಬಾ ಅಪಾಯಕಾರಿ ಅಭಿಪ್ರಾಯವಾಗಿದೆ ಇದನ್ನು ಅಂಗೀಕರಿಸಬೇಡಿ ಎಂದರು. ಆದಾಗ್ಯೂ, ಈ ಜನರು ದಾರಿಯಲ್ಲಿ ನಿಲ್ಲಿಸಿದಲ್ಲೆಲ್ಲಾ ಒಂಟೆಗಳನ್ನು ವಧಿಸುತ್ತಿದ್ದರು. ಮಹಿಳೆಯರು ಕವನಗಳನ್ನು ಹಾಡಿ ಮನವೊಲಿಸುತ್ತಿದ್ದರು ಮತ್ತು ಶರಾಬು ತುಂಬಿದ ಲೋಟಗಳನ್ನು ನೀಡುತ್ತಿದ್ದರು. ಶೋಕಾಗೀತೆಗಳನ್ನು ಹಾಡಿ ಸ್ವತಃ ದುಃಖದಿಂದ ನರಳುತ್ತಿದ್ದರು, ಇತರರನ್ನು ಹೆದರಿಸುತ್ತಿದ್ದರು ಮತ್ತು ಸೇಡು ತೀರಿಸಿಕೊಳ್ಳಲು ಉತ್ಸುಕಗೊಳಿಸುತ್ತಿದ್ದರು. (ಆಯೆರಾ ಮಾರಿಫ್, ಸೀರತ್ ಮುಹಮ್ಮದ್ ರಸುಲುಲ್ಲಾ(ಸ), ಸಂಪುಟ 6, ಪುಟ 441, ಬಾಝ್ಮ್ ಇಕ್ಬಾಲ್, ಲಾಹೋರ್ 2022)

ಅವಿಶ್ವಾಸಿಗಳ ಈ ತಂಡವು ಅದೇ ರೀತಿ ಮುನ್ನಡೆಯುತ್ತಲೇ ಇತ್ತು. ಮತ್ತೊಂದೆಡೆ ಮುಸಲ್ಮಾನರೂ ತಾವಾಗಿಯೇ ತಯಾರಿ ನಡೆಸುತ್ತಿದ್ದರು. ಈ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಫಝಾಲನ ಪುತ್ರರಾದ ಅನಸ್ ಮತ್ತು ಮೊನಸ್‌ನನ್ನು ಗುರುವಾರ ರಾತ್ರಿ ಹೊತ್ತು ಶವ್ವಾಲ್ ತಿಂಗಳ ಮೊದಲ ಹತ್ತು ದಿನಗಳಲ್ಲಿ ಬೇಹುಗಾರಿಕೆಗೆ ಕಳುಹಿಸಲ್ಪಟ್ಟರು. (ಸಬ್ಲುಲ್‌ಹುದಾ, ಸಂಪುಟ 4, ಪುಟ 183, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

"ಬಹುಶಃ ಇದೇ ಸಂದರ್ಭದಲ್ಲಿ ಮುಸ್ಲಿಮರ ಸಂಖ್ಯೆ ಮತ್ತು ಬಲವನ್ನು ಕಂಡುಹಿಡಿಯಲು, ಹಝ್ರತ್ ಪೈಗಂಬರ್(ಸ) ಅವರು ಮದೀನಾದ ಎಲ್ಲಾ ಮುಸ್ಲಿಂ ಜನಸಂಖ್ಯೆಯ ಜನಗಣತಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಜನಗಣತಿ ನಡೆಸಿದಾಗ, ಆ ಸಮಯದಲ್ಲಿ ಒಟ್ಟು ಹದಿನೈದು ನೂರು ಮುಸ್ಲಿಮರು ವಾಸಿಸುತ್ತಿದ್ದರು ಎಂದು ಗೊತ್ತಾಯಿತು. ಆಗಿನ ಪರಿಸ್ಥಿತಿಯಲ್ಲಿ ಈ ಸಂಖ್ಯೆಯು ಬಹಳ ದೊಡ್ಡ ಸಂಖ್ಯೆ ಎಂದು ಪರಿಗಣಿಸಲ್ಪಟ್ಟಿತು. ಹಾಗಾಗಿ ಕೆಲವು ಸಹಚರರು ಸಂತೋಷದ ಉತ್ಸಾಹದಲ್ಲಿ ಹೇಳಿದರು, ಈಗಲಾದರೂ ನಮ್ಮ ಸಂಖ್ಯೆಯು ಒಂದೂವರೆ ಸಾವಿರವನ್ನು ತಲುಪಿದೆ, ನಾವು ಭಯಪಡಬಹುದೇ? ತದನಂತರ, ಅಂತಹ ಕಷ್ಟದ ಸಮಯಗಳು ನಮಗೆ ಬಂದವು, ಕೆಲವೊಮ್ಮೆ ನಾವು ರಹಸ್ಯವಾಗಿ ನಮಾಝ್ ನಿರ್ವಹಿಸಬೇಕಾಗಿತ್ತು ಎಂದು ಸಹಚರರೊಬ್ಬರು ಹೇಳುತ್ತಾರೆ. ಇದಕ್ಕೂ ಮೊದಲು ಒಂದು ಸಂದರ್ಭದಲ್ಲಿ, ಅವರು ಮುಸ್ಲಿಮರ ಗಣತಿಯನ್ನು ನಡೆಸಿದ್ದರು, ಆದ್ದರಿಂದ ಆ ಸಮಯದಲ್ಲಿ ಅವರ ಸಂಖ್ಯೆ ಆರು ಮತ್ತು ಏಳು ನೂರರ ನಡುವೆ ಇತ್ತು." (ಸೀರತ್ ಖಾತಮುನ್ನಬೀಈನ್, ಸಾಹಿಬ್ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–483)

ಆದಾಗ್ಯೂ, ಸುದ್ದಿಯನ್ನು ಪಡೆಯಲು ಹಝ್ರತ್ ಪೈಗಂಬರ್(ಸ) ಅವರು ಕಳುಹಿಸಿದ ಇಬ್ಬರು ಸಹಚರರು ಅಖೀಖ್ ಸ್ಥಳದಲ್ಲಿರುವ ಖುರೈಶರಿಗೆ ಭೇಟಿಯಾಗಿ ಪುನಃ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಮರಳಿದರು. ಮತ್ತು ಅವಿಶ್ವಾಸಿಗಳ ಸೈನ್ಯದ ಬಗ್ಗೆ ಅವರಿಗೆ ಮಾಹಿತಿ ನೀಡಿದರು. ಅರೇಬಿಯನ್ ಪೆನಿನ್ಸುಲಾದಲ್ಲಿ ಅಖೀಖ್ ಎಂಬ ಹೆಸರಿನೊಂದಿಗೆ ಅನೇಕ ಕಣಿವೆಗಳಿವೆ, ಮತ್ತು ಪ್ರಮುಖ ಕಣಿವೆ ಮದೀನಾದ ಅಖೀಖ್ ಕಣಿವೆ, ಇದು ಮದೀನಾದ ನೈರುತ್ಯದಿಂದ ಈಶಾನ್ಯಕ್ಕೆ ವ್ಯಾಪಿಸಿದೆ ಮತ್ತು ಮದೀನಾದ ಎಲ್ಲಾ ಕಣಿವೆಗಳು ಅದನ್ನು ಸೇರುತ್ತವೆ. (ಫರ್ಹಾಂಗ್ ಸೀರತ್, ಪುಟ 204, ಝ್ವಾರ್ ಅಕಾಡೆಮಿ ಕರಾಚಿ)

ಆದಗ್ಯೂ, ಅವರಿಬ್ಬರೂ ಬಂದು, ಈ ಅವಿಶ್ವಾಸಿಗಳ ಸೈನ್ಯವು ತಮ್ಮ ಒಂಟೆ ಮತ್ತು ಕುದುರೆಗಳನ್ನು ಉರೈಝಿನ ಹೊಲಗಳಲ್ಲಿ ಬಿಟ್ಟಿದ್ದಾರೆ ಎಂದು ಹೇಳಿದರು. ಉರೈಝ್ ಮದೀನಾದಿಂದ ಮೂರು ಮೈಲಿ ದೂರದಲ್ಲಿರುವ ಬಯಲು ಪ್ರದೇಶವಾಗಿದೆ. (ಎನ್ಸೈಕ್ಲೋಪೀಡಿಯಾ ಆಫ್ ಬಯೋಗ್ರಫಿ, ಸಂಪುಟ 6, ಪುಟಗಳು 65–66)

ಅವರು ಹಸಿರು ಉಳಿದಿಲ್ಲ, ಎಲ್ಲವನ್ನೂ ಮೇಯಿಸಿದ್ದಾರೆ. ಅವಿಶ್ವಾಸಿಗಳು ಬುಧವಾರ ಕನಾತ್ ಕಣಿವೆಗೆ ಇಳಿದರು. ಗುರುವಾರ ಮತ್ತು ಶುಕ್ರವಾರ ಅವರ ಒಂಟೆಗಳು ಈ ಕಣಿವೆಯ ಸೊಪ್ಪನ್ನು ತಿನ್ನುವುದನ್ನು ಮುಂದುವರೆಸಿದವು. ಅವರು ಯಾವುದೇ ಹಸಿರು ಎಲೆಗಳನ್ನು ಬಿಡಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಅವರು ಹುಬಾಬ್ ಬಿನ್ ಮುಂಧಿರ್ ಅವರನ್ನು ಅವರ ಬಳಿಗೆ ಕಳುಹಿಸಿದರು. ಅವರು ಅವರನ್ನು ನೋಡಿ ಹಿಂತಿರುಗಿದರು ಮತ್ತು ಅವರ ಸಂಖ್ಯೆ ಮತ್ತು ಸರಕುಗಳನ್ನು ಅಂದಾಜಿಸಿದರು, ನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಸ್ಥಿತಿಯ ಬಗ್ಗೆ ಯಾರಿಗೂ ಹೇಳಬೇಡಿ. **ಹಸ್ಬುನಲ್ಲಾಹ ವ ನಿಅ್‌ಮಲ್ ವಕೀಲ್– ಅಲ್ಲಾಹುಮ್ಮ ಬಿಕ ಅಜೂಲು ವ ಬಿಕ ಅಸೂಲು.** ಸರ್ವಶಕ್ತನಾದ ಅಲ್ಲಾಹನು ನಮಗೆ ಸಾಕು ಮತ್ತು ಅವನು ಒಳ್ಳೆಯವನಾಗಿದ್ದಾನೆ, ಓ ಅಲ್ಲಾಹನೇ!! ನಾನು ನಿನ್ನೊಂದಿಗೆ ಸುತ್ತುತ್ತೇನೆ ಮತ್ತು ನಿನ್ನೊಂದಿಗೆ ನಾನು ಆಕ್ರಮಣ ಮಾಡುತ್ತೇನೆ. ಮತ್ತು ಔಸ್ ಮತ್ತು ಖಝ್‌ರಜ್‌ನ ಮುಖ್ಯಸ್ಥರು, ಹಝ್ರತ್ ಸಾದ್ ಬಿನ್ ಮುಆದ್, ಹಝ್ರತ್ ಉಸೈದ್ ಬಿನ್ ಹುದೈರ್ ಮತ್ತು ಹಝ್ರತ್ ಸಾದ್ ಬಿನ್ ಉಬಾದಾ, ಅವರು ಅವಿಶ್ವಾಸಿಗಳ ರಾತ್ರಿಯ ದಳಿಯ ಬೆದರಿಕೆಯಿಂದಾಗಿ ಶುಕ್ರವಾರ ರಾತ್ರಿ ಶಸ್ತ್ರಾಸ್ತ್ರಗಳೊಂದಿಗೆ ಶಸ್ತ್ರಸಜ್ಜಿತರಾಗಿ ಮಸೀದಿಯಲ್ಲಿ ರಸೂಲುಲ್ಲಾಹ್(ಸ) ಅವರ ಬಾಗಿಲು ಬಳಿ ಮತ್ತು ಮದೀನಾವನ್ನು ಬೆಳಗಿನ ತನಕ ಕಾವಲು ನೀಡಿದರು. (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ–4, ಪುಟ–183–184, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸೀರತುಲ್ ಹಲಬೀಯ, ಸಂಪುಟ–2, ಪುಟ–297, ದಅರುಲ್ ಕುತುಬ್ ಇಲ್‌ಮಿಯಾ ಬೈರೂತ್)

ಮಕ್ಕಾದ ಬಹುದೇವತಾವಾದಿಗಳ ಸೈನ್ಯವು ಮದೀನಾದಿಂದ ಮುಸ್ಲಿಮರು ನಿರ್ಗಮಿಸುವ ಮೊದಲು ಕುನಾತ್ ಕಣಿವೆಯ ಉಪ್ಪು ಮತ್ತು ಜೌಗು ಭೂಮಿಯಲ್ಲಿ ತಂಗಿದರು. (ಗಝ್ವಾ ಉಹುದ್, ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್, ಪುಟ–97)

ಮದೀನಾದ ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ, ದಟ್ಟವಾದ ತಾಳೆ ತೋಪುಗಳಿದ್ದವು, ಅವುಗಳ ಮೂಲಕ ಹಾದುಹೋಗುವ ಪಟ್ಟಣ ಅಥವಾ ನೆರೆಹೊರೆಯ ಮೇಲೆ ದಾಳಿ ಮಾಡುವುದು ಸುಲಭವಾಗಿರಲಿಲ್ಲ ಏಕೆಂದರೆ ಶತ್ರುಗಳ ಒಬ್ಬೊಬ್ಬ ವ್ಯಕ್ತಿ ಮಾತ್ರ ತೋಪುಗಳ ಮೂಲಕ ಚಲಿಸಬಹುದಾಗಿತ್ತು. ಈ ವೇಳೆ ದಾಳಿಕೋರರು ಸುಲಭವಾಗಿ ಹತ್ಯೆಯಾಗುತ್ತಿದ್ದರು. ದಾಳಿಯು ಉತ್ತರದಿಂದ ಮಾತ್ರ ಬರಬಹುದಾಗಿತ್ತು ಆದ್ದರಿಂದ ಖುರೈಶ್ ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಬೀಡು ಬಿಟ್ಟಿದ್ದರು. ಆಗ ಇಡೀ ಜನಸಂಖ್ಯೆಯು ಒಂದೇ ಸ್ಥಳದಲ್ಲಿರಲಿಲ್ಲ, ಆದರೆ ಪರ್ವತಗಳ ನಡುವಿನ ವಿಶಾಲವಾದ ಮೈದಾನದಲ್ಲಿ ಅಲ್ಲಲ್ಲಿ ಬಡಾವಣೆಗಳು ಅಥವಾ ವಠಾರಗಳಿದ್ದವು. ಕೆಲವು ಗೋತ್ರಗಳು ತಮ್ಮ ಜಮೀನು ಮತ್ತು ತೋಟಗಳ ಬಳಿ ಜನಸಂಖ್ಯೆಯನ್ನು ಸಂಘಟಿಸಿದ್ದರು ಮತ್ತು ಅನೇಕ ಎರಡು ಅಂತಸ್ತಿನ ಹೊಂಡಗಳನ್ನು ನಿರ್ಮಿಸಿದರು, ಯಾವುದೇ ಅಪಾಯದ ಸಮಯದಲ್ಲಿ, ಅವರು ಮಕ್ಕಳನ್ನು ಮತ್ತು ಮಹಿಳೆಯರನ್ನು ಹೊಂಡಗಳ ಮೇಲಿನ ಮಹಡಿಗೆ ಕಳುಹಿಸಿ ಅವರು ಸ್ವತಃ ಸ್ವತಂತ್ರವಾಗಿ ದಾಳಿಕೋರರ ವಿರುದ್ಧ ಹೋರಾಡುತ್ತಿದ್ದರು.
(ಗಝ್ವಾತುನ್ನಬೀ(ಸ), ಮೌಲಾನಾ ಅಬುಲ್ ಕಲಾಮ್ ಆಝಾದ್, ಪುಟ–63–64)

ಇನ್ನೊಬ್ಬ ಜೀವನಚರಿತ್ರೆಕಾರರು ಬರೆಯುತ್ತಾರೆ: ಬೆಳಿಗ್ಗೆ ಶತ್ರುಗಳ ಸೈನ್ಯವು ಮುಸ್ಲಿಮ್ ಸೈನ್ಯ ಮತ್ತು ಮದೀನಾದ ನಡುವೆ ತಡೆಗೋಡೆಯನ್ನು ನಿರ್ಮಿಸಿದ್ದರು, ಇದರಲ್ಲಿ ಕಪಟವಿಶ್ವಾಸಿಗಳು, ಯಹೂದಿಗಳು ಮತ್ತು ಮುಸ್ಲಿಮರು ಮತ್ತು ಮಹಿಳೆಯರು ಮತ್ತು ಮಕ್ಕಳನ್ನು ಹೊರತುಪಡಿಸಿ ಯಾರೂ ಉಳಿದಿಲ್ಲ.(ಗಝ್ವಾ ಉಹುದ್, ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್, ಪುಟ–99)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಇದರ ವಿವರಣೆಯಲ್ಲಿ ಬರೆಯುತ್ತಾರೆ: ಬಹುಶಃ ಶವ್ವಾಲ್ ಆರಂಭದಲ್ಲಿ ರಂಜಾನ್ 3 ಹಿಜ್ರಿಯ ಕೊನೆಯಲ್ಲಿ, ಖುರೈಶ್ ಇತರ ಅರಬ್ ಗೋತ್ರಗಳಿಂದ ಅನೇಕ ವೀರ ಪುರುಷರೊಂದಿಗೆ ಮಕ್ಕಾದಿಂದ ಹೊರಬಂದರು. ಅಬು ಸುಫ್ಯಾನ್ ಸೈನ್ಯದ ನಾಯಕನಾಗಿದ್ದನು. ಸೈನ್ಯದ ಸಂಖ್ಯೆಯು ಮೂರು ಸಾವಿರವಾಗಿತ್ತು, ಅದರಲ್ಲಿ ಏಳು ನೂರು ಜನರು ರಕ್ಷಾಕವಚದಲ್ಲಿದ್ದರು. ಸವಾರಿಗೆ ಬೇಕಾದ ಸಲಕರಣೆಗಳೂ ಸಾಕಷ್ಟಿದ್ದವು ಅಂದರೆ ಇನ್ನೂರು ಕುದುರೆಗಳು ಮೂರು ಸಾವಿರ ಒಂಟೆಗಳು ಇದ್ದವು. ಉಪಕರಣಗಳು ಸಹ ಬಹಳ ಸ್ಪಷ್ಟವಾಗಿದ್ದವು. ಮಹಿಳೆಯರೂ ಜೊತೆಗಿದ್ದರು ಅಬೂ ಸುಫ್ಯಾನ್‌ನ ಪತ್ನಿ ಹಿಂದ್ ಮತ್ತು ಇಕ್ರಮಾ ಬಿನ್ ಅಬು ಜಹ್ಲ್, ಸಫ್ವಾನ್ ಬಿನ್ ಉಮಯ್ಯ, ಖಾಲಿದ್ ಬಿನ್ ವಲೀದ್ ಮತ್ತು ಇತರರ ಪತ್ನಿಯರೂ ಜೊತೆಗಿದ್ದರು. ಅರೇಬಿಯಾದ ಪ್ರಾಚೀನ ಸಂಪ್ರದಾಯದ ಪ್ರಕಾರ ಹಾಡುಗಳನ್ನು ನುಡಿಸುವ ಪರಿಕರಗಳನ್ನು ಈ ಮಹಿಳೆಯರು ತಮ್ಮೊಂದಿಗೆ ತಂದಿದ್ದರು, ಆದ್ದರಿಂದ ಅವರು ತಮ್ಮ ಪುರುಷರನ್ನು ಪ್ರಚೋದಿಸುವ ಕವಿತೆಗಳನ್ನು ಮತ್ತು ತಂಬೂರಿಗಳನ್ನು ನುಡಿಸುವ ಮೂಲಕ ಹುರಿದುಂಬಿಸುತ್ತಿದ್ದರು. ಅವರು ಮದೀನಾದ ಉತ್ತರದಲ್ಲಿರುವ ಉಹುದ್ ಬೆಟ್ಟದಲ್ಲಿ ತಂಗಿದ್ದರು. ಈ ಸ್ಥಳದ ಸಮೀಪದಲ್ಲಿ ಮದೀನಾದ ದನಗಳು ಮೇಯುವ ವಿಶಾಲವಾದ ಹಸಿರು ಗದ್ದೆಯಿತ್ತು ಮತ್ತು ಸ್ವಲ್ಪ ಕೃಷಿ ಇತ್ತು. ಖುರೈಷರು ಮೊದಲು ಈ ಹುಲ್ಲುಗಾವಲಿನ ಮೇಲೆ ದಾಳಿ ಮಾಡಿದರು ಮತ್ತು ಅದನ್ನು ಲೂಟಿ ಮಾಡಿದರು. ಹಝ್ರತ್ ಪೈಗಂಬರ್(ಸ) ಅವರು ಸೈನ್ಯದ ಸಮೀಪಿಸುವಿಕೆಯ ಬಗ್ಗೆ ತಮ್ಮ ಮಾಹಿತಿದಾರರಿಂದ ಮಾಹಿತಿ ಪಡೆದಾಗ, ಅವರು ತಮ್ಮ ಸಹಚರರಲ್ಲಿ ಒಬ್ಬರಾದ ಹುಬಾಬ್ ಬಿನ್ ಮುಂಧೀರ್ ಅವರನ್ನು ಶತ್ರುಗಳ ಸಂಖ್ಯೆಯನ್ನು ಕಂಡುಹಿಡಿಯಲು ಕಳುಹಿಸಿದರು. ಅದೇ ರೀತಿ ಶತ್ರುಗಳ ಬಲ ಹೆಚ್ಚಾಗಿದ್ದರೆ ಮತ್ತು ಮುಸ್ಲಿಮರಿಗೆ ಇದರಿಂದ ಹೆಚ್ಚು ಹನಿಯಾಗುವ ಸಾಧ್ಯತೆ ಇದ್ದರೆ, ಮೊದಲು ಹೇಳಿದಂತೆ, ಹಝ್ರತ್ ಪೈಗಂಬರ್(ಸ) ಅವರು ಅದನ್ನು ಉಲ್ಲೇಖಿಸಬಾರದು, ಬದಲಿಗೆ ಮುಸ್ಲಿಮರಲ್ಲಿ ಕಿಡಿಗೇಡಿತನ ಹರಡದಂತೆ ಪ್ರತ್ಯೇಕತೆಯಲ್ಲಿ ನನಗೆ ತಿಳಿಸಬೇಕೆಂದು ಹೇಳಿದರು. ಆದಾಗ್ಯೂ, ಹುಬಾಬ್ ರಹಸ್ಯ ಮಾರ್ಗದಲ್ಲಿ ಹೋದರು ಮತ್ತು ಸ್ವಲ್ಪ ಸಮಯದ ನಂತರ ಬಹಳ ಎಚ್ಚರಿಕೆಯಿಂದ ಹಿಂದಿರುಗಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ಸಂಪೂರ್ಣ ಪರಿಸ್ಥಿತಿಯನ್ನು ವರದಿ ಮಾಡಿದರು. ಈಗ ಮದೀನಾದಲ್ಲಿ ಸೈನ್ಯದ ಆಗಮನದ ಸುದ್ದಿ ಹರಡಿತು ಮತ್ತು ಉರೈಜ್ ಮೇಲೆ ಅವರ ದಾಳಿಯ ಸುದ್ದಿಯೂ ಸಾರ್ವಜನಿಕವಾಯಿತು ಮತ್ತು ಅವರು ತೋಟವನ್ನು ಹೇಗೆ ನಾಶಪಡಿಸಿದರು. ಸಾಮಾನ್ಯ ಜನರಿಗೆ ಅವಿಶ್ವಾಸಿಗಳ ಸೈನ್ಯದ ವಿವರವಾದ ಪರಿಸ್ಥಿತಿಯನ್ನು ನೀಡಲಾಗಿಲ್ಲ, ಆದರೂ ಈ ರಾತ್ರಿಯು ಮದೀನಾದಲ್ಲಿ ಬಹಳ ಭಯ ಮತ್ತು ಅಪಾಯದ ಸ್ಥಿತಿಯಲ್ಲಿ ಕಳೆದಿತ್ತು. ವಿಶೇಷ ಸಹಚರರು ರಾತ್ರಿಯಿಡೀ ಹಝ್ರತ್ ಪೈಗಂಬರ್(ಸ) ಅವರ ಮನೆಯ ಸುತ್ತಲೂ ಕಾವಲು ಕಾಯುತ್ತಿದ್ದರು.
(ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ 483–484)

ಉಹದ್ ಯುದ್ಧದ ತಯಾರಿ ನಡೆಯುತ್ತಿದ್ದಾಗ ಅದೇ ವೇಳೆ ಹಝ್ರತ್ ಪೈಗಂಬರ್(ಸ) ಹೇಳಿದರು: ರಾತ್ರಿ ನಾನೊಂದು ಕನಸನ್ನು ಕಂಡಿದ್ದೇನೆ. ಒಂದು ದನವನ್ನು ಕೊಯ್ಯಲಾಗುತ್ತದೆ ಮತ್ತು ನನ್ನ ಖಡ್ಗವಾದ ಧುಲ್‌ಫಿಕಾರ್‌ನ ಅಂಚಿನಲ್ಲಿ ಬಿರುಕು ಇರುವುದಾಗಿ ಕಂಡೆನು. ಅನಂತರ ಒಂದು ಸುದೃಢವಾದ ಯುದ್ಧವಸ್ತ್ರದಲ್ಲಿ ಕೈ ಹಾಕುವುದಾಗಿ ಕಂಡೆನು ಮತ್ತು ನಾನು ಒಂದು ಕುರಿಯ ಮೇಲೆ ಸವಾರನಾಗಿದ್ದೇನೆ. (ಇತರ ವರದಿಗಳಲ್ಲಿ ಖಡ್ಗದ ಹಿಡಿ ತುಂಡಾಗಿದ್ದಾಗಿ ಮತ್ತು ಹಿಡಿಯ ಬಳಿ ಬಿರುಕು ಇರುವುದರ ಪ್ರಸ್ತಾಪ ಸಹ ಇದೆ. ಒಂದು ಸುದೃಢವಾದ ಯುದ್ಧವಸ್ತ್ರವನ್ನು ಧರಿಸಿದ್ದಾಗಿ ಕಂಡದ್ದರ ಪ್ರಸ್ತಾಪ ಮತ್ತೊಂದು ವರದಿಯಲ್ಲಿದೆ.) ಹಝ್ರತ್ ಪೈಗಂಬರ್(ಸ) ಈ ಕನಸನ್ನು ಹೀಗೆ ವ್ಯಾಖ್ಯಾನಿಸಿದರು: ದನಕ್ಕೆ ಸಂಬಂಧಿಸಿ ಹೇಳುವುದಾದರೆ, ನನ್ನ ಕೆಲವು ಸಹಾಬಿಯರು ಶಹೀದ್ ಆಗುವರು ಎಂಬುದನ್ನು ಅದು ಸೂಚಿಸುತ್ತದೆ. ನನ್ನ ಖಡ್ಗದ ಹಿಡಿ ಬಿರುಕು ಬಿಡುವುದಕ್ಕೆ ಸಂಬಂಧಿಸಿ ಹೇಳುವುದಾದರೆ, ನನ್ನ ಮನೆಯವರಲ್ಲಿ ಅಥವಾ ಕುಟುಂಬದವರಲ್ಲಿ ಯಾರಾದರೂ ವಧಿಸಲ್ಪಡುವರು ಎಂಬುದನ್ನು ಅದು ಸೂಚಿಸುತ್ತದೆ. ಸುದೃಢವಾದ ಯುದ್ಧ ಅಂಗಿಯ ಅರ್ಥ ಮದೀನ ಆಗಿದೆ ಮತ್ತು ಕುರಿಯ ಮೇಲೆ ಸವಾರನಾಗುವುದರ ಅರ್ಥ ನಾನು ಶತ್ರುಗಳ ಬೆಂಬಲಿಗರನ್ನು ವಧಿಸುವೆನು ಎಂದಾಗಿದೆ.

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಅವರು ಈ ವಿಷಯದ ಬಗ್ಗೆ ಸಲಹೆ ಕೇಳಿದರು. ಇಬ್ನ್ ಉತ್ಬಾ, ಇಬ್ನ್ ಇಸ್‌ಹಾಕ್ ಮತ್ತು ಇಬ್ನ್ ಸಾದ್ ಮೊದಲಾದವರು ಇದನ್ನು ಹಝ್ರತ್ ಪೈಗಂಬರ್(ಸ) ಅವರು ಈ ಕನಸ್ಸನ್ನು ಶುಕ್ರವಾರ ರಾತ್ರಿ ನೋಡಿದ್ದಾರೆಂದು ಹೇಳುತ್ತಾರೆ. ಮುಂಜಾನೆಯಾದಾಗ, ಅವರು ಸಹಾಬರವರ ಬಳಿಗೆ ಬಂದು ಸರ್ವಶಕ್ತನಾದ ಅಲ್ಲಾಹನಿಗೆ ಸರ್ವ ಸ್ತುತಿಗಳು ಎಂದು ವಿವರಿಸಿದ ನಂತರ ತಮ್ಮ ಕನಸನ್ನು ವಿವರಿಸಿ ಹೇಳಿದರು ನೀವು ಅಭಿಪ್ರಾಯಪಡುವುದಾದರೆ ಮದೀನದಲ್ಲಿ ತಂಗಿ ಮಹಿಳೆಯರನ್ನು ಮತ್ತು ಮಕ್ಕಳನ್ನು ನಾವು ಕೋಟೆಗಳಿಗೆ ತಲುಪಿಸೋಣ. ಅವರು ಹೊರಗೆ ಉಳಿದುಕೊಂಡರೆ, ಅವರು ಕೆಟ್ಟ ಸ್ಥಳದಲ್ಲಿ ಉಳಿಯುತ್ತಾರೆ, ಮತ್ತು ಅವರು ನಮ್ಮ ನಗರವನ್ನು ಪ್ರವೇಶಿಸಿದರೆ, ನಾವು ಅವರೊಂದಿಗೆ ಬೀದಿಗಳಲ್ಲಿ ಹೋರಾಡುತ್ತೇವೆ ಮತ್ತು ಬೀದಿಗಳ ಮಾರ್ಗಗಳು ನಾವು ಅವರಿಂತ ಹೆಚ್ಚು ಬಲ್ಲವರಾಗಿದ್ದೇವೆ ಮತ್ತು ನಾವು ಅವರ ಮೇಲೆ ಕಲ್ಲುಗಳನ್ನು ಎಸೆಯಬಹುದು. ಈ ಜನರು ನಿರ್ಮಾಣದ ಮೂಲಕ ಮದೀನಾವನ್ನು ಎಲ್ಲಾ ಕಡೆಗಳಿಂದ ಸುರಕ್ಷಿತವಾಗಿಸಿದರು. ಮದೀನಾ ಕೋಟೆಯಂತಿತ್ತು. ಹಝ್ರತ್ ಪೈಗಂಬರ್(ಸ) ನೀಡಿದ ಅದೇ ಅಭಿಪ್ರಾಯವೇ ಮುಹಾಜಿರ್ ಮತ್ತು ಅನ್ಸಾರರಾದ ಶ್ರೇಷ್ಠ ಸಹಾಬಿಯರ ಅಭಿಪ್ರಾಯವಾಗಿತ್ತು. ಆದರೆ ಬದ್ರ್ ಯುದ್ಧದಲ್ಲಿ ಭಾಗಿಯಾಗಿರದ ಮತ್ತು ತಮ್ಮ ಶಹಾದತ್ತಿನಿಂದ ಧರ್ಮದ ಸೇವೆಯ ಸದವಕಾಶವನ್ನು ಗಳಿಸುವ ತವಕದಲ್ಲಿದ್ದ ಮುಸ್ಲಿಂ ಯುವಕರ ಒಂದು ಸಂಘ ಹೀಗೆ ಒತ್ತಾಯಪಡಿಸುತ್ತಿದ್ದರು. ಶತ್ರುಗಳು ನಮ್ಮನ್ನು ಭೀರುಗಳು ಎಂದು ಭಾವಿಸದಿರಲು ನೀವು ನಮ್ಮನ್ನು ಮದೀನದಿಂದ ಹೊರಗೆ ಕೊಂಡು ಹೋಗಿರಿ. ನಾವು ಹೇಡಿಗಳಾಗಿದ್ದೇವೆ ಎಂದು ಅವರು ಭಾವಿಸಬಾರದು. ಅಬ್ದುಲ್ಲಾ ಬಿನ್ ಉಬಯ್ಯ ಹೇಳಿದರು, ಯಾ ರಸೂಲಲ್ಲಾಹ್(ಸ)! ಮದೀನಾದಲ್ಲಿ ಉಳಿಯಿರಿ. ಮದೀನಾದಿಂದ ಹೊರಗೆ ಹೋಗಬೇಡಿ. ಅಲ್ಲಾಹನ ಆಣೆ! ನಾವು ಮದೀನಾದ ಹೊರಗೆ ಶತ್ರುಗಳೊಂದಿಗೆ ಹೋರಾಡಿದಾಗಲೆಲ್ಲಾ ನಾವು ಸೋಲಿಸಲ್ಪಟ್ಟಿದ್ದೇವೆ ಮತ್ತು ಮದೀನಾದಲ್ಲಿ ಶತ್ರುಗಳು ಹೋರಾಡಲು ಬಂದಾಗಲೆಲ್ಲಾ ನಾವು ವಿಜಯಶಾಲಿಯಾಗಿದ್ದೇವೆ.
(ಸೀರತುಲ್ ಹಲಬೀಯ, ಸಂಪುಟ–2, ಪುಟ–297–298, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸಬ್ಲುಲ್ ಹುದಾ, ಸಂಪುಟ–4, ಪುಟ 185, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಹಂಝಾ ಬಿನ್ ಅಬ್ದುಲ್ ಮುತ್ತಲಿಬ್, ಸಅದ್ ಬಿನ್ ಉಬಾದಾ ಮತ್ತು ನುಮಾನ್ ಬಿನ್ ಮಲಿಕ್ ಸಹ ಹೇಳಿದರು, ಯಾ ರಸೂಲಲ್ಲಾಹ್(ಸ)! ನಾವು ಮದೀನಾವನ್ನು ತೊರೆಯದಿದ್ದರೆ, ಶತ್ರುಗಳು ನಾವು ಅವರೊಂದಿಗೆ ಹೋರಾಡಲು ಹೇಡಿಗಳಾಗಿದ್ದೇವೆ ಎಂದು ಭಾವಿಸುತ್ತಾರೆ ಎಂದು ನಾವು ಹೆದರುತ್ತೇವೆ. ನಾವು ಹೊರಗೆ ಹೋಗದಿದ್ದರೆ, ಇದರಿಂದ ಅವರ ಧೈರ್ಯವು ನಮ್ಮ ವಿರುದ್ಧ ಹೆಚ್ಚಾಗುತ್ತದೆ, ಮತ್ತು ಬದ್ರ್‌ನಲ್ಲಿ, ನೀವು ಮುನ್ನೂರು ಜನರೊಂದಿಗೆ ಇದ್ದೀರಿ, ಆಗ ಸರ್ವಶಕ್ತನಾದ ಅಲ್ಲಾಹನು ನಿಮಗೆ ಅವರ ಮೇಲೆ ವಿಜಯವನ್ನು ನೀಡಿದನು ಮತ್ತು ಇಂದು ನಾವು ಹೆಚ್ಚಿನ ಸಂಖ್ಯೆಯಲ್ಲಿರುತ್ತೇವೆ.

ಇಯಾಸ್ ಬಿನ್ ಔಸ್ ಬಿನ್ ಅತೀಖ್(ರ) ಹೇಳಿದರು ಬನೂ ಅಬ್ದು ಅಲ್–ಅಶ್ಲಿಯಾ ಹತ್ಯೆಯಾದ ಗೋವು ನಮ್ಮ ಜನರಾಗಿರಲಿ ಎಂದು ಆಶಿಸುತ್ತೇವೆ. ಗೋವನ್ನು ಕಡಿಯುತ್ತಿರುವುದನ್ನು ಕನಸಿನಲ್ಲಿ ಕಂಡವರು ನಾವು ಗೋವು ನಾವೇ ಎಂದು ಭಾವಿಸುತ್ತೇವೆ ಎಂದು ಹೇಳಿದರು ಮತ್ತು ಅವರ ಹೊರತಾಗಿ ಇತರರು ಹೇಳಿದರು. ಎರಡು ಸದ್ಗುಣಗಳಲ್ಲಿ ಒಂದಾಗಿದೆ, ಯಶಸ್ಸು ಅಥವಾ ಹುತಾತ್ಮತೆ. ಅಲ್ಲಾಹನ ಆಣೆ! ಅರಬ್ಬರು ನಮ್ಮ ಮನೆಗಳನ್ನು ಪ್ರವೇಶಿಸುವ ಪ್ರಲೋಭನೆಗೆ ಒಳಗಾಗಬಾರದು. ಹಝ್ರತ್ ಹಂಝಾ ಹೇಳಿದರು: ಗ್ರಂಥ ಅವತರಿಸುವವನ ಮೇಲೆ ಆಣೆ! ನಾನು ಮದೀನಾದಿಂದ ಹೊರಗೆ ಬಂದು ನನ್ನ ಕತ್ತಿಯಿಂದ ಅವರೊಂದಿಗೆ ಹೋರಾಡುವವರೆಗೂ ನಾನು ಇಂದು ಆಹಾರ ಸೇವಿಸುವುದಿಲ್ಲ, ಆದ್ದರಿಂದ ಅವರು ಶುಕ್ರವಾರ ಮತ್ತು ಶನಿವಾರ ಉಪವಾಸ ಮಾಡಿದರು ಮತ್ತು ಅವರು ಹುತಾತ್ಮರಾದಾಗ ಅವರು ಉಪವಾಸದಲ್ಲಿದ್ದರು. (ಕಿತಾಬುಲ್–ಮಗಾಜಿ ಲಾಲ್ವಾಕಿದಿ, ಸಂಪುಟ–1, ಪುಟ–194)

ನುಅ್‌ಮಾನ್ ಬಿನ್ ಮಾಲಿಕ್ ಹೇಳಿದರು, ಯಾ ರಸೂಲಲ್ಲಾಹ್(ಸ)!! ನಮ್ಮನ್ನು ಸ್ವರ್ಗದಿಂದ ವಂಚಿತಗೊಳಿಸಬೇಡಿ. ನನ್ನ ಜೀವವು ಯಾರ ಶಕ್ತಿಯಲ್ಲಿದೆಯೋ ಅವನ ಆಣೆ! ನಾನು ಖಂಡಿತವಾಗಿಯೂ ಸ್ವರ್ಗವನ್ನು ಪ್ರವೇಶಿಸುತ್ತೇನೆ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಹೇಳಿದರು: ಅದು ಹೇಗೆ? ಅದಕ್ಕೆ ಅವರು ಹೇಳಿದರು ಏಕೆಂದರೆ ನಾನು ಸರ್ವಶಕ್ತನಾದ ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು(ಸ) ಪ್ರೀತಿಸುತ್ತೇನೆ ಮತ್ತೊಂದು ವರದಿಯಲ್ಲಿದೆ ಅಲ್ಲಾಹನನ್ನು ಹೊರತುಪಡಿಸಿ ಯಾವುದೇ ದೇವರು ಇಲ್ಲ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕ ಎಂದು ನಾನು ಸಾಕ್ಷಿ ಹೇಳುತ್ತೇನೆ ಮತ್ತು ಯುದ್ಧದ ದಿನದಂದು ನಾನು ಓಡಿಹೋಗುವುದಿಲ್ಲ. ಆಗ ರಸೂಲುಲ್ಲಾಹ್(ಸ) ರು ಹೇಳಿದರು: ನೀನು ಸತ್ಯವನ್ನೇ ಹೇಳಿರುವೆ. ಅವರು ಈ ಯುದ್ಧದಲ್ಲಿ ಹುತಾತ್ಮರಾದರು. ಮಾಲಿಕ್ ಬಿನ್ ಸಿನಾನ್ ಖುದ್ರಿ ಮತ್ತು ಇಯಾಸ್ ಬಿನ್ ಅತೀಕ್ ಮತ್ತು ಒಂದು ಗುಂಪು ಅವರನ್ನು ಯುದ್ಧಕ್ಕೆ ಹೋಗಲು ಪ್ರೋತ್ಸಾಹಿಸಿತು.

*(ಪುಟ ಸಂಖ್ಯೆ–12ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಉಹದ್ ಯುದ್ಧಕ್ಕೆ ಹೊರಡುವ ಸಂದರ್ಭದಲ್ಲಿ ಉದ್ಭವವಾದ ಘಟನೆಗಳ ಪ್ರಸ್ತಾವನೆ**

ಅಲ್ಲಾಹನು ಮತ್ತು ಅವನ ಶತ್ರುಗಳ ನಡುವೆ ಅವನು ತೀರ್ಮಾನ ಮಾಡುವ ತನಕ ಯುದ್ಧವಸ್ತ್ರವನ್ನು ಧರಿಸಿದ ನಂತರ ಅದನ್ನು ಕಳಚುವುದು ಪ್ರವಾದಿಗೆ ಅನುಮತನೀಯವಲ್ಲ. ಆದುದರಿಂದ ಈಗ ಅಲ್ಲಾಹನ ಹೆಸರಿನೊಂದಿಗೆ ಹೋಗಿ ಮತ್ತು ನೀವು ತಾಳ್ಮೆಯಿಂದ ವರ್ತಿಸಿದರೆ, ಅಲ್ಲಾಹನ ಸಹಾಯವು ನಿಮ್ಮೊಂದಿಗೆ ಇರುತ್ತದೆ ಎಂದು ಖಚಿತಪಡಿಸಿಕೊಳ್ಳಿ.

ಅಲ್ಲಾಹನು ಮತ್ತು ಅವನ ಶತ್ರುಗಳ ನಡುವೆ ಅವನು ತೀರ್ಮಾನ ಮಾಡುವ ತನಕ ಯುದ್ಧವಸ್ತ್ರವನ್ನು ಧರಿಸಿದ ನಂತರ ಅದನ್ನು ಕಳಚುವುದು ಪ್ರವಾದಿಗೆ ಅನುಮತನೀಯವಲ್ಲ.

**ಉಹದ್ ಬೆಟ್ಟದತಪ್ಪಲಿನಲ್ಲಿ ಹಝ್ರತ್ ಪೈಗಂಬರ್(ಸ)ರ ಸಹಾಬಗಳಿಗೆ ಉಪದೇಶ**

ಪೆಲಸ್ತೀನಿನ ಮುಸ್ಲಿಮರಿಗಾಗಿ ದುಆ ಮಾಡಲು ಪುನಃ ಮನವಿ

ಕೆಲವು ದಿನಗಳ ಮುಂಚೆ ಯುದ್ಧ ವಿರಾಮದ ನಂತರ ಯೋಜಿಸಲಾದ ಹಾಗೆಯೇ ನಡೆಯುತ್ತಿದೆ. ಇಸ್ರೇಲ್ ಸರ್ಕಾರ ಮೊದಲಿಗಿಂತ ಹೆಚ್ಚು ತೀವ್ರತೆಯಿಂದ ಗಾಝಾದ ಪ್ರತಿಯೊಂದು ಪ್ರದೇಶದಲ್ಲಿ ಈಗ ಬಾಂಬುಗಳನ್ನು ವರ್ಷಿಸುತ್ತಿದೆ ಮತ್ತು ಆಕ್ರಮಣಗಳನ್ನು ನಡೆಸುತ್ತಿದೆ. ಅಮಾಯಕ ಮಕ್ಕಳು ಮತ್ತು ಪ್ರಜೆಗಳು ಶಹೀದ್ ಆಗುತ್ತಿದ್ದಾರೆ.

ಇಬ್ಬರು ದಿವಂಗತರಾದ ಮುಕರ್‌ರಮಾ ಮಸೂದಾ ಬೇಗಮ್ ಅಕ್ಮಲ್ ಸಾಹಿಬಾ ಮತ್ತು ಮಾಸ್ಟರ್ ಅಬ್ದುಲ್ ಹಮೀದ್ ಸಾಹಿಬ್ ಅರವರ ಸದ್ಗುಣಗಳ ಪ್ರಸ್ತಾವನೆ ಹಾಗು ನಮಾಝೆ ಜನಾಝ ಗ್ವಾಯಿಬ್ ನಿರ್ವಹಣೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **08–12–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಕಳೆದ ಖುತ್ಬದಲ್ಲಿ ಉಹುದ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ವಿವರಿಸಿದ್ದನ್ನು ನಾನು ಸಂಕ್ಷೇಪವಾಗಿ ಹೇಳುತ್ತೇನೆ. ಅವರು ಹೇಳುತ್ತಾರೆ: ಸತ್ಯನಿಷೇಧಿಗಳ ಸೈನ್ಯವು ಬದ್ರ್ ಯುದ್ಧದ ನಂತರ ಮೈದಾನದಿಂದ ಓಡಿಹೋಗುತ್ತಾ ಹೀಗೆ ಘೋಷಿಸಿದ್ದರು: ನಾವು ಮುಂದಿನ ವರ್ಷ ಪುನಃ ದಾಳಿ ನಡೆಸುವೆವು ಮತ್ತು ಮುಸ್ಲಿಮರಿಂದ ನಮ್ಮ ಸೋಲಿನ ಸೇಡು ತೀರಿಸುವೆವು. ಹೀಗೆ ಒಂದು ವರ್ಷದ ನಂತರ ಅವರು ಪುನಃ ಪೂರ್ಣ ತಯಾರಿಯೊಂದಿಗೆ ಮದೀನದ ಮೇಲೆ ದಾಳಿ ನಡೆಸಿದರು. ಮಕ್ಕಾ ನಿವಾಸಿಗಳ ಕೋಪದ ಸ್ಥಿತಿ ಏನಾಗಿತ್ತು ಎಂದರೆ, ಅವರು ಹೀಗೆ ಘೋಷಿಸಿದ್ದರು: ಯಾವನೇ ವ್ಯಕ್ತಿಗೆ ತಮ್ಮನ್ನು ಅಗಲಿದವರಿಗಾಗಿ ಅಳಲು ಅನುಮತಿಯಿಲ್ಲ ಮತ್ತು ವ್ಯಾಪಾರ ಸಂಘಗಳಿಂದ ಲಭಿಸುವ ಆದಾಯವನ್ನು ಯುದ್ಧಕ್ಕಾಗಿ ಸುರಕ್ಷಿತವಾಗಿ ಇರಿಸಲಾಗುವುದು. ಹೀಗೆ ಬಹಳ ತಯಾರಿಯ ನಂತರ ಮೂರು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಒಂದು ಸೈನ್ಯವು ಅಬೂಸುಫ್‌ಯಾನಿನ ನೇತೃತ್ವದಲ್ಲಿ ಮದೀನದ ಮೇಲೆ ದಾಳಿ ನಡೆಸಿತು. ನಾವು ಪಟ್ಟಣದಲ್ಲಿ ಇದ್ದುಕೊಂಡು ಯುದ್ಧ ಮಾಡಬೇಕೇ ಅಥವಾ ಹೊರಗೆ ಹೋಗಿ ಮಾಡಬೇಕೇ ಎಂಬುದರ ಬಗ್ಗೆ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಸಮಾಲೋಚನೆ ನಡೆಸಿದರು. ಶತ್ರಗಳು ದಾಳಿ ನಡೆಸಿ ಅವರೇ ಯುದ್ಧದ ಆರಂಭಕ್ಕೆ ಹೊಣೆಗಾರರಾಗಲಿ ಮತ್ತು ಮುಸ್ಲಿಮರು ತಮ್ಮ ಜಾಗಗಳಲ್ಲೇ ನಿಂತುಕೊಂಡು ಹೋರಾಟ ನಡೆಸಲಿ ಎಂದೇ ಆಗಿತ್ತು ಹಝ್ರತ್ ಪೈಗಂಬರ್(ಸ)ರ ಅಭಿಪ್ರಾಯ. ಆದರೆ ಬದ್ರ್ ಯುದ್ಧದಲ್ಲಿ ಭಾಗಿಯಾಗಿರದ ಮತ್ತು ಅಲ್ಲಾಹನ ಮಾರ್ಗದಲ್ಲಿ ಶಹೀದ್ ಆಗುವ ಹಂಬಲದಲ್ಲಿ ಇದ್ದ ತರುಣ ಮುಸ್ಲಿಮರ ಬಯಕೆಯು ಹೊರಗೆ ಹೋಗಿ ಯುದ್ಧ ನಡೆಸಬೇಕು ಎಂದಾಗಿತ್ತು. ಹಝ್ರತ್ ಪೈಗಂಬರ್(ಸ) ಅವರು ಆ ತರುಣ ಮುಸ್ಲಿಮರ ಅಭಿಪ್ರಾಯವನ್ನು ಒಪ್ಪಿಕೊಂಡರು.

ಇದೇ ವೇಳೆ ಹಝ್ರತ್ ಪೈಗಂಬರ್(ಸ) ಹೀಗೆ ಒಂದು ಕನಸನ್ನು ಕಂಡರು: ಕೆಲವು ದನಗಳು ಕೊಯ್ಯಲಾಗುತ್ತಿದ್ದುವು. ಅದೇ ರೀತಿಯಲ್ಲಿ ಅವರ ಖಡ್ಗದ ತುದಿ ತುಂಡಾಗಿದ್ದಾಗಿಯೂ ಕಂಡರು. ಅವರು ತಮ್ಮ ಕೈಯನ್ನು ಒಂದು ಸುರಕ್ಷಿತ ಮತ್ತು ಸುದೃಢವಾದ ಯುದ್ಧಕವಚದಲ್ಲಿ ಹಾಕಿರುವ ದೃಶ್ಯವನ್ನು ಸಹ ಕಂಡರು. ಅದೇ ರೀತಿಯಲ್ಲಿ ಅವರು ಒಂದು ಟಗರಿನ ಬೆನ್ನಲ್ಲಿ ಸವಾರರಾಗಿರುವುದಾಗಿಯೂ ನೋಡಿದರು. ಸಹಾಬಿಯರು ಈ ಕನಸಿನ ವ್ಯಾಖ್ಯಾನವನ್ನು ಕೇಳಿದಾಗ ಪೈಗಂಬರ್(ಸ) ಹೇಳಿದರು: ದನಗಳು ಕೊಯ್ಯಲ್ಪಡುವುದರ ಅರ್ಥ ನನ್ನ ಕೆಲವು ಸಹಾಬಿಯರು ಈ ಯುದ್ಧದಲ್ಲಿ ಹುತಾತ್ಮರಾಗುವರು ಎಂದಾಗಿದೆ. ಖಡ್ಗದ ತುದಿ ತುಂಡಾಗುವುದರ ಅರ್ಥ ನನ್ನ ಸಂಬಂಧಿಕರಲ್ಲಿ ಒಬ್ಬ ಮುಖ್ಯ ವ್ಯಕ್ತಿ ಶಹೀದ್ ಆಗುವರು ಅಥವಾ ಈ ಯುದ್ಧದಲ್ಲಿ ಬಹುಶಃ ನನಗೆ ಏನಾದರೂ ತೊಂದರೆ ಉಂಟಾಗುವುದು ಎಂದಾಗಿದೆ. ಯುದ್ಧ ಕವಚದಲ್ಲಿ ಕೈ ಹಾಕುವುದರ ಅರ್ಥ ನಾವು ಮದೀನದಲ್ಲಿ ಇರುವುದು ಹೆಚ್ಚು ಸಮಂಜಸ ಎಂದಾಗಿದೆ. ಟಗರಿನ ಮೇಲೆ ಸವಾರಾಗುವುದರ ಅರ್ಥ ಸತ್ಯನಿಷೇಧಿಗಳ ಸೇನಾಧಿಪತಿಯ ಮೇಲೆ ನಾವು ವಿಜಯ ಗಳಿಸುವೆವು ಎಂಬುದಾಗಿ ತಿಳಿದುಬರುತ್ತದೆ.

ಮುಸ್ಲಿಮರು ಮದೀನದಲ್ಲಿ ಇರುವುದು ಹೆಚ್ಚು ಉತ್ತಮ ಎಂದು ಸ್ಪಷ್ಟಗೊಳಿಸಲಾಗಿದ್ದರೂ ಕನಸಿನ ವ್ಯಾಖ್ಯಾನವನ್ನು ಹಝ್ರತ್ ಪೈಗಂಬರ್(ಸ) ಸ್ವತಃ ಮಾಡಿದ್ದರು. ದಿವ್ಯವಾಣಿ ಮೂಲಕ ತಿಳಿಸಲಾಗಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಬಹುತೇಕರ ಅಭಿಪ್ರಾಯವನ್ನು ಒಪ್ಪಿದರು ಮತ್ತು ಯುದ್ಧಕ್ಕಾಗಿ ಹೊರಗೆ ಹೋಗಲು ತೀರ್ಮಾನಿಸಿದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–247–248)

ಕನಸುಗಳಲ್ಲಿ ಕುರುಹುಗಳನ್ನು ಉಲ್ಲೇಖಿಸಲಾಗಿರುತ್ತದೆ.

ಈ ಕನಸಿನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹಝ್ರತ್ ಪೈಗಂಬರ್(ಸ) ಅವರ ರೂಪಕಗಳನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ದೈವದರ್ಶನಗಳಲ್ಲಿ ಮತ್ತು ಕನಸುಗಳಲ್ಲಿ ಕಂಡುಬರುವ ರೂಪಕಗಳು ಹದೀಸ್‌ಗಳನ್ನು ಓದುಗರಿಂದ ಮರೆಯಾಗಿಲ್ಲ ಮತ್ತು ಅವು ಅಗೋಚರವಾಗಿಲ್ಲ. ಕೆಲವೊಮ್ಮೆ ಹಝ್ರತ್ ಪೈಗಂಬರ್(ಸ) ಅವರು ತಮ್ಮ ಕೈಯಲ್ಲಿ ಸ್ವೈವದರ್ಶನದ ರೂಪದಲ್ಲಿ ಎರಡು ಚಿನ್ನದ ಬಳೆಗಳನ್ನು ಧರಿಸಿರುವುದನ್ನು ನೋಡಿದರು ಮತ್ತು ಅದರಿಂದ ಅವರು ಎರಡು ಸುಳ್ಳು ಪ್ರವಾದಿತ್ವದ ವಾದವನ್ನು ಪ್ರತಿಪಾದಿಸಿದ ಇಬ್ಬರು ಕಪಟಿಗಳು ಎಂದು ಅರ್ಥಮಾಡಿಕೊಂಡರು ಮತ್ತು ಕೆಲವೊಮ್ಮೆ ಹಝ್ರತ್ ಪೈಗಂಬರ್(ಸ) ಅವರಿಗೆ ತಮ್ಮ ದರ್ಶನದಲ್ಲಿ ಮತ್ತು ಕನಸಿನಲ್ಲಿ ಗೋವುಗಳು ವಧಿಸಲ್ಪಡುತ್ತಿರುವುದಾಗಿ ಕಂಡರು ಮತ್ತು ಅದರಿಂದ ಅವರು ಉಹುದ್ ಯುದ್ಧದಲ್ಲಿ ಹುತಾತ್ಮರಾಗುವ ಸಹಚರರು ಎಂದು ಅರ್ಥೈಸುತ್ತಾರೆ...... ಅದೇ ರೀತಿಯಲ್ಲಿ ಅನೇಕ ದರ್ಶನಗಳು ಅನ್ಯ ಪ್ರವಾದಿಗಳ ದೈವದರ್ಶನಗಳಲ್ಲಿ ರೂಪಕಗಳು ಆಗಿರುವುದು ಅಪರೂಪದ ಸಂಗತಿಯಲ್ಲ. (ಇಝಾಲ ಔಹಾಮ್, ರೂಹಾನಿ ಖಝಾಈನ್, ಸಂಪುಟ–3, ಪುಟ–133, ಅಡಿಟಿಪ್ಪಣಿ)

ಆದಾಗ್ಯೂ, ಹೊರಗೆ ಹೋಗಿ ಯುದ್ಧ ನಡೆಸಲು ತೀರ್ಮಾನಿಸಲಾದಾಗ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ತಯಾರಿ ಮಾಡಲು ಆಜ್ಞಾಪಿಸಿದರು ಮತ್ತು ಸ್ವತಃವೂ ಯುದ್ಧಕ್ಕಾಗಿ ತಯಾರಿ ಮಾಡಲು ತೊಡಗಿದರು.

ಅದರ ವಿವರಗಳನ್ನು ವಿವರಿಸಿದಂತೆ, ಹಝ್ರತ್ ಪೈಗಂಬರ್(ಸ) ಅವರು ಕನಸಿನ ಆಧಾರದ ಮೇಲೆ ನಗರದ ಹೊರಗೆ ಹೋಗಿ ಹೋರಾಡಲು ಇಷ್ಟಪಡಲಿಲ್ಲ, ಆದರೆ ಜನರು ಒತ್ತಾಯಿಸಿದಾಗ ಅವರ ಅಭಿಪ್ರಾಯದೊಂದಿಗೆ ಅವರು(ಸ.ಅ) ಒಪ್ಪಿದರು. ಹಝ್ರತ್ ಪೈಗಂಬರ್(ಸ) ಅವರು ಜುಮುಅ ನಮಾಝನ್ನು ನಿರ್ವಹಿಸಿ ಜನರಿಗೆ ಪರಿಪೂರ್ಣ ಶ್ರದ್ಧೆಯಿಂದ ಮತ್ತು ಧೈರ್ಯದಿಂದ ಹೋರಾಡಬೇಕೆಂದು ಬೋಧಿಸಿ ಅವರಿಗೆ ಆಜ್ಞಾಪಿಸಿದರು. ಜನರು ತಾಳ್ಮೆಯಿಂದ ಇದ್ದರೆ ಅಲ್ಲಾಹನು ಅವರಿಗೆ ಜಯ ಮತ್ತು ಸಮೃದ್ಧಿಯನ್ನು ನೀಡುತ್ತಾನೆ ಎಂಬ ಒಳ್ಳೆಯ ಸುದ್ದಿಯನ್ನು ರಸೂಲುಲ್ಲಾಹ್(ಸ) ಅವರಿಗೆ ನೀಡಿದರು. ನಂತರ ಅವರು ಹೋಗಿ ಯುದ್ಧಕ್ಕೆ ಸಿದ್ಧರಾಗಲು ಜನರಿಗೆ ಆದೇಶಿಸಿದರು. ಈ ಆದೇಶವನ್ನು ಕೇಳಿ ಜನರು ಸಂತೋಷಪಟ್ಟರು. ಬಳಿಕ ಎಲ್ಲರೊಂದಿಗೆ ಅಸರ್ ನಮಾಝ್ ನಿರ್ವಹಿಸಿದರು. ಅಷ್ಟೊತ್ತಿಗಾಗಲೇ ಸುತ್ತಮುತ್ತಲ ಪ್ರದೇಶಗಳಿಂದ ಬಂದವರೂ ಜಮಾಯಿಸಿದ್ದರು. ನಂತರ ಪೈಗಂಬರ್(ಸ) ಅವರು ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಅವರೊಂದಿಗೆ ತಮ್ಮ ಮನೆಗೆ ತೆರಳಿದರು. ಇಬ್ಬರೂ ಹಝ್ರತ್ ಪೈಗಂಬರ್(ಸ) ಅವರಿಗೆ ಪೇಟವನ್ನು ಕಟ್ಟಿದರು ಮತ್ತು ಅವರಿಗೆ ಯುದ್ಧವಸ್ತ್ರವನ್ನು ತೊಡಿಸಿದರು. ಜನರು ರಸೂಲುಲ್ಲಾಹ್(ಸ) ಅವರಿಗಾಗಿ ಸಾಲುಗಳಲ್ಲಿ ನಿಂತು ಕಾಯುತ್ತಿದ್ದರು. ಆ ಸಮಯದಲ್ಲಿ, ಹಝ್ರತ್ ಸಅದ್ ಬಿನ್

ಮುಆಧ್(ರ) ಮತ್ತು ಹಝ್ರತ್ ಉಸೈದ್ ಬಿನ್ ಹಝೀರ್(ರ) ಜನರೊಡನೆ ಹೀಗೆ ಹೇಳಿದರು: ಹೊರಗೆ ಹೋಗಿ ಯುದ್ಧ ಮಾಡಲು ನೀವು ಹಝ್ರತ್ ಪೈಗಂಬರ್(ಸ)ರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಒತ್ತಾಯಪಡಿಸಿದ್ದೀರಿ. ಆದ್ದರಿಂದ ಈಗಲಾದರೂ ಇದರ ತೀರ್ಮಾನವನ್ನು ಹಝ್ರತ್ ಪೈಗಂಬರ್(ಸ)ರಿಗೆ ಬಿಟ್ಟುಕೊಡಿರಿ. ಅವರು ಮಾಡುವ ತೀರ್ಮಾನದಲ್ಲೇ ನಮ್ಮ ಒಳಿತು ಅಡಗಿರುವುದು. ಹಝ್ರತ್ ಪೈಗಂಬರ್(ಸ) ಯುದ್ಧವಸ್ತ್ರವನ್ನು ಧರಿಸಿ ಹೊರಗೆ ಬಂದರು. ಹಝ್ರತ್ ಪೈಗಂಬರ್(ಸ) ಅವರು ಎರಡು ಯುದ್ಧ ಕವಚಗಳನ್ನು ಧರಿಸಿದ್ದರು ಅಂದರೆ ಒಂದು ಮೇಲೆ ಇನ್ನೊಂದು. ಇವು ಝಾತುಲ್–ಫುಝುಲ್ ಮತ್ತು ಫಿಜ್ಜಾ ಎಂಬ ರಕ್ಷಾಕವಚಗಳಾಗಿವೆ ಮತ್ತು ಝಾತ್ ಅಲ್–ಫುಝುಲ್ ಅಂದರೆ ಅವರು(ಸ) ಬದ್ರ್ ಯುದ್ಧಕ್ಕೆ ಹೋಗುತ್ತಿರುವಾಗ ಹಝ್ರತ್ ಸಾದ್ ಬಿನ್ ಉಬಾದಾಹ್(ರ) ರವರು ಅವರಿಗೆ ಕಳುಹಿಸಿದ್ದ ರಕ್ಷಾಕವಚವಾಗಿತ್ತು ಮತ್ತು ಹಝ್ರತ್ ಪೈಗಂಬರ್(ಸ) ಅವರು ನಿಧನ ಹೊಂದಿದ ಸಮಯದಲ್ಲಿ ಈ ರಕ್ಷಾಕವಚವು ಒಬ್ಬ ಯಹೂದಿಯ ಬಳಿ ಗಿರವಿಯಾಗಿತ್ತು. ನಂತರ ಹಝ್ರತ್ ಅಬೂಬಕರ್(ರ) ಅವರು ಈ ರಕ್ಷಾಕವಚವನ್ನು ಪುನಃ ಪಡೆದುಕೊಂಡರು. ಹಝ್ರತ್ ಪೈಗಂಬರ್(ಸ) ಅವರ ಬದಿಯಲ್ಲಿ ಕತ್ತಿ ನೇತಾಡುತ್ತಿತ್ತು ಮತ್ತು ಅವರ ಬೆನ್ನಿನಲ್ಲಿ ಬತ್ತಳಿಕೆ ಇತ್ತು. ಒಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ಅವರು ಸಕಬ್ ಎಂಬ ಹೆಸರಿನ ತಮ್ಮ ಕುದುರೆಯನ್ನು ಏರಿದರು, ಅವರ ಬಿಲ್ಲನ್ನು ನೇತುಹಾಕಿದರು ಮತ್ತು ಅವರ ಕೈಯಲ್ಲಿ ಈಟಿಯನ್ನು ತೆಗೆದುಕೊಂಡಿದ್ದರು. ಆದರೆ, ಈ ಎರಡು ಸಂಗತಿಗಳು ನಡೆದಿರುವ ಸಾಧ್ಯತೆ ಇದೆ. ಬೇರೆ ಬೇರೆ ಜನ ನೋಡಿದರು. ಹಝ್ರತ್ ಪೈಗಂಬರ್(ಸ) ತಮ್ಮ ಮನೆಯಿಂದ ಹೊರಬಂದಾಗ, ಅವರು ಆಯುಧವನ್ನು ಧರಿಸಿದ್ದರು ಮತ್ತು ಮಾಲಿಕ್ ಬಿನ್ ಅಮ್ರ್ ನಜ್ಜಾರಿ(ರ.ಅ) ನಿಧನರಾದರು ಮತ್ತು ಅವರ ದೇಹವನ್ನು ಸ್ಮಶಾನದಲ್ಲಿ ಇರಿಸಲಾಗಿದೆ ಎಂದು ಅವರಿಗೆ ತಿಳಿಸಲಾಯಿತು. ಹೊರಡುವ ಮುನ್ನ ಅವರ ಜನಾಝವನ್ನು ನಿರ್ವಹಿಸಿದರು. ಆ ಸಮಯದಲ್ಲಿ, ಜನರು ಅವರನ್ನು ಕೇಳಿದರು, ಯಾ ರಸೂಲಲ್ಲಾಹ್(ಸ)!! ನಿಮ್ಮ ಅಭಿಪ್ರಾಯವನ್ನು ವಿರೋಧಿಸುವುದು ಅಥವಾ ನಿಮ್ಮನ್ನು ಒತ್ತಾಯಿಸುವುದು ನಮ್ಮ ಉದ್ದೇಶವಾಗಿರಲಿಲ್ಲ, ಆದ್ದರಿಂದ ನೀವು ಸೂಕ್ತವೆಂದು ಭಾವಿಸುವ ಪ್ರಕಾರ ನೀವು ವರ್ತಿಸಬೇಕು. ಒಂದು ವರದಿಯಲ್ಲಿ ನಿವು ಹೊರಗೆ ಹೋಗಿ ಯುದ್ಧವಾಡಲು ಇಷ್ಟಪಡದಿದ್ದರೆ ಇಲ್ಲಿಯೇ ಇದ್ದು ಯುದ್ಧವಾಡಬಹುದು ಎಂದು ಇದೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮತ್ತು ಅವನ ಶತ್ರುಗಳ ನಡುವೆ ಅವನು ತೀರ್ಮಾನ ಮಾಡುವ ತನಕ ಯುದ್ಧವಸ್ತ್ರವನ್ನು ಧರಿಸಿದ ನಂತರ ಅದನ್ನು ಕಳಚುವುದು ಪ್ರವಾದಿಗೆ ಅನುಮತನೀಯವಲ್ಲ. (ಸೀರತ್ ಅಲ್–ಹಲ್ಬಿಯಾ, ಸಂಪುಟ 2, ಪುಟ 298–299, ದಾರುಲ್ ಕುತುಬ್ ಅಲ್–ಇಲ್ಮಿಯಾ ಬೈರುತ್) (ಸಬ್ಲುಲ್ ಹುದಾ, ಸಂಪುಟ–4, ಪುಟ–186, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಹಝ್ರತ್ ಪೈಗಂಬರ್(ಸ.ಅ) ರವರ ಸಿದ್ಧತೆಗಳು ಮತ್ತು ಸಹಾಬಿಗಳ ತಪ್ಪಿನ ಅರಿವನ್ನು ಉಲ್ಲೇಖಿಸುತ್ತಾ ಹೀಗೆ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಮನೆಯೊಳಗೆ ಹೋಗಿ ಹಝ್ರತ್ ಅಬುಬಕರ್(ರ) ಮತ್ತು ಹಝ್ರತ್ ಉಮರ್(ರ) ಅವರ ಸಹಾಯದಿಂದ ಪೇಟವನ್ನು ಕಟ್ಟಿದರು ಮತ್ತು ಯುದ್ಧವಸ್ತ್ರವನ್ನು ತೊಡಿಸಿದರು. ನಂತರ ಅವರು ಆಯುಧಗಳನ್ನು ಧರಿಸಿ ಅಲ್ಲಾಹನ ಹೆಸರನ್ನು ಪಡೆದುಕೊಂಡು ಮನೆಯ ಹೊರಗೆ ಬಂದರು. ಆದರೆ ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ) ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ತಮ್ಮ ಅಭಿಪ್ರಾಯವನ್ನು ಹೇಳಬಾರದಿತ್ತು ಎಂದು ಕೆಲವು ಸಹಚರರು ಈ ತರುಣರಿಗೆ ಹೇಳಿದಾಗ ಆ ತರುಣರಿಗೆ ತಮ್ಮ ತಪ್ಪಿನ ಅರಿವಾಯಿತು. ಈ ಅರಿವು ಅವರಿಗೆ ಬಂದಾಗ, ಅವರಲ್ಲಿ ಹೆಚ್ಚಿನವರು ಪಶ್ಚಾತ್ತಾಪ ಪಡಲು ಒಲವು ತೋರಿದರು. ಈ ಜನರು ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಶಸ್ತ್ರಸಜ್ಜಿತರಾಗಿ ಎರಡು ರಕ್ಷಾಕವಚಗಳನ್ನು ಧರಿಸಿ ಬರುವುದನ್ನು ನೋಡಿದಾಗ, ಅವರ ವಿಷಾದವು ಇನ್ನಷ್ಟು ಹೆಚ್ಚಾಯಿತು ಮತ್ತು ಅವರು ಯಾ ರಸೂಲಲ್ಲಾಹ್(ಸ)! ನಾವು ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಅಭಿಪ್ರಾಯವನ್ನು ಒತ್ತಾಯಿಸಿ ನಾವು ತಪ್ಪು ಮಾಡಿದ್ದೇವೆ. ನಿಮಗೆ ಸರಿಹೊಂದುವಂತೆ ವರ್ತಿಸಿರಿ. ಇನ್‌ಶಾಅಲ್ಲಾಹ್, ಅದರಲ್ಲಿಯೇ ಅನುಗ್ರಹವಿರುತ್ತದೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು:

ಅಲ್ಲಾಹನು ಮತ್ತು ಅವನ ಶತ್ರುಗಳ ನಡುವೆ ಅವನು ತೀರ್ಮಾನ ಮಾಡುವ ತನಕ ಯುದ್ಧವಸ್ತ್ರವನ್ನು ಧರಿಸಿದ ನಂತರ ಅದನ್ನು ಕಳಚುವುದು ಪ್ರವಾದಿಗೆ ಅನುಮತನೀಯವಲ್ಲ. ಆದುದರಿಂದ ಈಗ ಅಲ್ಲಾಹನ ಹೆಸರಿನೊಂದಿಗೆ ಹೋಗಿ ಮತ್ತು ನೀವು ತಾಳ್ಮೆಯಿಂದ ವರ್ತಿಸಿದರೆ, ಅಲ್ಲಾಹನ ಸಹಾಯವು ನಿಮ್ಮೊಂದಿಗೆ ಇರುತ್ತದೆ ಎಂದು ಖಚಿತಪಡಿಸಿಕೊಳ್ಳಿ. (ಸೀರತ್ ಖಾತಮನ್ನಬೀಈನ್(ಸ), ಸಾಹಿಬ್‌ಝಾದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ಪುಟ 485–486)

ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಅವರು ಈ ವಿಷಯದಲ್ಲಿ ಹೇಳಿದ್ದಾರೆ: ಹಝ್ರತ್ ಪೈಗಂಬರ್(ಸ) ಹೊರಬಂದಾಗ, ಯುವಕರು ತಮ್ಮ ಹೃದಯದಲ್ಲಿ ಪಶ್ಚಾತ್ತಾಪಪಟ್ಟರು ಮತ್ತು ಅವರೆಲ್ಲರು ಹೇಳಿದರು: ಯಾ ರಸೂಲಲ್ಲಾಹ್(ಸ)!! ನೀವು ಸೂಚಿಸಿದ್ದು ಸರಿಯೇ ನಾವು ಮದೀನಾದಲ್ಲಿಯೇ ಇದ್ದು ಶತ್ರುಗಳ ವಿರುದ್ಧ ಹೋರಾಡಬೇಕು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ದೇವನ ಒಬ್ಬ ಪ್ರವಾದಿಯು ರಕ್ಷಾಕವಚವನ್ನು ಧರಿಸಿದ ನಂತರ ಅದನ್ನು ಕಳಚುವುದಿಲ್ಲ. ಈಗ ಏನೇ ಆಗಲಿ ನಾವು ನಾವು ಮುಂದೆ ಹೋಗುತ್ತೇವೆ. ನೀವು ತಾಳ್ಮೆಯಿಂದ ವರ್ತಿಸಿದರೆ ದೇವರ ಸಹಾಯ ನಿಮಗೆ ಲಭಿಸುತ್ತದೆ. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವರುಲ್ ಉಲೂಮ್, ಸಂಪುಟ–20, ಪುಟ–248)

ಆದಾಗ್ಯೂ, ಇಸ್ಲಾಮಿನ ಸೈನ್ಯದ ನಿರ್ಗಮನದ ಸಿದ್ಧತೆಗಳು ಪ್ರಾರಂಭವಾದವು. ಹಝ್ರತ್ ಪೈಗಂಬರ್(ಸ)ರು 1,000 ಸೈನ್ಯದೊಂದಿಗೆ ಮದೀನಾವನ್ನು ತೊರೆದರು. (ಅಸ್ಸೀರತುಲ್ ಹಲಬೀಯ ಲಿಇಬ್ನೆ ಹಿಶ್ಶಾಮ್, ಭಾಗ–3, ಪುಟ–448)

ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೊರಡುವಾಗ ಮೂರು ಈಟಿಗಳನ್ನು ಅವಶ್ಯಪಟ್ಟರು ಮತ್ತು ಅವುಗಳಲ್ಲಿ ಮೂರು ಪತಾಕೆಗಳನ್ನು ಕಟ್ಟಿದರು. ಔಸ್ ಗೋತ್ರದ ಧ್ವಜವನ್ನು ಉಸೈದ್ ಬಿನ್ ಹುಝೈರ್(ರ)ಗೆ ನೀಡಿದರು. ಖಝ್‌ರಜ್ ಗೋತ್ರದ ಧ್ವಜವನ್ನು ಹಬ್ಬಾಬ್ ಬಿನ್ ಮುಂಧಿರ್(ರ)ರಿಗೆ ನೀಡಿದರು ಮತ್ತು ಮುಹಾಜಿರರ ಧ್ವಜವನ್ನು ಹಝ್ರತ್ ಅಲಿ(ರ)ರಿಗೆ ನೀಡಿದರು. ಮದೀನದಲ್ಲಿ ಉಳಿದ ಜನರಿಗಾಗಿ ನಮಾಝಿನ ಇಮಾಮತ್ ವಹಿಸಲಿಕ್ಕಾಗಿ ಇಬ್ನು ಮಕ್ತೂಮ್(ರ)ರನ್ನು ಹಝ್ರತ್ ಪೈಗಂಬರ್(ಸ) ತನ್ನ ಪ್ರತಿನಿಧಿಯನ್ನಾಗಿ ನೇಮಿಸಿದರು.

ನಂತರ ಹಝ್ರತ್ ಪೈಗಂಬರ್(ಸ)ರು ಸಕಬ್ ಎಂಬ ಹೆಸರಿನ ಕುದುರೆಯನ್ನು ಏರಿದರು ಮತ್ತು ಅವರ ಕುತ್ತಿಗೆಗೆ ಬಿಲ್ಲನ್ನು ಹಾಕಿದರು ಮತ್ತು ಅವರ ಕೈಯಲ್ಲಿ ಈಟಿಯನ್ನು ತೆಗೆದುಕೊಂಡರು. ಉಹುದ್ ದಿನದಂದು ಮುಸ್ಲಿಮರು ಎರಡು ಕುದುರೆಗಳನ್ನು ಹೊಂದಿದ್ದರು ಎಂದು ವರದಿಯಾಗಿದೆ. ಒಂದು ಕುದುರೆ ಹಝ್ರತ್ ಪೈಗಂಬರ್(ಸ) ಅವರ ಬಳಿ ಇತ್ತು, ಅದರ ಹೆಸರು ಸಕಬ್ ಎಂದಾಗಿತ್ತು ಮತ್ತು ಇನ್ನೊಂದು ಕುದುರೆ ಹಝ್ರತ್ ಅಬು ಬುರ್ದಾ(ರ) ಅವರ ಬಳಿ ಇತ್ತು ಅದರ ಹೆಸರು ಮಲಾವಿಹ್ ಎಂದಾಗಿತ್ತು. ಮತ್ತು ಮುಸ್ಲಿಮರು ಸಹ ತಮ್ಮ ಶಸ್ತ್ರಾಸ್ತ್ರಗಳನ್ನು ಸಿದ್ಧಪಡಿಸಿಕೊಂಡಿದ್ದರು. ಅವರಲ್ಲಿ ನೂರು ಮಂದಿ ಶಸ್ತ್ರಸಜ್ಜಿತರಾಗಿದ್ದರು. ಮತ್ತು ಇಬ್ಬರು ಸಾದ್‌ಗಳು, ಅಂದರೆ ಸಾದ್ ಬಿನ್ ಮುಆದ್(ರ) ಮತ್ತು ಸಾದ್ ಬಿನ್ ಉಬಾದಾಹ್(ರ) ಹಝ್ರತ್ ಪೈಗಂಬರ್(ಸ) ಅವರ ಮುಂದೆ ಓಡಲು ಪ್ರಾರಂಭಿಸಿದರು. ಅವರಿಬ್ಬರೂ ರಕ್ಷಾಕವಚಗಳನ್ನು ಧರಿಸಿದ್ದರು ಮತ್ತು ಅವರ ಬಲ ಮತ್ತು ಎಡಭಾಗದಲ್ಲಿ ಜನರು ಇದ್ದರು.

ಹಝ್ರತ್ ಪೈಗಂಬರ್(ಸ) ಅವರು ಸನಿಯಾಗೆ ತಲುಪಿದಾಗ ಅವರು ಬಹಳ ಶಸ್ತ್ರಸಜ್ಜಿತ ಸೈನ್ಯವನ್ನು ನೋಡಿದರು. ಇದು ಏನು? ಎಂದು ನೀವು(ಸ) ಕೇಳಿದಾಗ. ಸಹಾಬರವರು ಉತ್ತರಿಸಿದರು ಅವರು ಯಹೂದಿಗಳಲ್ಲಿ ಅಬ್ದುಲ್ಲಾ ಬಿನ್ ಉಬೈ ಅವರ ಮಿತ್ರರಾಗಿದ್ದಾರೆ. ಅದಕ್ಕೆ ಮತ್ತೆ ಹಝ್ರತ್ ಪೈಗಂಬರ್(ಸ) ಕೇಳಿದರು ಯಹೂದಿಗಳು ಇಸ್ಲಾಂ ಧರ್ಮವನ್ನು ತಂದಿದ್ದಾರೆಯೇ? ಅದಕ್ಕೆ ಇಲ್ಲ ಎಂದು ಉತ್ತರ ನೀಡಲಾಯಿತು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ನಾವು ಬಹುದೇವತಾವಾದಿಗಳ ವಿರುದ್ಧ ಸತ್ಯನಿಷೇಧಿಗಳಿಗೆ ಸಹಾಯವನ್ನು ಪಡೆಯುವುದಿಲ್ಲ.

(ಸಬ್ಲುಲ್ ಹುದ ವರ್‌ಶ್ಶಾದ್, ಸಂಪುಟ–4, ಪುಟ–186, ದಾರುಲ್ ಕುತುಬ್ ಅಲ್‌ಇಲ್ಮೀಯ ಬೈರುತ್) (ಅತ್ತಬಖಾತುಲ್ ಕುಬ್ರ, ಸಂಪುಟ–1, ಪುಟ–380, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಈ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಕೂಡ ಬರೆದಿದ್ದಾರೆ "ಹಝ್ರತ್ ಪೈಗಂಬರ್(ಸ) ಅವರು ಇಸ್ಲಾಮಿನ ಸೈನ್ಯಗಾಗು ಮೂರು ಧ್ವಜಗಳನ್ನು ಸಿದ್ಧಪಡಿಸಿದರು. ಔಸ್ ಗೋತ್ರದ ಧ್ವಜವನ್ನು ಉಸೈದ್ ಬಿನ್ ಅಲ್–ಹುದೈರ್(ರ) ಅವರಿಗೆ ವಹಿಸಲಾಯಿತು, ಮತ್ತು ಖಝ್‌ರಜ್ ಗೋತ್ರದ ಧ್ವಜವನ್ನು ಹಬಾಬ್ ಬಿನ್ ಮುಂಧಿರ್(ರ) ಅವರಿಗೆ ಮತ್ತು ಮುಹಾಜಿರರ ಧ್ವಜವನ್ನು ಹಝ್ರತ್ ಅಲಿ(ರ) ಅವರಿಗೆ ನೀಡಲಾಯಿತು. ಮದೀನದಲ್ಲಿ ಉಳಿದ ಜನರಿಗೆ ನಮಾಝಿನ ಇಮಾಮತ್ ವಹಿಸಲಿಕ್ಕಾಗಿ ಅಬ್ದುಲ್ಲಾಹ್ ಇಬ್ನೆ ಮಕ್ತೂಮ್(ರ) ಅವರನ್ನು ಇಮಾಮುಸ್ಸಲಾತ್ ಆಗಿ ನೇಮಿಸಿ ಹಝ್ರತ್ ಪೈಗಂಬರ್(ಸ) ಅವರು ಅಸ್ರ್ ನಮಾಝಿನ ನಂತರ ಸಹಾಬರವರ ದೊಡ್ಡ ಸೈನ್ಯದೊಂದಿಗೆ ಮದೀನಾವನ್ನು ತೊರೆದರು. ಔಸ್ ಮತ್ತು ಖಝ್‌ರಜ್ ಗೋತ್ರಗಳ ಮುಖ್ಯಸ್ಥರಾದ ಸಾದ್ ಬಿನ್ ಮುಆದ್(ರ) ಮತ್ತು ಸಾದ್ ಬಿನ್ ಉಬಾದಾಹ್(ರ) ಅವರು ರಸೂಲುಲ್ಲಾಹ್(ಸ) ಅವರ ಸವಾರಿಯ ಮುಂದೆ ನಿಧಾನವಾಗಿ ಓಡುತ್ತಿದ್ದರು ಮತ್ತು ಉಳಿದ ಸಹಚರರು ಅವರ ಬಲಕ್ಕೆ, ಎಡಕ್ಕೆ ಮತ್ತು ಹಿಂದೆ ನಡೆಯುತ್ತಿದ್ದರು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–486) (ಶರಹ್ ಝುರ್ಕಾನಿ, ಸಂಪುಟ–2, ಪುಟ–398, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಹಝ್ರತ್ ಪೈಗಂಬರ್(ಸ) ಹೊರಟು ಶೇಖೈನ್ ಎಂಬ ಸ್ಥಳಕ್ಕೆ ತಲುಪಿದ ನಂತರ ಅವರು ಬಿಡಾರ ಹೂಡಿದರು. ಇದು ಮದೀನಾದ ಎರಡು ಪರ್ವತಗಳಾಗಿದ್ದವು. ಇಲ್ಲಿಗೆ ತಲುಪಿದಾಗ, ಅವರು(ಸ) ತಮ್ಮ ಸೈನ್ಯವನ್ನು ಪರೀಕ್ಷಿಸಿದರು ಮತ್ತು 15 ವರ್ಷಕ್ಕಿಂತ ಕಡಿಮೆ ಪ್ರಾಯದ ಹುಡುಗರನ್ನು ಯುದ್ಧದಲ್ಲಿ ಭಾಗವಹಿಸುವುದರಿಂದ ತಡೆಯುತ್ತಾ ಅಂಥವರನ್ನು ಕೂಡ ಮರಳಿ ಕಳುಹಿಸಿದರು. (ಸೀರತ್ ಅಲ್–ಹಲ್ಬಿಯಾ, ಸಂಪುಟ–2, ಪುಟ–300, ದಾರುಲ್ ಕುತುಬ್ ಅಲಿಲ್ಮೀಯ ಬೈರುತ್) (ಸಬ್ಲುಲ್ ಹುದಾ ಅನುವಾದಕ, ಸಂಪುಟ 4, ಪುಟ 175)

ಇಮಾಂ ಶಾಫಿ(ರಹ್) ರವರು ಹೇಳುತ್ತಾರೆ ಹಝ್ರತ್ ಪೈಗಂಬರ್(ಸ) ಅವರು 14 ವರ್ಷ ಪ್ರಾಯದ ಆ 17 ತರುಣರನ್ನು ಹಿಂದಿರುಗಿಸಿದರು. ಮತ್ತು ಹದಿನೈದು ವರ್ಷದ ಹುಡುಗರನ್ನು ಅವರ(ಸ) ಮುಂದೆ ಹಾಜರುಪಡಿಸಿದಾಗ ಹಝ್ರತ್ ಪೈಗಂಬರ್(ಸ) ರವರು ಅವರನ್ನು ಅನುಮತಿಸಿದರು.

ಚಿಕ್ಕ ಪ್ರಾಯದ ಕಾರಣದಿಂದ ಹಿಂದಿರುಗಿದ ಮಕ್ಕಳು ಶಕ್ತಿಯುತ ಮಕ್ಕಳಾಗಿದ್ದರು, ಅವರಲ್ಲಿ ಕೆಲವರ ಹೆಸರುಗಳು ವರದಿಗಳಲ್ಲಿ ಕಂಡುಬರುತ್ತವೆ: ಅಬ್ದುಲ್ಲಾ ಬಿನ್ ಉಮರ್, ಝಾಯ್ದ್ ಬಿನ್ ಸಾಬಿತ್, ಉಸಾಮ ಬಿನ್ ಝೈದ್, ಝೈದ್ ಬಿನ್ ಅರ್ಕಾಮ್, ಬರಾ ಬಿನ್ ಆಝಿಬ್, ಉಸೈದ್ ಬಿನ್ ಝುಹೈರ್, ಅರಬಾಹ್ ಬಿನ್ ಔಸ್, ಅಬು ಸಯೀದ್ ಖುದ್ರಿ, ಔಸ್ ಬಿನ್ ಸಾಬಿತ್, ಸಾದ್ ಬಿನ್ ಬಹೀರ್, ಇಬ್ನ್ ಮುಆವಿಯಾ ಬಜ್ಲಿ, ಸಯೀದ್ ಬಿನ್ ಹಬ್ತಾ (ಹಬ್ತಾ ಎಂಬುದು ಅವರ ತಾಯಿಯ ಹೆಸರು),

ಸಾದ್ ಬಿನ್ ಉಕೈಬ್, ಝೈದ್ ಬಿನ್ ಜಾರಿಯಾ, ಜಾಬಿರ್ ಬಿನ್ ಅಬ್ದುಲ್ಲಾ (ಇವರು ಹದೀಸ್‌ಗಳನ್ನು ವರದಿ ಮಾಡುವವರು ಆ ಜಾಬಿರ್ ಬಿನ್ ಅಬ್ದುಲ್ಲಾ ಅಲ್ಲ. ಇವರು ಬೇರೆಯವರಾಗಿದ್ದಾರೆ) ರಾಫಿ ಬಿನ್ ಖದೀಜ್ ಮತ್ತು ಸಮ್ರಾ ಬಿನ್ ಜುಂದುಬ್.

ರಾಫಿ ಬಿನ್ ಖದೀಜ್ ಅವರ ಬಗ್ಗೆ ಅವರು ಬಿಲ್ಲುಗಾರ ಎಂದು ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳಲಾಯಿತು, ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರಿಗೆ ಅನುಮತಿ ನೀಡಿದರು. ಮೊದಲಿಗೆ ಅವರು ಹಿಂತಿರುಗಲು ಹೇಳಿದರು, ಅವರು ಉತ್ತಮ ಬಿಲ್ಲುಗಾರ ಎಂದು ತಿಳಿಸಿದಾಗ, ಅವರಿಗೆ ಅನುಮತಿ ನೀಡಲಾಯಿತು.

ಈ ಬಗ್ಗೆ ಸಮ್ರ ಬಿನ್ ಜುಂದುಬ್ ಹೇಳಿದರು: ಹಝ್ರತ್ ಪೈಗಂಬರ್(ಸ) ಅವರು ರಾಫಿ ಬಿನ್ ಖದೀಜ್(ರ) ಅವರಿಗೆ ಅನುಮತಿ ನೀಡಿದ್ದಾರೆ ನಾನು ಕುಸ್ತಿಯಲ್ಲಿ ಅವರಿಗೆ ಸೋಲಿಸಬಹುದು. ಹಝ್ರತ್ ಪೈಗಂಬರ್(ಸ) ಅವರಿಗೆ ಈ ವಿಷಯ ತಿಳಿದಾಗ, ಅವರು ನೀವಿಬ್ಬರು ಕುಸ್ತಿ ಮಾಡಿ ಎಂದು ಹೇಳಿದರು. ಕುಸ್ತಿಯಲ್ಲಿ ಸಮ್ರಾ ರಾಫಿಯನ್ನು ಉರುಳಿಸಿದರು, ಆದ್ದರಿಂದ ಅವರು ಅವರಿಗೂ ಅನುಮತಿ ನೀಡಿದರು.

ಮತ್ತೆ ಆ ವರದಿಯಲ್ಲಿ ಮುಂದೆ ಹೀಗೆ ಪ್ರಸ್ತಾಪಿಸಲಾಗದೆ: ಹಝ್ರತ್ ಪೈಗಂಬರ್(ಸ)ರು ಸೈನ್ಯವನ್ನು ಪರೀಕ್ಷಿಸುವುದನ್ನು ಮುಗಿಸಿದಾಗ ಮತ್ತು ಸೂರ್ಯ ಮುಳುಗಿದಾಗ, ಹಝ್ರತ್ ಬಿಲಾಲ್(ರ) ಅವರು ಮಗ್ರಿಬ್ ಅಝಾನ್ ಅನ್ನು ನೀಡಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರು ನಮಾಝನ್ನು ನಿರ್ವಹಿಸಿದರು. ನಂತರ ಇಶಾ ನಮಾಝ್‌ಗೆ ಅಝಾನ್ ನೀಡಲಾಯಿತು ಮತ್ತು ಹಝ್ರತ್ ಪೈಗಂಬರ್(ಸ) ಅವರು ನಮಾಝ್ ನಿರ್ವಹಿಸಿ ಕೊಟ್ಟರು ಮತ್ತು ಈ ರಾತ್ರಿಯು ಶೈಖೈನ್ ಎಂಬ ಸ್ಥಳದಲ್ಲಿ ಕಳೆದರು ಮತ್ತು ಆ ರಾತ್ರಿ ಮುಹಮ್ಮದ್ ಬಿನ್ ಮುಸ್ಲಿಮಾ ಅವರನ್ನು ಕಾವಲುಗಾರರಾಗಿ ನೇಮಿಸಿದರು. ಅವರು ಐವತ್ತು ಜನರೊಂದಿಗೆ ಸೈನ್ಯದ ಸುತ್ತಲೂ ಸುತ್ತಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ರಾತ್ರಿ ನಮ್ಮನ್ನು ಯಾರು ರಕ್ಷಿಸುವರು? ಅಂದರೆ, ಇಡೀ ಸೈನ್ಯವನ್ನು ಮತ್ತು ಹಝ್ರತ್ ಪೈಗಂಬರ್(ಸ) ರವರನ್ನು ಯಾರು ರಕ್ಷಿಸುತ್ತಾರೆ. ಇದರ ಅರ್ಥವೇನೆಂದರೆ, ಯಾರು ಹಝ್ರತ್ ಪೈಗಂಬರ್(ಸ) ಹತ್ತಿರ ಉಳಿಯುತ್ತಾರೆ, ಇದರಿಂದ ಭದ್ರತೆಯನ್ನು ಸರಿಯಾಗಿ ವ್ಯವಸ್ಥೆಗೊಳಿಸಬಹುದು, ಆಗ ಝಕ್ವಾನ್ ಬಿನ್ ಅಬ್ದ್ ಕೈಸ್(ರ) ರವರು ಎದ್ದುನಿಂತರು. ಮತ್ತು ಅವರು ತನ್ನ ರಕ್ಷಾಕವಚವನ್ನು ಹಾಕಿಕೊಂಡು ತಮ್ಮ ಚರ್ಮದ ಗುರಾಣಿಯನ್ನು ಹಿಡಿದು ಹಝ್ರತ್ ಪೈಗಂಬರ್(ಸ)ರವರಿಗೆ ಕಾವಲು ನೀಡುತ್ತದ್ದರು ಮತ್ತು ಒಂದು ಕ್ಷಣವೂ ಅವರಿಂದ ಬೇರ್ಪಡಲಿಲ್ಲ, ಮತ್ತು ಹಝ್ರತ್ ಪೈಗಂಬರ್(ಸ) ಅವರು ಸುಹೂರ್ ಸಮಯದವರೆಗೆ ವಿಶ್ರಾಂತಿ ಪಡೆಯುತ್ತಿದ್ದರು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–187, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಮುಂಜಾನೆ ಹಝ್ರತ್ ಪೈಗಂಬರ್(ಸ)ಅವರು ಹೇಳಿದರು: ದೇವದೂತರು ಹಝ್ರತ್ ಹಂಝಾ(ರ) ಅವರಿಗೆ ಸ್ನಾನವನ್ನು ನೀಡುತ್ತಿರುವುದನ್ನು ನಾನು ಕನಸಿನಲ್ಲಿ ನೋಡಿದ್ದೇನೆ. (ಸೀರತುಲ್ ಹಲಬೀಯಾ, ಸಂಪುಟ 2, ಪುಟ 300, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಈ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಸೀರತ್ ಖಾತಮನ್ನಬೀಈನ್(ಸ) ನಲ್ಲಿ ಬರೆದಿದ್ದಾರೆ ಉಹದ್ ಪರ್ವತವು ಮದೀನಾದಿಂದ ಉತ್ತರಕ್ಕೆ ಸರಿಸುಮಾರು ಮೂರು ಮೈಲುಗಳಷ್ಟು ದೂರದಲ್ಲಿದೆ. ಅದರ ಮಧ್ಯಭಾಗದಲ್ಲಿ ಬಂದು ಶೇಖೈನ್ ಎಂಬ ಸ್ಥಳದಲ್ಲಿ ತಂಗಿದ್ದರು ಮತ್ತು ಇಸ್ಲಾಮಿನ ಸೈನ್ಯವನ್ನು ವಿಸರ್ಜಿಸಲು ಆದೇಶಿಸಿದರು. ಜಿಹಾದ್ ಉತ್ಸಾಹದಲ್ಲಿ ಬಂದಿದ್ದ ಚಿಕ್ಕ ಮಕ್ಕಳನ್ನು ವಾಪಸ್ ಕಳುಹಿಸಲಾಯಿತು. ಹಾಗಾಗಿ ಅಬ್ದುಲ್ಲಾ ಬಿನ್ ಉಮರ್, ಉಸಾಮಾ ಬಿನ್ ಝೈದ್, ಅಬು ಸಯೀದ್ ಖುದ್ರಿ ಮೊದಲಾದವರೆಲ್ಲರೂ ಹಿಂತಿರುಗಿದರು. ರಾಫಿ ಬಿನ್ ಖದೀಜ್ ಅವರು ಮಕ್ಕಳ ವಯಸ್ಸಿನವರಾಗಿದ್ದರು, ಆದರೆ ಅವರು ಬಿಲ್ಲುಗಾರಿಕೆಯಲ್ಲಿ ಉತ್ತಮ ಕೌಶಲ್ಯವನ್ನು ಹೊಂದಿದ್ದರು. ಅವರ ಈ ಗುಣದಿಂದಾಗಿ, ಅವರ ತಂದೆ ಅವರನ್ನು ಜಿಹಾದ್‌ನಲ್ಲಿ ಭಾಗವಹಿಸಲು ಅನುಮತಿಸಲು ಹಝ್ರತ್ ಪೈಗಂಬರ್(ಸ)ರ ಸೇವೆಯಲ್ಲಿ ಅವರನ್ನು ಶಿಫಾರಸು ಮಾಡಿದರು. ಆದ್ದರಿಂದ, ಅವರ ಪಣವು ಹೊರಟುಹೋಯಿತು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ಒಟ್ಟಿಗೆ ಹೋಗಲು ಅನುಮತಿ ನೀಡಿದರು. ಇದಾದ ನಂತರ, ಈಗಷ್ಟೇ ಹೇಳಿದಂತೆ, ಹಿಂದಿರುಗುವ ಆದೇಶವನ್ನು ಪಡೆದ ಸಮ್ರಾ ಬಿನ್ ಜುಂದಬ್ ಎಂಬ ಇನ್ನೊಂದು ಹುಡುಗ ತನ್ನ ತಂದೆಯ ಬಳಿಗೆ ಹೋಗಿ ರಾಫಿಯನ್ನು ಅನುಮತಿಸಿದ್ದರೆ ನನಗೂ ಸಹ ಅನುಮತಿ ನೀಡಬೇಕು ಏಕೆಂದರೆ ನಾನು ರಫಿಗಿಂತ ಬಲಶಾಲಿಯಾಗಿದ್ದೇನೆ ಎಂದು ಹೇಳಿದನು. ತಂದೆಯು ತನ್ನ ಮಗನ ಪ್ರಾಮಾಣಿಕತೆಗೆ ಬಹಳ ಸಂತೋಷಪಟ್ಟರು ಮತ್ತು ಅವನು ತನ್ನೊಂದಿಗೆ ಹಝ್ರತ್ ಪೈಗಂಬರ್(ಸ) ಸೇವೆಗೆ ಕರೆದೊಯ್ದು ತನ್ನ ಮಗನ ಆಸೆಯನ್ನು ವಿವರಿಸಿದರು.

ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕು ಹೇಳಿದರು, ರಾಫಿ ಮತ್ತು ಸಮ್ರಾಹ್ ಅವರ ಕುಸ್ತಿ ನಡೆಸಲಿ ಇದರಿಂದ ಯಾರು ಬಲಶಾಲಿ ಎಂದು ಕಂಡುಹಿಡಿಯಬಹುದು. ಆದ್ದರಿಂದ ಸ್ಪರ್ಧೆ ನಡೆಯಿತು ಮತ್ತು ವಾಸ್ತವವಾಗಿ ಸಮ್ರಾ ಅಲ್ಪಾವಧಿಯಲ್ಲಿ ರಾಫಿಯನ್ನು ಉರುಳಿಸಿದನು. ಅದನ್ನು ಕಂಡು ಹಝ್ರತ್ ಪೈಗಂಬರ್(ಸ) ಅವರು ಸಮ್ರಾವನ್ನು ಸಹ ಅವರೊಂದಿಗೆ ಹೋಗಲು ಅನುಮತಿಸಿದರು ಮತ್ತು ಹೀಗೆ ಈ ಮುಗ್ಧ ಮಗುವಿನ ಮನಸ್ಸಿಗೆ ಹರುಷವಾಯಿತು.

ಈಗ, ಸಂಜೆಯಾಗಿರುವುದರಿಂದ, ಬಿಲಾಲ್(ರ) ಅಝಾನ್ ಅನ್ನು ನೀಡಿದರು ಮತ್ತು ಎಲ್ಲಾ ಸಹಚರರು ಹಝ್ರತ್ ಪೈಗಂಬರ್(ಸ)ರ ಹಿಂದೆ ನಮಝ್ ನಿರ್ವಹಿಸದರು ಮತ್ತು ನಂತರ ಮುಸ್ಲಿಮರು ರಾತ್ರಿ ಇಲ್ಲಿಯೇ ಬಿಡಾರ ಹೂಡಿದರು, ಮತ್ತು ಹಝ್ರತ್ ಪೈಗಂಬರ್(ಸ)ರು ರಾತ್ರಿಯ ಕಾವಲಿಗಾಗಿ ಮುಹಮ್ಮದ್ ಬಿನ್ ಮುಸ್ಲಿಮಾರನ್ನು ನಿರ್ವಾಹಕರಾಗಿ ನೇಮಿಸಿದರು. ಅವರು ಐವತ್ತು ಸಹಚರರ ಗುಂಪಿನೊಂದಿಗೆ ರಾತ್ರಿಯಿಡೀ ಇಸ್ಲಾಮಿನ ಸೇನೆಯ ಸುತ್ತಲೂ ಕಾವಲು ಕಾಯುತ್ತಿದ್ದರು.” (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–486–487)

ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ಮೊದಲು ಜೊತೆಗೆ ಬಂದಿದ್ದನು. ಆದರೆ ಮಾರ್ಗ ಮಧ್ಯೆ ಮರಳಿ ಹೋಗಿದ್ದನು.

ಅದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಸಹರಿಯ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಶೇಖೇನ್ ಎಂಬ ಸ್ಥಳದಿಂದ ಮುಂದಕ್ಕೆ ಹೊರಟರು. ಮದೀನ ಮತ್ತು ಉಹುದಿನ ನಡುವೆ ಇರುವ ಶೌತ್ ಎಂಬ ಪ್ರದೇಶಕ್ಕೆ ತಲುಪಿದಾಗ ನಮಾಝಿನ ಸಮಯವಾಯಿತು ಮತ್ತು ಅಲ್ಲಿ ಅವರು ಫಜ್ರ್ ನಮಾಝ್ ನಿರ್ವಹಿಸಿದರು. ಶೌತ್ ಎಂಬುದು ಕುನಾಹ್ ಮತ್ತು ಮದೀನದ ನಡುವೆ ಇರುವ ಒಂದು ಪ್ರದೇಶವಾಗಿದೆ. ಇದೇ ಜಾಗದಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ತನ್ನ ಸಂಗಡಿಗರಾದ ಕಪಟವಿಶ್ವಾಸಿಗಳ ಸಮೇತ ಹಝ್ರತ್ ಪೈಗಂಬರ್(ಸ)ರ ಜೊತೆಯನ್ನು ಬಿಟ್ಟು ಮರಳಿ ಹೋದನು. ಅವನ ಜೊತೆಯಲ್ಲಿ ಮುನ್ನೂರು ಜನರಿದ್ದರು. ಮರಳಿ ಹೋಗುವಾಗ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ಹೇಳಿದನು: ನೀವು ನನ್ನ ಮಾತನ್ನು ಅಂಗೀಕರಿಸಲಿಲ್ಲ ಮತ್ತು ಹುಡುಗರ ಮಾತನ್ನು ಒಪ್ಪಿದ್ದೀರಿ. ನಾವು ಯಾವ ಆಧಾರದಲ್ಲಿ ನಮ್ಮ ಜೀವಗಳನ್ನು ತ್ಯಾಗ ಮಾಡುವುದು? ಹೀಗೆ ಅಬ್ದುಲ್ಲಾ ಹೇಳಿದನು. ಆದ್ದರಿಂದ ಓ ಜನರೇ! ಹಿಂತಿರುಗಿ ಹೋಗೋಣ, ಆದ್ದರಿಂದ, ಕಪಟವಿಶ್ವಾಸಿಗಳ ಸರ್ದಾರನ ಈ ಆದೇಶದ ಮೇರೆಗೆ, ಅವನ ಸಹ ಕಪಟಿಗಳು ಮುಸ್ಲಿಮರನ್ನು ತೊರೆದು ಹಿಂತಿರುಗಿದರು. ಹಝ್ರತ್ ಜಾಬಿರ್(ರ) ಅವರ ತಂದೆ ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್ ಅವರು ಹೋಗುವುದನ್ನು ನೋಡಿದ ನಂತರ ಅವರನ್ನು ಹಿಂಬಾಲಿಸಿದರು. ಅವರು ಅಬ್ದುಲ್ಲಾ ಬಿನ್ ಅಬಿ ಅವನಂತೆ ಖಝ್‌ರಜ್ ಗೋತ್ರದ ಶ್ರೇಷ್ಠ ನಾಯಕರಾಗಿದ್ದರು. ಅವರು ಹಿಂತಿರುಗಿ ಹೋಗುತ್ತಿದ್ದವರಿಗೆ ಹೇಳಿದರು, ನಿಮ್ಮ ಪ್ರವಾದಿ ಮತ್ತು ನಿಮ್ಮ ಜನರಿಗೆ ಶತ್ರುಗಳು ತನ್ನ ಎಲ್ಲಾ ಶಕ್ತಿಯಿಂದ ಅವರನ್ನು ಎದುರಿಸುತ್ತಿರುವ ಈ ಕ್ಷಣದಲ್ಲಿ ನೀವು ದ್ರೋಹ ಮಾಡುವುದು ಸರಿಯೇ ಎಂದು ನಾನು ಅಲ್ಲಾಹನ ಆಣೆ ಹಾಕಿ ನಿಮ್ಮನ್ನು ಕೇಳುತ್ತೇನೆ. ಅದಕ್ಕೆ ಆ ಜನರು ಹೇಳಿದರು ನೀವು ಯುದ್ಧ ಮಾಡುತ್ತೀರಿ ಎಂದು ನಮಗೆ ತಿಳಿದಿದ್ದರೆ ನಾವು ನಿಮ್ಮೊಂದಿಗೆ ಎಂದಿಗೂ ಬರುತ್ತಿರಲಿಲ್ಲ. ಯುದ್ಧ ಇತ್ಯಾದಿಗಳು ನಡೆಯುವುದಿಲ್ಲ ಎಂದು ನಾವು ಭಾವಿಸಿದ್ದೇವು. ಈ ರೀತಿ, ಅವರು ಉತ್ತಮ ಸಿದ್ಧತೆಯೊಂದಿಗೆ ಯುದ್ಧಕ್ಕೆ ಬಂದಿದ್ದರೂ ತಮ್ಮ ಸ್ಪಷ್ಟವಾದ ಮರಳುವಿಕೆಯನ್ನು ಘೋಷಿಸಿದರು. ಇದರ ಬಗ್ಗೆ ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ) ಹೇಳಿದರು, ದೇವರ ಶತ್ರುಗಳೇ! ಅಲ್ಲಾಹನು ನಿಮ್ಮನ್ನು ನಾಶಮಾಡಲಿ. ಶೀಘ್ರದಲ್ಲೇ ಅಲ್ಲಾಹನು ತನ್ನ ಪ್ರವಾದಿಯನ್ನು ನಿಮ್ಮಿಂದ ಬೇರ್ಪಡಿಸುತ್ತಾನೆ.

ಅಲ್ಲಾಮಾ ಇಬ್ನ್ ಜೌಝಿ(ರಹ್) ಬರೆಯುತ್ತಾರೆ, ಬನೂ ಸಲಾಮಾ ಮತ್ತು ಬನೂ ಹಾರಿಸಾ ಗೋತ್ರದವರು ಅಬ್ದುಲ್ಲಾ ಬಿನ್ ಉಬಯ್ಯ್‌ವಿನ ದ್ರೋಹವನ್ನು ನೋಡಿದಾಗ ಅವರೂ ಹಿಂತಿರುಗಲು ನಿರ್ಧರಿಸಿದರು. ಈ ಎರಡು ಗೋತ್ರಗಳು ಸೈನ್ಯದ ಎರಡೂ ತೋಳುಗಳಲ್ಲಿದ್ದವು, ಆದರೆ ನಂತರ ಸರ್ವಶಕ್ತನಾದ ಅಲ್ಲಾಹನು ಈ ಎರಡು ಗುಂಪುಗಳನ್ನು ಈ ಪಾಪದಿಂದ ರಕ್ಷಿಸಿದನು ಮತ್ತು ಅವರು ಹಿಂತಿರುಗುವ ಉದ್ದೇಶವನ್ನು ನಿಲ್ಲಿಸಿದರು. ಇದರ ಮೇಲೆ ಸರ್ವಶಕ್ತನಾದ ಅಲ್ಲಾಹನು ಈ ಆಯತ್ ಅನ್ನು ಅವತರಿಸಿದನು **ಇಝ್‌ಹಮ್ಮತ್ ತಾಯಿಫತಾನಿ ಮಿನ್‌ಕು ಅನ್ ತಫ್‌ಶಲ ವಲ್ಲಾಹು ವಲಿಯ್ಯುಹುಮಾ ವ ಅಲಲ್ಲಾಹಿ ಫಲ್‌ಯತವಕ್ಕಲಿಲ್ ಮುಮಿನೂನ್** (ಆಲಿ ಇಮ್ರಾನ್: 123) ನಿಮ್ಮಲ್ಲಿ ಎರಡು ಗುಂಪುಗಳು ಹೇಡಿತನವನ್ನು ತೋರಿಸಲು ಯೋಚಿಸಿದ ಸಂದರ್ಭ (ಜ್ಞಾಪಿಸು). ಆದಾಗ್ಯೂ ಅಲ್ಲಾಹನು ಆ ಎರಡು ಗುಂಪುಗಳ ಮಿತ್ರನಾಗಿದ್ದನು. ಸತ್ಯವಿಶ್ವಾಸಿಗಳು (ಎಲ್ಲ ಕಾರ್ಯಗಳಲ್ಲೂ) ಅಲ್ಲಾಹನ ಮೇಲೆಯೇ ಭರವಸೆಯನ್ನಿಡಬೇಕಾಗಿದೆ.

ಅಬ್ದುಲ್ಲಾಹ್ ಬಿನ್ ಉಬೈನ ಜೊತೆಗೆ ಮುನ್ನೂರು ಕಪಟವಿಶ್ವಾಸಿಗಳು ಮರಳಿದ ನಂತರ ಹಝ್ರತ್ ಪೈಗಂಬರ್(ಸ)ರ ಜೊತೆಗೆ 700 ಸಹಾಬಿಯರು ಮಾತ್ರ ಉಳಿದರು.

ಈ ಸಂದರ್ಭದಲ್ಲಿ ಅನ್ಸಾರರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹೀಗೆ ಹೇಳಿದರು: ಮದೀನದ ಯಹೂದಿಗಳಲ್ಲಿ ನಮ್ಮ ಮಿತ್ರರು ಮತ್ತು ಬೆಂಬಲಿಗರಿಂದ ನಾವೇಕೆ ಸಹಾಯ ಪಡೆಯಬಾರದು? ಹಝ್ರತ್ ಪೈಗಂಬರ್(ಸ) ಹೇಳಿದರು: ನಮಗೆ ಅವರ ಸಹಾಯದ ಅಗತ್ಯವಿಲ್ಲ. (ಸೀರತುಲ್ ಹಲಬೀಯ, ಸಂಪುಟ–2, ಪುಟ–301, ದರುಲ್ ಕುತುಬ್ ಇಲ್‌ಮಿಯ ಬೈರುತ್) (ಫರ್ಹಂಗ್ ಸೀರತ್, ಪುಟ–167, ಝುವಾರಾ ಅಕಾಡಮಿ ಕರಾಚಿ)

ಈ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಕೂಡ ಬರೆದಿದ್ದಾರೆ “ಎರಡನೇ ದಿನ ಅಂದರೆ 15 ಶವ್ವಾಲ್ 3 ಹಿಜ್ರಿ 31 ಮಾರ್ಚ್ ಕಿರ.ಶ. 624 ಶನಿವಾರದಂದು ಬೆಳಗ್ಗಿನ ಸಮಯದಲ್ಲಿ, ಇಸ್ಲಾಮಿನ ಸೈನ್ಯದ ಮುಂದೆ ಸಾಗಿತು ಮತ್ತು ದಾರಿಯಲ್ಲಿ ನಮಾಝನ್ನು ನಿರ್ವಹಿಸುತ್ತ ಮುಂಜಾನೆ ಉಹದ್ ಬಳಿ ತಲುಪಿತು. ಈ ಸಂದರ್ಭದಲ್ಲಿ ಕಪಟಿಗಳ ನಾಯಕ ಅಬ್ದುಲ್ಲಾ ಬಿನ್ ಉಬಯ್ಯ ಬಿನ್ ಸಲೂಲ್ ದ್ರೋಹ ಮಾಡಿ ತನ್ನ ಮುನ್ನೂರು ಸಹಚರರೊಂದಿಗೆ ಮುಸಲ್ಮಾನರ ಸೈನ್ಯವನ್ನು ತೊರೆದು ಮುಹಮ್ಮದ್(ಸ) ನನ್ನ ಮಾತನ್ನು ಅಂಗೀಕರಿಸಲಿಲ್ಲ ಮತ್ತು ಹುಡುಗರ ಮಾತನ್ನು ಒಪ್ಪಿದ್ದೀರಿ ಆದುದರಿಂದ ನಾನು ಅವರೊಂದಿಗೆ ಹೋರಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾ ಮದೀನಾಗೆ ಹಿಂತಿರುಗಿದನು. ಈ ದ್ರೋಹವು ಸರಿಯಲ್ಲ ಎಂದು ಕೆಲವರು ಖುದ್ದಾಗಿ ಅವರಿಗೆ ಸಮಜಾಯಿಷಿ ನೀಡಿದರೂ ಆತನು ಒಬ್ಬರ ಮಾತನ್ನು ಕೇಳದೆ ಯುದ್ಧವಾಗಿದ್ದರೆ ನಾನೂ ಸಹ ಭಾಗವಹಿಸುತ್ತಿದ್ದೆ ಆದರೆ ಇದು ಯುದ್ಧವಲ್ಲ ಬದಲಿಗೆ ಇದು ಸ್ವತಃ ನಾಶದ ಬಾಯಿಗೆ ಹೋಗುವುದಾಗಿದೆ.

ಈಗ ಇಸ್ಲಾಮಿನ ಸೈನ್ಯದ ಸಂಖ್ಯೆಯು ಕೇವಲ ಏಳುನೂರು ಸೈನಿಕರನ್ನು

ಒಳಗೊಂಡಿತ್ತು, ಇದು ಅವಿಶ್ವಾಸಿಗಳ ಮೂರು ಸಾವಿರ ಸೈನಿಕರಿಗೆ ಹೋಲಿಸಿದರೆ ನಾಲ್ಕನೇ ಒಂದು ಭಾಗಕ್ಕಿಂತ ಕಡಿಮೆಯಾಗಿತ್ತು ಮತ್ತು ಅಶ್ವಸೈನ್ಯ ಮತ್ತು ಯುದ್ಧ ಸಲಕರಣೆಗಳ ವಿಷಯದಲ್ಲಿ, ಇಸ್ಲಾಮಿನ ಸೈನ್ಯವು ಸಂಪೂರ್ಣವಾಗಿ ದುರ್ಬಲವಾಗಿತ್ತು ಮತ್ತು ಖುರೈಶ್ಗಿಂತ ಕೆಳಮಟ್ಟದಲ್ಲಿತ್ತು. ಏಕೆಂದರೆ ಮುಸ್ಲಿಂ ಸೈನ್ಯದಲ್ಲಿ ಕೇವಲ ನೂರು ಶಸ್ತ್ರಸಜ್ಜಿತರು ಮತ್ತು ಕೇವಲ ಎರಡು ಕುದುರೆಗಳಿದ್ದವು. ಅವರಿಗೆ ವ್ಯತಿರಿಕ್ತವಾಗಿ, ಅವಿಶ್ವಾಸಿಗಳ ಸೈನ್ಯದಲ್ಲಿ ಏಳುನೂರು ಯುದ್ಧಕವಚಧಾರಿಗಳು, ಇನ್ನೂರು ಕುದುರೆಗಳು ಮತ್ತು ಮೂರು ಸಾವಿರ ಒಂಟೆಗಳು ಇದ್ದವು.

ಈ ದೌರ್ಬಲ್ಯದ ಸ್ಥಿತಿಯಲ್ಲಿ, ಮುಸ್ಲಿಮರು ಚೆನ್ನಾಗಿ ಅರಿತುಕೊಂಡಿದ್ದರು ಅಬ್ದುಲ್ಲಾ ಬಿನ್ ಉಬಯ್ ಅವನ ಮುನ್ನೂರು ಜನರ ವಿಶ್ವಾಸಘಾತುಕತನವು ಕೆಲವು ದುರ್ಬಲ ಹೃದಯದ ಮುಸ್ಲಿಮರಲ್ಲಿ ಭಯಾ ಮತ್ತು ಆತಂಕದ ಸ್ಥಿತಿಯನ್ನು ಉಂಟುಮಾಡಿತು ಮತ್ತು ಅವರಲ್ಲಿ ಕೆಲವರು ತತ್ತರಿಸಲಾರಂಭಿಸಿದರು. ಆದ್ದರಿಂದ, ಪವಿತ್ರ ಖುರ್ಆನ್‌ನಲ್ಲಿ ಸೂಚಿಸಿದಂತೆ, ಮುಸ್ಲಿಮರ ಎರಡು ಗೋತ್ರಗಳಾದ ಬನೂ ಹಾರಿಸಾ ಮತ್ತು ಬನೂ ಸಲ್ಮಾ ಭಯ ಮತ್ತು ಆತಂಕದ ಸ್ಥಿತಿಯಲ್ಲಿದ್ದರು. ಅವರು ಮದೀನಾಗೆ ಮರಳುವ ಉದ್ದೇಶವನ್ನು ಹೊಂದಿದ್ದರು, ಆದರೆ ಅವರ ಹೃದಯದಲ್ಲಿ ನಂಬಿಕೆಯ ಬೆಳಕನ್ನು ಹೊಂದಿದ್ದ ಕಾರಣ, ಅವರು ತಮ್ಮನ್ನು ಹಿಡಿತದಲ್ಲಿರಿಸಿಕೊಂಡರು ಮತ್ತು ಸ್ಪಷ್ಟ ಕಾರಣಗಳ ದೃಷ್ಟಿಯಿಂದ ಸಾವನ್ನು ಅವರ ಮುಂದೆ ಕಂಡರೂ ಅವರು ತಮ್ಮ ಯಜಮಾನನ ಬದಿಯನ್ನು ಬಿಡಲಿಲ್ಲ. (ಸೀರತ್ ಖಾತಮನ್ನಬೀಈನ್(ಸ), ಸಾಹಿಬ್ಜಾದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-487)

ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ನುಡಿಯುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ಸಾವಿರ ಸೈನ್ಯದೊಂದಿಗೆ ಮದೀನಾವನ್ನು ತೊರೆದರು ಮತ್ತು ಸ್ವಲ್ಪ ದೂರ ಹೋಗಿ ರಾತ್ರಿ ಕಳೆಯಲು ಅಲ್ಲಿಯೇ ತಂಗಿದರು. ಶತ್ರುಗಳ ಬಳಿ ತಲುಪಿದ ನಂತರ ತಮ್ಮ ಸೈನಿಕರನ್ನು ಸ್ವಲ್ಪ ಸಮಯದವರೆಗೆ ವಿಶ್ರಾಂತಿ ಪಡೆಯಲು ಅವಕಾಶವನ್ನು ನೀಡುವುದು ಯಾವಾಗಲೂ ಹಝ್ರತ್ ಪೈಗಂಬರ್(ರ)ರ ಮಾರ್ಗವಾಗಿತ್ತು, ಇದರಿಂದಾಗಿ ಅವರು ತಮ್ಮ ಉಪಕರಣಗಳು ಇತ್ಯಾದಿಗಳನ್ನು ಸಿದ್ಧಪಡಿಸಬಹುದು. ಫಜರ್ ನಮಾಝ್ ಸಮಯದಲ್ಲಿ ಅವರು ಹೊರಗೆ ಹೋದಾಗ, ಕೆಲವು ಯಹೂದಿಗಳು ಸಹ ತಮ್ಮ ಪ್ರತಿಜ್ಞೆಬದ್ಧ ಗೋತ್ರಗಳಿಗೆ ಸಹಾಯ ನೀಡುವ ನೆಪದಲ್ಲಿ ಬಂದಿದ್ದಾರೆಂದು ಅವರಿಗೆ ತಿಳಿಯಿತು. ಅದಕ್ಕೆ ಹಝ್ರತ್ ಪೈಗಂಬರ್(ಸ) ಯಹೂದಿಗಳ ದುಷ್ಕೃತ್ಯಗಳ ಬಗ್ಗೆ ತಿಳಿದುಕೊಂಡಿದ್ದರಿಂದ, ಈ ಜನರನ್ನು ಹಿಂದಕ್ಕೆ ಕಳುಹಿಸಬೇಕೆಂದು ಹೇಳಿದರು. ದನಂತರ ಕಪಟಿಗಳ ನಾಯಕನಾಗಿದ್ದ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಕೂಡ ಈಗ ಇದು ಯುದ್ಧವಲ್ಲ ಇದು ಸಾವಿನ ಮುಖಕ್ಕೆ ಹೋಗುವುದಾಗಿದೆ ಎಂದು ಹೇಳುತ್ತಾ ತನ್ನ ಮುನ್ನೂರು ಸಂಗಡಿಗರೊಂದಿಗೆ ಹಿಂದಿರುಗಿದನು. ಅಬ್ದುಲ್ಲಾ ಬಿನ್ ಅಬಿ ಅವನ ನಿರ್ಗಮನಕ್ಕೆ ಒಂದು ಕಾರಣವೆಂದರೆ ಅವನು ಈ ಯಹೂದಿಗಳನ್ನು ಏಕೆ ಸೇರಿಸಬಾರದು? ಎಂದು ಹೇಳಿಸದನು. ಇದು ಸಾವಿನ ಬಾಯಿಗೆ ಹೋಗುವುದಾಗಿದೆ, ಏಕೆಂದರೆ ಒಬ್ಬರ ಸ್ವಂತ ಸಹಾಯಕರನ್ನು ಸಹ ಹೋರಾಡದಂತೆ ತಡೆಯುತ್ತಾರೆ. ಇದರ ಫಲಿತಾಂಶವೆಂದರೆ ಮುಸ್ಲಿಮರು ಕೇವಲ ಏಳುನೂರು ಜನರು ಮಾತ್ರ ಉಳಿದಿದ್ದರು, ಇದು ಅವಿಶ್ವಾಸಿಗಳ ಸಂಖ್ಯೆಯ ನಾಲ್ಕನೇ ಒಂದು ಭಾಗಕ್ಕಿಂತ ಕಡಿಮೆಯಾಗಿತ್ತು ಮತ್ತು ಸಲಕರಣೆಗಳ ವಿಷಯದಲ್ಲಿ ಇನ್ನೂ ದುರ್ಬಲವಾಗಿತ್ತು ಏಕೆಂದರೆ ಅವಿಶ್ವಾಸಿಗಳು ಏಳುನೂರು ರಕ್ಷಾಕವಚವನ್ನು ಹೊಂದಿದ್ದರು ಮತ್ತು ಮುಸ್ಲಿಮರು ಕೇವಲ ನೂರು ರಕ್ಷಾಕವಚವನ್ನು ಹೊಂದಿದ್ದರು ಮತ್ತು ಅವಿಶ್ವಾಸಿಗಳು ಇನ್ನೂರು ಕುದುರೆಗಳನ್ನು ಹೊಂದಿದ್ದರು ಆದರೆ ಮುಸ್ಲಿಮರಿಗೆ ಎರಡು ಕುದುರೆಗಳಿದ್ದವು." (ಸೀಬಾಚ' ತಫ್ಸೀರುಲ್ ಖುರ್ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-248-249)

ಹಝ್ರತ್ ಪೈಗಂಬರ್(ಸ) ತಮ್ಮ ಸೈನ್ಯದೊಂದಿಗೆ ಹರ್ರಾ ಬನು ಹಾರಿಸಾಗೆ ತಲುಪಿದಾಗ, ಒಬ್ಬ ಸಹಚರರ ಕುದುರೆಯು ತನ್ನ ಬಾಲವನ್ನು ಅಲುಗಾಡಿಸಿತು ಅದು ಅವರ ಕತ್ತಿಗೆ ತಾಗಿತು. ಅಸಕ್ಕೆ ಅವರು ಅಪಾಯ ಕಾದಿದದೆ ಎಂದು ತಕ್ಷಣ ತಮ್ಮ ಕತ್ತಿಯನ್ನು ಎಳೆದು ನಿಂತರು. ಹಝ್ರತ್ ಪೈಗಂಬರ್(ಸ) ಅವರು ಅದಕ್ಕೆ ಒಳ್ಳೆಯ ಶಕುನಗಳನ್ನು ತೆಗೆದುಕೊಳ್ಳಲು ಇಷ್ಟಪಟ್ಟರು ಮತ್ತು ಕೆಟ್ಟ ಶಕುನಗಳನ್ನು ಇಷ್ಟಪಡಲಿಲ್ಲ ಎಂದು ವರದಿಗಾರರು ಹೇಳುತ್ತಾರೆ. ಹಝ್ರತ್ ಪೈಗಂಬರ್(ಸ) ರು ಆ ಖಡ್ಗವನ್ನು ಹೊಂದಿರುವವರನ್ನು ತಮ್ಮ ಖಡ್ಗವನ್ನು ನಿಯಾಮ್‌ನಲ್ಲಿರಿಕೊಳ್ಳಲು ಆದೇಶಿಸಿದರು ಏಕೆಂದರೆ ಇಂದು ಖಡ್ಗಗಳು ಖಂಡಿತವಾಗಿಯೂ ಹೊರಗೊಳ್ಳುತ್ತವೆ ಎಂದು ನನಗೆ ತಿಳಿದಿದೆ. (ಇಬ್ನ್ ಹಿಶಾಮ್ ಲಿಇಬ್ನೆ ಹಿಶಾಮ್, ಭಾಗ-3, ಪುಟ-448-449)

ಇದರಿಂದ ಇದೇ ಶಕುನ ಹೊರಬರುತ್ತದೆ. ನಂತರ ಹಝ್ರತ್ ಪೈಗಂಬರ್(ಸ) ಸಹಾಬಿಗಳನ್ನು ಉದ್ದೇಶಿಸಿ ಹೇಳಿದರು: ಹತ್ತಿರದ ಮಾರ್ಗದಿಂದ ಶತ್ರುಗಳ ಕಡೆಗೆ ನಮ್ಮನ್ನು ಕರೆದೊಯ್ಯುವವರು ಯಾರು? ಅಂದರೆ, ಸಾಮಾನ್ಯ ಮಾರ್ಗವಲ್ಲದ ಮಾರ್ಗದ ಮೂಲಕ. ಅದಕದಕೆ ಹಝ್ರತ್ ಅಬು ಖೈಸಮಾ(ರ) ಹೇಳಿದರು: ಯಾ ಹಝ್ರತ್ ಪೈಗಂಬರ್(ಸ)! ನಾನು ಕರೆದುಕೊಂಡು ಹೋಗುತ್ತೇನೆ. ಇಬ್ನೆ ಸಾದ್ ಮತ್ತು ಇತರರು ಅವರ ಹೆಸರು ಅಬುಹತ್ಮಾ ಎಂದು ವಿವರಿಸಿದ್ದಾರೆ. ಹೀಗೆ ಅವರು ಬನು ಹಾರಿಸಾ ಅವರ ನೆರೆಹೊರೆಯಿಂದ ಮತ್ತು ಅವರ ಜಮೀನು, ಆಸ್ತಿಗಳಿಂದ ಮುಸ್ಲಿಮರೊಂದಿಗೆ ಅವರು ಉಹುದ್ ಕಣಿವೆಯನ್ನು ತಲುಪುವವರೆಗೆ ಕರೆದೊಯ್ದರು ಹೀಗೆ ಅವರು ಅಲ್ಲಿ ಬೀಡುಬಿಟ್ಟರು.

ಹಝ್ರತ್ ಪೈಗಂಬರ್(ಸ) ಅವರು ಉಹುದ್ ಪರ್ವತವನ್ನು ತಮ್ಮ ಬೆನ್ನಿನ ಕಡೆಗೆ ಮತ್ತು ಮದೀನಾವನ್ನು ತಮ್ಮ ಮುಂಭಾಗಕ್ಕೆ ತಿರುಗಿಸುವ ರೀತಿಯಲ್ಲಿ ಅವರು ಬೀಡುಬಿಟ್ಟರು. (ಸಿರತುಲ್ ಹಲ್ಬಿಯಾ, ಸಂಪುಟ-2, ಪುಟಗಳು 301-302, ದಾರುಲ್ ಕುತುಬ್ ಇಲ್ಮೀಯಾ ಬೈರುತ್)

ಇಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಮುಸ್ಲಿಮರನ್ನು ಉದ್ದೇಶಿಸಿ ಮಾತನಾಡಿದರು.

ಉಹದ್ ನ ಬುಡದಲ್ಲಿ ಮುಸಲ್ಮಾನರು ಸಾಲುಗಟ್ಟಿ ನಿಂತಿದ್ದರು ಮತ್ತು ಶನಿವಾರ ಫಜ್ರ್ ನಮಾಝಿನ ಸಮಯ ಸಮೀಪಿಸಿತು ಮತ್ತು ಮುಸ್ಲಿಮರು ಬಹುದೇವತಾವಾದಿಗಳತ್ತ ನೋಡುತ್ತಿದ್ದರು. ಹಝ್ರತ್ ಬಿಲಾಲ್(ರ) ಅವರು ಅಝಾನ್ ಮತ್ತು ಇಕಾಮತ್ ಅನ್ನು ನೀಡಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರು ತಮ್ಮ ಸಹಾಬರನ್ನು ಫಜರ್ ನಮಾಝ್ ನಿರ್ವಹಿಸಿದರು. ಮುಹಮ್ಮದ್ ಬಿನ್ ಉಮರ್ ಅಸ್ಲಮ ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ) ಎದ್ದುನಿಂತು ಜನರಿಗೆ ಉಪದೇಶವನ್ನು ನೀಡಿದರು ಮತ್ತು ಹೇಳಿದರು: ಓ ಜನರೇ! ಅಲ್ಲಾಹನು ತನ್ನ ಗ್ರಂಥದಲ್ಲಿ ನನಗೆ ದಯಪಾಲಿಸಿದ್ದನ್ನು ನಾನು ನಿಮಗೆ ನೀಡುತ್ತೇನೆ. ಅವನನ್ನು ಅನುಸರಿಸಲು ಮತ್ತು ಅವನು ನಿಷೇಧಿಸಿದ್ದನ್ನು ತಪ್ಪಿಸಲು.

ಇಂದು ನೀವು ಪ್ರತಿಫಲ ಮತ್ತು ಸವಾಬ್‌ನ ಗಮ್ಯಸ್ಥಾನದಲ್ಲಿದ್ದೀರಿ, ಅದನ್ನು ಯಾರು ನೆನಪಿಸಿಕೊಳ್ಳುತ್ತಾರೋ ಅವರು ಅದಕ್ಕಾಗಿ ತಾಳ್ಮೆ, ನಂಬಿಕೆ ಮತ್ತು ಚೈತನ್ಯವನ್ನು ಉತ್ತೇಜಿಸಿದರು. (ಇಂದು ನೀವು ಬಂದಿರುವ ದಿನಕ್ಕೆ ಈ ಎಲ್ಲಾ ವಿಷಯಗಳಿಗೆ ನೀವು ತಾಳ್ಮೆಯಿಂದಿರಬೇಕು) ಏಕೆಂದರೆ ಶತ್ರುಗಳ ವಿರುದ್ಧ ಹೋರಾಡುವುದು ಕಠಿಣ ಕೆಲಸವಾಗಿದೆ. ಅಲ್ಲಾಹನು ಮಾರ್ಗದರ್ಶಿಸುವವರನ್ನು ಹೊರತುಪಡಿಸಿ, ಅದನ್ನು ಸಹಿಸಿಕೊಳ್ಳಬಲ್ಲವರು ಬಹಳ ಕಡಿಮೆ ಜನರಿದ್ದಾರೆ, ಏಕೆಂದರೆ ಅಲ್ಲಾಹನು ಅವನನ್ನು ಅನುಸರಿಸುವವರೊಂದಿಗಿದ್ದಾನೆ ಮತ್ತು ಸೈತಾನನು ಅಲ್ಲಾಹನಿಗೆ ಅವಿಧೇಯರಾದವರೊಂದಿಗಿದ್ದಾನೆ. ಆದ್ದರಿಂದ, ಜಿಹಾದ್‌ನಲ್ಲಿ ತಾಳ್ಮೆಯಿಂದಿರಿ ಮತ್ತು ನಿಮ್ಮ ಕಾರ್ಯಗಳನ್ನು ಪ್ರಾರಂಭಿಸಿ ಮತ್ತು ಅದರ ಮೂಲಕ ಅಲ್ಲಾಹನ ವಾಗ್ದಾನವನ್ನು ಪಡೆಯಿರಿ ಮತ್ತು ನಾನು ನಿಮಗೆ ಏನು ಮಾಡಬೇಕೆಂದು ಆಜ್ಞಾಪಿಸುತ್ತೇನೆ ಅದು ನಿಮ್ಮ ಮೇಲೆ ಕಡ್ಡಾಯವಾಗಿರುತ್ತದೆ, ಏಕೆಂದರೆ ನಾನು ನಿಮ್ಮ ಮಾರ್ಗದರ್ಶನಕ್ಕಾಗಿ ಉತ್ಸುಕನಾಗಿದ್ದೇನೆ. ಅಲ್ಲಾಹನು ಅವರನ್ನು ಇಷ್ಟಪಡುವುದಿಲ್ಲ. (ಯಾವುದೇ ರೀತಿಯ ಭಿನ್ನಾಭಿಪ್ರಾಯ ಇರಬಾರದು) ಮತ್ತು ಅದಕ್ಕೆ ಸಹಾಯ ಮತ್ತು ಯಶಸ್ಸನ್ನು ನೀಡುವುದಿಲ್ಲ.

ಓ ಜನರೇ! ಯಾರು ನಿಷಿದ್ಧವನ್ನು ಮಾಡುತ್ತಾರೋ ಅಲ್ಲಾಹನು ತನ್ನ ಮತ್ತು ಅವನ ನಡುವೆ ವ್ಯತ್ಯಾಸವನ್ನುಂಟು ಮಾಡುತ್ತಾನೆ ಎಂಬ ವಿಷಯವನ್ನು ನನ್ನ ಮನಸ್ಸಿನಲ್ಲಿ ಇರಿಸಲಾಗಿದೆ. (ನಿಷೇಧಿತ ಕೆಲಸಗಳನ್ನು ಮಾಡುವವನನ್ನು ಅಲ್ಲಾಹನು ಇಷ್ಟಪಡುವುದಿಲ್ಲ) ಮತ್ತು ಯಾರು ಅಲ್ಲಾಹನಿಗೋಸ್ಕರ ಈ ನಿಷೇಧಿತವಾದದ್ದನ್ನು ತ್ಯಜಿಸುತ್ತಾನೊ ಅಲ್ಲಾಹನು ಅವನ ಪಾಪಗಳನ್ನು ಕ್ಷಮಿಸುವನು ಮತ್ತು ಯಾರು ನನ್ನ ಮೇಲೆ ಒಮ್ಮೆ ದರೂದನ್ನು ಕಳುಹಿಸುತ್ತನೊ ಅಲ್ಲಾಹನು ಮತ್ತು ದೇವದೂತರು ಅವನ ಮೇಲೆ ಹತ್ತು ಪಟ್ಟು ಹೆಚ್ಚಾಗಿ ಕರುಣೆಯನ್ನು ಕಳುಹಿಸುತ್ತಾರೆ. ಮತ್ತು ಯಾರು ಮುಸಲ್ಮಾನರನ್ನು ಅಥವಾ ಅವಿಶ್ವಾಸಿಗನ್ನು ಚೆನ್ನಾಗಿ ನಡೆಸಿಕೊಳ್ಳುತ್ತಾರೋ, ಅದರ ಪ್ರತಿಫಲವು ಅಲ್ಲಾಹನಲ್ಲಿದೆ, ಅವನು ಅದನ್ನು ಇಹಲೋಕದಲ್ಲಿ ಬೇಗನೆ ಪಡೆಯುತ್ತಾನೆ ಮತ್ತು ಪರಲೋಕದಲ್ಲಿ ತಡಮಾಡುತ್ತಾನೆ. ಮತ್ತು ಯಾರು ಅಲ್ಲಾಹ್ ಹಾಗೂ ಖಿಯಾಮತ್‌ದಿನದ ಮೇಲೆ ವಿಶ್ವಾಸ ಹೊಂದಿರುತ್ತಾರೊ ಅವನ ಮೇಲೆ ಜುಮುಅ ಕಡ್ಡಾಯವಾಗಿದೆ ಮಹಿಳೆ ಅಥವಾ ಮಕ್ಕಳು ಅಥವಾ ರೋಗಿ ಮಮ್ಲೂಕ್ ಗುಲಾಮ ಹೊರತುಪಡಿಸಿ. ಮತ್ತು ಯಾರು ಅಲ್ಲಾಹನನ್ನು ತ್ಯಜಿಸುತ್ತಾರೊ ಅಲ್ಲಾಹನು ಅವರನ್ನು ತ್ಯಜಿಸುತ್ತಾನೆ.

(ಮುಸ್ಲಿಮರು ಹೇಗೆ ಬದುಕಬೇಕು ಎಂಬುದಕ್ಕೆ ಸಂಪೂರ್ಣ ಸಲಹೆ ನೀಡಿದ್ದರಂತೆ. ಬಹುಶಃ ಈ ಕನಸಿನ ಆಧಾರದ ಮೇಲೆ ಅವರಿಗೆ ಈ ಕಲ್ಪನೆ ಬಂದಿರಬಹುದು.)

ನಂತರ ಅವರು(ಸ) ಹೇಳಿದರು: ಮತ್ತು ಸರ್ವಶಕ್ತನಾದ ಅಲ್ಲಾಹನು ಘನಿ (ಸಿರಿವಂತ) ಮತ್ತು ಹಮೀದ್ (ಶ್ಲಾಘನೀಯ) ಆಗಿರುವನು. ಮತ್ತು ಅಲ್ಲಾಹನಿಗೆ ಸಮೀಪಗೊಳಿಸುವಂತಹ ನಾನು ತಿಳಿದಿರುವ ಕ್ರಿಯೆಗಳು ನಿಮ್ಮನ್ನು ಮಾಡಲು ಆಜ್ಞಾಪಿಸಿದ್ದೇನೆ. ಮತ್ತು ನಿಮ್ಮನ್ನು ನರಕಕ್ಕೆ ಹತ್ತಿರವಾಗುವ ನಾನು ತಿಳಿದಿರುವ ಕ್ರೀಯೆಗಳಿಂದ ನಾನು ಅದರಿಂದ ನಿಮ್ಮನ್ನು ತಡೆದಿದ್ದೇನೆ.

ಮತ್ತು ಯಾವುದೇ ಆತ್ಮವು ತನ್ನ ಸಂಪೂರ್ಣ ಪೋಷಣೆಯನ್ನು ಪಡೆಯುವವರೆಗೆ ಸಾಯುವುದಿಲ್ಲ ಎಂದು ಪವಿತ್ರಾತ್ಮವು ನನ್ನ ಹೃದಯದಲ್ಲಿ ಪ್ರೇರೇಪಿಸಿದ್ದಾನೆ. ಅವನ ನಿಬಂಧನೆಯಲ್ಲಿ ಅವನಿಗೆ ಜೀವನಾಂಶ ತಡವಾಗಿ ಬಂದರೂ ಕಡಿಮೆಯಾಗುವುದಿಲ್ಲ.

(ಅಂದರೆ ಅಲ್ಲಾಹನು ಕರ್ಮಗಳಿಗೆ ಪ್ರತಿಫಲವನ್ನು ನೀಡುತ್ತಾನೆ. ಇಲ್ಲಿ ಪೋಷಣೆ ಅಂದರೆ ಎಲ್ಲಾ ರೀತಿಯ ಜೀವನಾಂಶಗಳು) ಆದ್ದರಿಂದ ನಿಮ್ಮ ಭಗವಂತನನ್ನು ಭಯಪಡಿರಿ ಮತ್ತು ಜೀವನಾಂಶವನ್ನು ಹುಡುಕುವಲ್ಲಿ ಮಿತವಾಗಿರಿ. ಮತ್ತು ಜೀವನಾಂಶವು ತಡವಾಗಿ ಸಿಗುವುದು ನೀವು ಅದನ್ನು ಅಲ್ಲಾಹನ ಪಾಪಗಳಲ್ಲಿ ಹುಡುಕಲು ನಿಮ್ಮನ್ನು ಪ್ರೇರೇಪಿಸಬಾರದು. (ಒಳ್ಳೆಯ ಕಾರ್ಯಗಳು, ಉನ್ನತ ನೈತಿಕತೆ, ಶುದ್ಧ ಪೋಷಣೆಯ ಹುಡುಕಾಟದಲ್ಲಿ ಉಳಿಯಿರಿ) ಏಕೆಂದರೆ ದಾಸನು ಸರ್ವಶಕ್ತನಾದ ಅಲ್ಲಾಹನನ್ನು ಪಾಲಿಸುವ ಮೂಲಕ ಮಾತ್ರ ಮಾಡಲು ಸಾಧ್ಯವಾಗುತ್ತದೆ.

ನಿಮಗಾಗಿ, ಅಲ್ಲಾಹನು ಹರಾಮ್ ಮತ್ತು ಹಲಾಲ್ ಅನ್ನು ಸ್ಪಷ್ಟಪಡಿಸಿದ್ದಾನೆ, ಆದರೆ ಅವುಗಳ ನಡುವೆ ಅನೇಕ ಜನರಿಗೆ ತಿಳಿದಿಲ್ಲದ ಅನೇಕ ಅನುಮಾನಾಸ್ಪದ ವಿಷಯಗಳಿವೆ, ಆದರೆ ಅಲ್ಲಾಹನಿಂದ ರಕ್ಷಿಸಲ್ಪಟ್ಟವನಿಗೆ ತಿಳಿದಿದೆ. ಆದ್ದರಿಂದ ಯಾರು ಅದನ್ನು ತ್ಯಜಿಸುತ್ತಾರೋ, ಅವನು ತನ್ನ ಗೌರವ ಮತ್ತು ಧರ್ಮವನ್ನು ರಕ್ಷಿಸುತ್ತಾನೆ ಮತ್ತು ಅವುಗಳಲ್ಲಿ ತೊಡಗುವವನು (ಅಂದರೆ, ತಪ್ಪು ವಿಷಯಗಳಲ್ಲಿ ತೊಡಗುತ್ತಾನೆ) ಹುಲ್ಲುಗಾವಲು ಹತ್ತಿರವಿರುವ ಕುರುಬನಂತೆ ಇರುತ್ತದೆ. ಅವನು ಅದರೊಳಗೆ ಹೋಗಲಿದ್ದಾನೆ. ಮತ್ತು ಪ್ರತಿಯೊಬ್ಬ ಒಡೆಯನಿಗೆ ಅವನ ನಿಷೇಧಿತ ಹುಲ್ಲುಗಾವಲು ಇರುತ್ತದೆ.

ಆಲಿಸಿರಿ! ನಿಸ್ಸಂದೇಹವಾಗಿಯು ಸರ್ವಶಕ್ತನಾದ ಅಲ್ಲಾಹನ ನಿಷಿದ್ಧ ಹುಲ್ಲುಗಾವಲು

ಆತನ ನಿಷಿದ್ಧ ವಸ್ತುಗಳಾಗಿವೆ. (ಸ್ಪಷ್ಟವಾಗಿ ಹಲಾಲ್ ಮತ್ತು ಹರಾಮ್ ಇರುವುದರಿಂದ ಉಳಿದುಕೊಂಡಿರಿ) ಮತ್ತು ಒಬ್ಬ ಮುಮಿನ್ ಎಲ್ಲಾ ಮುಮಿನ್‌ಗಳಲ್ಲಿ ಒಂದು ದೇಹದಲ್ಲಿ ತಲೆ ಇರುವಹಾಗೆ ಇರುತ್ತಾನೆ. ತಲೆ ನೋಯಿಸಿದರೆ ಇಡೀ ದೇಹವೇ ನೋಯುತ್ತದೆ. (ಸಬ್ಲುಲ್ ಹುದಾ ವರ್‌ಶ್ಶಾದ್, ಸಂಪುಟ–4, ಪುಟ–189–190, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಇಂದು ಮುಸ್ಲಿಮರು ಈ ವಿಷಯಗಳನ್ನು ನೆನಪಿಸಿಕೊಂಡರೆ, ಯಾವ ಶತ್ರುವೂ ಅವರನ್ನು ನೋಡುವ ಧೈರ್ಯ ಮಾಡುವುದಿಲ್ಲ.

ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: "ಉಹುದ್ ಯುದ್ಧ... ಶತ್ರುಗಳು ಮಕ್ಕಾದಿಂದ ದಂಡೆತ್ತಿ ಮದೀನಾವನ್ನು ತಲುಪಿದರು. ಅಬು ಸುಫ್ಯಾನ್ ಸೀರಿಯಾದಿಂದ ತಂದಿದ್ದ ಯುದ್ಧ ಸಾಮಾಗ್ರಿಗಳನ್ನು ಮತ್ತು ಅದನ್ನು ತಡೆಯಲು ಹಝ್‌ರತ್ ಪೈಗಂಬರ್(ಸ) ಅವರು ಬದ್ರ್ ತನಕ ಪ್ರಯಾಣಿಸಬೇಕಾಗಿತ್ತು ಮತ್ತು ಅದರಲ್ಲಿ ಅಪನಂಬಿಕೆಯ ವೈಭವವು ಮುರಿದುಹೋಯಿತು, ಈಗ ಅದೇ ಸರಕುಗಳನ್ನು ಮುಸ್ಲಿಮರ ವಿರುದ್ಧ ಹೋರಾಡಲು ಸಂಗ್ರಹಿಸಲಾಗಿದೆ. ಪವಿತ್ರ ಖುರ್‌ಆನ್‌ನ ಈ ಆಯತ್ ಕೂಡ ಅದರ ಮತ್ತು ಅದನ್ನು ಖರ್ಚು ಮಾಡುವವರನ್ನು ಉಲ್ಲೇಖಿಸುತ್ತದೆ **ಇನ್ನಲ್ಲಝೀನ ಕಫರೂ ಯುನ್‌ಫಿಖೂನ ಅಮ್ವಾಲಹುಮ್ ಲಿಯಸುದ್ದೂ ಅನ್ ಸಬೀಲಿಲ್ಲಾಹಿ ಫಸಯುನ್‌ಫಿಖೂನಹಾ ಸುಮ್ಮ ತಕೂನು ಅಲೈಹಿಮ್ ಹಸ್ರತನ್** (ಅನ್ಫಾಲ್: 37) ಈ ಯುದ್ಧದಲ್ಲಿ ಖುರೈಶರೊಂದಿಗೆ ಬನಿ ತಿಹಾಮಾ ಮತ್ತು ಬನಿ ಕಿನಾನಾ ಗೋತ್ರಗಳು ಕೂಡ ಭಾಗವಹಿಸಿದರು. ಅವಿಶ್ವಾಸಿಗಳ ಸೈನ್ಯದ ಸಂಖ್ಯೆ ಮೂರು ಸಾವಿರಕ್ಕೆ ತಲುಪಿತು ಮತ್ತು ಎಲ್ಲಾ ಪಡೆಗಳು ಶಸ್ತ್ರಸಜ್ಜಿತರಾಗಿದ್ದರು, ಅವರಲ್ಲಿ ಏಳುನೂರು ಶಸ್ತ್ರಸಜ್ಜಿತ ಸವಾರರು ಮತ್ತು ಅವರೆಲ್ಲರೂ ಶೀಘ್ರದಲ್ಲೇ ಮುಸ್ಲಿಮರ ಮೇಲೆ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದರು. ಅಬು ಸುಫ್ಯಾನ್‌ನ ನೇತೃತ್ವದಲ್ಲಿ ಈ ಸಣ್ಣ ಗೋತ್ರಗಳ ಸಂಪೂರ್ಣ ಸೈನ್ಯವು ಮದೀನಾದ ಈಶಾನ್ಯದಲ್ಲಿ ಗೊತ್ತುಪಡಿಸಿದ ಸ್ಥಳದಲ್ಲಿ ತಮ್ಮ ಮುಂಭಾಗವನ್ನು ಬಲಪಡಿಸಿತು ಮತ್ತು ಮದೀನಾ ನಗರದ ನಡುವಿನ ಅಂತರವು ಪರ್ವತದ ಕಣಿವೆ ಮಾತ್ರವಾಗಿತ್ತು. ಈ ಸ್ಥಳದಲ್ಲಿ ಬೀಡುಬಿಟ್ಟು ಅವಿಶ್ವಾಸಿಗಳು ಮದೀನಾದ ಜನರ ಹೊಲಗಳು ಮತ್ತು ತೋಟಗಳನ್ನು ನಾಶಮಾಡಲು ಪ್ರಾರಂಭಿಸಿದರು. ಸಹಾಬಾಗಳು ಇದರಿಂದ ಬಹಳ ಕೋಪಗೊಂಡರು ಮತ್ತು ಸೇಡು ತೀರಿಸಿಕೊಳ್ಳಲು ಇಸ್ಲಾಂನಿಂದ ಪ್ರೇರೇಪಿಸಲಾಯಿತು. ಹಝ್‌ರತ್ ಪೈಗಂಬರ್(ಸ) ಅವರಲ್ಲಿ ಸಂಪೂರ್ಣ ಒತ್ತಾಯದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ವಿನಂತಿಸಿಕೊಂಡರು. ಹಝ್‌ರತ್ ಪೈಗಂಬರ್(ಸ) ಅವರು ತಮ್ಮೊಂದಿಗೆ ಒಂದು ಸಾವಿರ ಜನರನ್ನು ಕರೆದುಕೊಂಡು ಮದೀನಾದಿಂದ ಹೊರಟರು. ಅಬ್ದುಲ್ಲಾ ಬಿನ್ ಅಬಿ, ಮದೀನಾದಲ್ಲಿ ವಾಸಿಸುತ್ತಿದ್ದ ಮತ್ತು ಸ್ಪಷ್ಟವಾಗಿ ಮುಸ್ಲಿಮರೊಂದಿಗೆ ಇದ್ದ ಒಬ್ಬ ಮುಖ್ಯಸ್ಥ, ಯುದ್ಧದ ಸಮಯದಲ್ಲಿ ಮತ್ತು ಈ ಕರಾಳ ಸಮಯದಲ್ಲಿ ತನ್ನ ಮುನ್ನೂರು ಜನರೊಂದಿಗೆ ಮುಸ್ಲಿಮರಿಂದ ಬೇರ್ಪಟ್ಟನು, ಇದು ಮುಸ್ಲಿಮರ ಸಂಖ್ಯೆಯನ್ನು ಸಾವಿರದಿಂದ ಏಳು ನೂರಕ್ಕೆ ಇಳಿಸಿತು. ಈ ಚಿಕ್ಕ ಸೈನ್ಯದಲ್ಲಿ ಒಟ್ಟು ಎರಡು ಕುದುರೆಗಳಿದ್ದವು, ಆದರೆ ಮುಜಾಹಿದ್ದೀನ್‌ಗಳು ಧೈರ್ಯದಿಂದ ಮುಂದೆ ಸಾಗಿದರು ಮತ್ತು ತಾಳೆ ತೋಪುಗಳನ್ನು ದಾಟಿದ ನಂತರ ಅವರು ಉಹುದ್ ಪರ್ವತವನ್ನು ತಲುಪಿದರು. ಇಸ್ಲಾಮಿನ ಸೈನ್ಯವು ಇಡೀ ರಾತ್ರಿ ಈ ಪರ್ವತದ ಆಶ್ರಯದಲ್ಲಿಯೇ ಇತ್ತು. ಬೆಳಗ್ಗೆ ಫಜ್ರ್ ನಮಾಝ್ ನಿರ್ವಹಿಸಿ ಮೈದಾನಕ್ಕೆ ಬಂದರು."
(ಫಸ್ಲುಲ್ ಖಿತಾಬ್, ಭಾಗ–1, ಪುಟ–124–125)

ಈ ಯುದ್ಧದ ಬಗ್ಗೆ ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

ಪೆಲೆಸ್ತೀನಿಯರಿಗಾಗಿ ದುಆಗಳನ್ನು ಮಾಡಲು ನಾನು ಹೇಳುತ್ತಾ ಇದ್ದೇನೆ. ಅವರಿಗಾಗಿ ದುಆ ಮಾಡುತ್ತಿರಿ.

ಕೆಲವು ದಿನಗಳ ಮುಂಚೆ ಯುದ್ಧ ವಿರಾಮದ ನಂತರ ಯೋಚಿಸಲಾದ ಹಾಗೆಯೇ ನಡೆಯುತ್ತಿದೆ. ಇಸ್ರೇಲ್ ಸರ್ಕಾರ ಮೊದಲಿಗಿಂತ ಹೆಚ್ಚು ತೀವ್ರತೆಯಿಂದ ಗಾಝಾದ ಪ್ರತಿಯೊಂದು ಪ್ರದೇಶದಲ್ಲಿ ಈಗ ಬಾಂಬುಗಳನ್ನು ವರ್ಷಿಸುತ್ತಿದೆ ಮತ್ತು ಆಕ್ರಮಣಗಳನ್ನು ನಡೆಸುತ್ತಿದೆ. ಅಮಾಯಕ ಮಕ್ಕಳು ಮತ್ತು ಪ್ರಜೆಗಳು ಶಹೀದ್ ಆಗುತ್ತಿದ್ದಾರೆ.

ಈಗಂತು ಈ ಕೃತ್ಯಗಳ ವಿರುದ್ಧ ಅಮೇರಿಕದ ಬಹುಶಃ ಯಹೂದಿಯಾದ ಒಬ್ಬ ಕಾಂಗ್ರೆಸ್ ಪ್ರತಿನಿಧಿ ಹೀಗೆ ಹೇಳಿರುವರು: ಈಗ ಸಾಕಷ್ಟು ಆಯಿತು. ಯುದ್ಧವನ್ನು ತಡೆಯಲು ಅಮೇರಿಕ ತನ್ನ ಪಾತ್ರವನ್ನು ವಹಿಸಬೇಕು. ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಒಂದೇ ರೀತಿಯಲ್ಲಿ ಆಗುತ್ತಿರುವ ಬಾಂಬ್ ದಾಳಿಗಳು ಕೊನೆಗೊಳ್ಳಬೇಕು ಎಂದು ಅಮೇರಿಕದ ಅಧ್ಯಕ್ಷ ಕೂಡ ಮೆಲುವಾಗಿ ಈಗ ಹೇಳುತ್ತಿದ್ದಾರೆ. ಉತ್ತರ ದಿಕ್ಕಿನ ಕಡೆಗೆ ಹೋಗಿರಿ, ಅಲ್ಲಿ ಏನೂ ಆಗದು ಎಂದು ಮೊದಲು ಹೇಳುತ್ತಿದ್ದರು. ಈಗ ಅಲ್ಲೂ ಅದೇ ಸ್ಥಿತಿಯಾಗಿದೆ.

ಹೇಗಿದ್ದರೂ ಅಮೇರಿಕದ ಅಧ್ಯಕ್ಷರ ಈ ಮಾತುಗಳು ಯಾವುದೇ ಮಾನವೀಯ ಸಹಾನುಭೂತಿಯ ಕಾರಣದಿಂದಲ್ಲ. ನಾವು ಇದರ ಬಗ್ಗೆ ಯಾವುದೇ ತಪ್ಪುಗ್ರಹಿಕೆಯಲ್ಲಿ ಇರಬಾರದು. ಬದಲಾಗಿ ಇದು ಅವರ ಸ್ವಂತ ಹಿತಾಸಕ್ತಿ ಮತ್ತು ಸ್ವಾರ್ಥದ ಕಾರಣದಿಂದಾಗಿದೆ. ಅವರು ಓಟು ಗಳಿಸಲು ಇವೆಲ್ಲವನ್ನು ಮಾಡುತ್ತಿದ್ದಾರೆ. ಅವರಿಗೆ ಪೆಲೆಸ್ತೀನಿಯರೊಡನೆ ಅಥವಾ ಮುಸ್ಲಿಮರೊಡನೆ ಯಾವುದೇ ಸಹಾನುಭೂತಿಯಿಲ್ಲ.

ಮುಸ್ಲಿಮ್ ರಾಷ್ಟ್ರಗಳ ಸ್ವರದಲ್ಲಿ ಸ್ವಲ್ಪ ಶಕ್ತಿ ಉಂಟಾಗುತ್ತಿದೆ. ಆದರೆ ಎಲ್ಲಿಯ ತನಕ ಒಗ್ಗಟ್ಟಾಗಿ ಯುದ್ಧವನ್ನು ತಡೆಯಲು ಪ್ರಯತ್ನಿಸುವುದಿಲ್ಲವೋ ಅಲ್ಲಿಯ ತನಕ ಯಾವುದೇ ಪ್ರಯೋಜನವಿಲ್ಲ. ಅಲ್ಲಾಹನು ಮುಸ್ಲಿಮರಲ್ಲೂ ಐಕ್ಯವನ್ನು ಉಂಟುಮಾಡಲಿ. ಮುಸ್ಲಿಮರಲ್ಲಿ ಏಕತೆಯಿಲ್ಲವೆಂದು ಮುಸ್ಲಿಮೇತರ ಲೋಕಕ್ಕೆ ಗೊತ್ತಿದೆ. ಮಾತ್ರವಲ್ಲ, ಮುಸ್ಲಿಮರು ಮುಸ್ಲಿಮರನ್ನು ವಧಿಸುವುದರಲ್ಲಿ ನಿರತರಾಗಿರುವರು. ಯಮನಿನಲ್ಲಿ ಎಲ್ಲವೂ ಆಗುತ್ತಿವೆ. ಅದೇ ರೀತಿಯಲ್ಲಿ ಇತರ ದೇಶಗಳಲ್ಲೂ. ಮುಸ್ಲಿಮರ ಕೈಗಳಿಂದ ಸಾವಿರಾರು, ಕೆಲವೆಡೆ ಲಕ್ಷಾಂತರ ಮಕ್ಕಳು ಮತ್ತು ಮುಗ್ಧರು ಸಾಯುತ್ತಿದ್ದಾರೆ. ಮುಸ್ಲಿಮರನ್ನು ಪೀಡಿಸಿದರೆ ಏನೂ ಆಗದು, ಅವರು ಸ್ವತಃ ತಮ್ಮವರ ಮೇಲೆಯೇ ದೌರ್ಜನ್ಯ ಮಾಡುತ್ತಿದ್ದಾರೆ ಎಂಬ ಸಂಗತಿಯೇ ಅನ್ಯರಿಗೆ ಧೈರ್ಯವನ್ನು ನೀಡುತ್ತಿದೆ. ಮುಸ್ಲಿಮರಿಗೆ ಮುಸ್ಲಿಮರ ಜೀವದ ಚಿಂತೆ ಇಲ್ಲದಿರುವಾಗ ಅನ್ಯರು ಏಕೆ ಚಿಂತಿಸಬೇಕು? ಅಲ್ಲಾಹನು ಇದರ ಬಗ್ಗೆ ಬಹಳ ಕಠಿಣವಾಗಿ ಮುನ್ನೆಚ್ಚರಿಕೆ ನೀಡಿದ್ದಾನೆ. ಮುಸ್ಲಿಮನನ್ನು ವಧಿಸುವ ಮುಸ್ಲಿಮನು ನರಕವಾಸಿಯಾಗುವನು ಎಂದು ಪವಿತ್ರ ಖುರ್‌ಆನಿನಲ್ಲಿ ಮುನ್ನೆಚ್ಚರಿಕೆ ನೀಡಲಾಗಿದೆ. ಮುಸ್ಲಿಮರು ಒಂದಾಗಿ ಲೋಕದಿಂದ ದೌರ್ಜನ್ಯವನ್ನು ಕೊನೆಗೊಳಿಸಲು ಹೇತುವಾಗುವಂತೆ ಅಲ್ಲಾಹನು ಮಾಡಲಿ. ಅವರು ದೌರ್ಜನ್ಯದಲ್ಲಿ ವರ್ಧಿಸುವವರಾಗದಿರಲಿ.

ವಿಶ್ವ ಸಂಸ್ಥೆ ತನ್ನ ಶಬ್ದವನ್ನು ಸ್ವಲ್ಪ ಉಚ್ಚಗೊಳಿಸಲು ಪ್ರಯತ್ನಿಸಿದೆ. ಆದರೆ ಅವರ ಮಾತನ್ನು ಕೇಳುವವರು ಯಾರು? ನಾವು ಹೀಗೆ ಮಾಡುವೆವು, ಹಾಗೆ ಮಾಡುವೆವು ಎಂದು ಹೇಳುತ್ತಾರೆ. ಆದರೆ ಏನು ಮಾಡಲು ಸಾಧ್ಯವಿಲ್ಲ. ಅವರ ಮಾತನ್ನು ಒಪ್ಪುವವರಾಗಿ ಯಾರೂ ಇಲ್ಲ. ದೊಡ್ಡ ಶಕ್ತಿಶಾಲಿ ದೇಶಗಳು ತಮ್ಮ ಹಕ್ಕನ್ನು ಉಪಯೋಗಿಸುತ್ತಾರೆ. ಅಲ್ಲಾಹನು ಮುಸ್ಲಿಮರ ಮೇಲೆ ಕೃಪೆದೋರಲಿ. ಹೇಗಿದ್ದರೂ ನಾನು ಜಮಾಅತುಗಳ ಮೂಲಕ ಮುಂಚೆ ಕೂಡ ಸಂದೇಶವನ್ನು ಕಳಿಸಿದ್ದೇನೆ. ನಾವು ದುಆದೊಂದಿಗೆ ತಮ್ಮ ಸುತ್ತಮುತ್ತವರೊಡನೆ ಮತ್ತು ತಮ್ಮ ಜಮಾಅತುಗಳ ರಾಜಕರಣಿಗಳೊಡನೆ ಈ ದೌರ್ಜನ್ಯವನ್ನು ತಡೆಯಲು ಮತ್ತು ಕೊನೆಗೊಳಿಸಲಿಕ್ಕಾಗಿ ಶಬ್ದವೆತ್ತಲಿಕ್ಕಾಗಿ ಸತತವಾಗಿ ಗಮನ ಸೆಳೆಯಬೇಕಾಗಿದೆ. ಅಲ್ಲಾಹನು ಮುಗ್ಧರನ್ನು ದೌರ್ಜನ್ಯದಿಂದ ರಕ್ಷಿಸಲಿ.

ನಮಾಝಿನ ನಂತರ, ನಾನು ಎರಡು ನಮಾಝೆ ಜನಾಝ ಗ್ಹಾಯಿಬ್ ನಿರ್ವಹಿಸುತ್ತೇನೆ. ಮೊದಲನೆಯದ್ದು ಮುಕರ್ರಮಾ ಮಸೂದಾ ಬೇಗಂ ಅಕ್ಮಲ್ ಸಾಹಿಬಾ (ಹಾಲೆಂಡ್) ಅವರದ್ದಾಗಿದೆ. ಅವರು ದಿವಂಗತ ಮನ್ಸ ಅಬ್ದುಲ್ ಹಕೀಮ್ ಅಕ್ಮಲ್ ಸಾಹಿಬ್ ಉರಬ್ಬಿ ಸಿಲ್‌ಸಿಲಾ ಅವರ ಪತ್ನಿಯಾಗಿದ್ದರು. ಇತ್ತೀಚಿಗೆ ಅವರು ನಿಧನ ಹೊಂದಿದ್ದಾರೆ **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರ ಅಜ್ಜ (ನಾನಾ) ಹಝ್‌ರತ್ ಮಿಯಾಂ ಅಬ್ದುಲ್ ಸಮದ್ ಸಾಹಿಬ್ ಮತ್ತು ಅವರ ಮುತ್ತಜ್ಜ ಹಝ್‌ರತ್ ಮಿಯಾಂ ಫತೇಹ್ ದೀನ್ ಸಾಹಿಬ್(ರ) ಸೇಖ್ವಾನ್ ಖಾದಿಯಾನ್‌ನಿಂದ ಬಂದವರು. ಇಬ್ಬರೂ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಗಳಾಗಿದ್ದರು. ದಿವಂಗತರು ದೀರ್ಘಕಾಲದವರೆಗೆ ಹಾಲೆಂಡ್ ನಲ್ಲಿ ಪತಿಯೊಂದಿಗೆ ಧಾರ್ಮಿಕ ಸೇವೆಯಲ್ಲಿ ನಿರತರಾಗಿದ್ದರು. 1957 ರಲ್ಲಿ, ಹಝ್‌ರತ್ ಮುಸ್ಲೆಹ್ ಮೌಊದ್(ರ) ಅವರ ಸಲಹೆಯ ಮೇರೆಗೆ ಅಕ್ಮಲ್ ಸಾಹಿಬ್ ಮೊದಲ ಬಾರಿಗೆ ಹಾಲೆಂಡ್‌ಗೆ ಹೋದರು ಮತ್ತು ಅವರ ಪತ್ನಿ ಅವರೊಂದಿಗೆ ಇರಲಿಲ್ಲ. ಅವರು 1969 ರಲ್ಲಿ ಹೋದರು. ನಂತರ ಮತ್ತೆ ಹಿಂತಿರುಗಿ. ನಂತರ 1986 ರಲ್ಲಿ ಅವರು ಹೋದರು. ತನ್ನ ಪತಿ ವಿದೇಶದ ಪೋಸ್ಟಿಂಗ್‌ನಿಂದ ಬೇರ್ಪಟ್ಟ ತನ್ನ ವೈವಾಹಿಕ ಜೀವನದ ಹೆಚ್ಚು ಕಡಿಮೆ 15 ವರ್ಷಗಳನ್ನು ಕಳೆದಿದ್ದಾರೆ.

ಅವರು ಹಾಲೆಂಡ್‌ನಲ್ಲಿ ತಂಗಿದ್ದಾಗ, ಅವರ ಗಮನಾರ್ಹ ಸೇವೆಗಳಲ್ಲಿ ಹಾಲೆಂಡ್‌ನಲ್ಲಿ ಲಜ್ನಾ ಇಮಾಅಲ್ಲಾಹ್‌ದ ಸ್ಥಾಪನೆಯೂ ಸೇರಿದೆ. ಲಜ್ನಾ ಇಮಾಅಲ್ಲಾಹ್ ಹಾಲೆಂಡ್‌ನ ಮೊದಲ ಅಧ್ಯಕ್ಷ ಎಂಬ ಗೌರವವೂ ಅವರಿಗೆ ಇದೆ. ಬಹಳಷ್ಟು ಪ್ರಾಮಾಣಿಕತೆ ಮತ್ತು ನಿಷ್ಠೆಯು ಖಿಲಾಫತ್‌ನೊಂದಿಗೆ ಸಂಬಂಧಿಸಿದೆ. ಅವರು ಧರ್ಮನಿಷ್ಠರು, ಪ್ರಾಮಾಣಿಕರು ಮತ್ತು ನಮಝ್ ಹಾಗೂ ಉಪವಾಸಗಳನ್ನು ಅನುಷ್ಠಿಸುವವರಾಗಿದ್ದರು. ಅಲ್ಲಾಹ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಅವರು ಮೂವರು ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ ಮತ್ತು ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಜಮಾಅತ್‌ಗೆ ಅತ್ಯಂತ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಪುತ್ರರೊಬ್ಬರು ಅನ್ಸರುಲ್ಲಾ ಅಧ್ಯಕ್ಷರಾಗಿದ್ದಾರೆ ಮತ್ತು ಈಗ ಈ ವರ್ಷ ಅವರು ಮತ್ತೆ ಅನ್ಸರುಲ್ಲಾ ಅಧ್ಯಕ್ಷರಾಗಿ ಆಯ್ಕೆಯಾಗಿರಬಹುದು. ಇದಲ್ಲದೇ ಇತರ ಮಕ್ಕಳೂ ಜಮಾಅತ್ತಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಾಹನು ದಿವಂಗತರಿಗೆ ಮಗ್‌ಫಿರತ್ ಮತ್ತು ಕರುಣೆಯನ್ನು ನೀಡಲಿ ಮತ್ತು ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ಅವರ ಮಕ್ಕಳನ್ನು ತಾವಫೀಖ್ ನೀಡಲಿ.

ಎರಡನೆಯ ಉಲ್ಲೇಖವೆಂದರೆ ಮಾಸ್ಟರ್ ಅಬ್ದುಲ್ ಮಜೀದ್ ಸಾಹಿಬ್ ಅವರದ್ದಾಗಿದೆ. ಇವರು ವಾಖಿಫೆ ಝಿಂದಗೀ ಆಗಿದ್ದರು. ಅವರು ರಬ್ವಾದ ತಾಲೀಮುಲ್ ಇಸ್ಲಾಮ್ ಹೈ ಸ್ಕೂಲ್‌ನಲ್ಲಿ ಶಿಕ್ಷಕರಾಗಿದ್ದರು. ಈಗ ನಿವೃತ್ತಿಯ ನಂತರ ಕೆನಡಾಕ್ಕೆ ಬಂದಿದ್ದರು. ಅವರು ಕಳೆದ ಕೆಲವು ದಿನಗಳಲ್ಲಿ ಅಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ಪತ್ನಿ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಅವರು ಪುತ್ರ ಮಝ್‌ಹರ್ ಮಜೀದ್ ಸಾಹಿಬ್ ಹೇಳುತ್ತಾರೆ: ನಮ್ಮ ತಂದೆಯಲ್ಲಿ ಬಹಳಷ್ಟು ಗುಣಲಕ್ಷಣಗಳಿದ್ದವು. ಅವರು ಅತ್ಯಂತ ವಿನಮ್ರ ಮತ್ತು ಧರ್ಮನಿಷ್ಠ ಜೀವನವನ್ನು ನಡೆಸಿದರು. ತಾಯಿ ಹೇಳುತ್ತಿದ್ದರು ಅವರು ಮದುವೆಯಿಂದ ಮರಣ ಹೊಂದುವವರೆಗೂ ಅವರನ್ನು ದೇವದೂತರಂತೆ ಇದ್ದರು. ಮದುವೆಯಾಗಿ ಕೆಲವು ವರ್ಷಗಳ ನಂತರ ಒಂದು ದಿನ ನಮಾಝಿನಲ್ಲಿ ಜೋರಾಗಿ ಅಳುತ್ತಿದ್ದರು. ನಮಾಝ್ ನಂತರ, ನೀವು ಯಾವುದಕ್ಕಾಗಿ ಪ್ರಾರ್ಥಿಸುತ್ತಿದ್ದೀರಿ ಎಂದು ನಾನು ಕೇಳಿದೆ ಅದಕ್ಕೆ ಅವರು ಹೇಳಿದರು, ನಾನು ನನ್ನ ಜೀವನವನ್ನು ರಬ್ವಾದಲ್ಲಿರುವ ತಾಲೀಮುಲ್ ಇಸ್ಲಾಮ್ ಹೈಸ್ಕೂಲ್‌ನಲ್ಲಿ ಶಿಕ್ಷಕನಾಗಿ ಸೇವೆ ಸಲ್ಲಿಸಲು ವಖ್ಫ್ ಮಡಬೇಕೆಂದು ನಾನು ಬಯಸುತ್ತೇನೆ. ಮೊದಲು ಅವರು ತಮ್ಮ ಪ್ರದೇಶದಲ್ಲಿ ಬೇರೆಡೆ ಇದ್ದರು. ಆದುದರಿಂದ ಅಲ್ಲಾಹನು ನನ್ನ ಆಸೆಯನ್ನು ಈಡೇರಿಸಲಿ ಮತ್ತು ನನ್ನ ಪತ್ನಿಯೂ ಇದಕ್ಕೆ ಒಪ್ಪುವಂತೆ ಮಾಡಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ಮನಸ್ಸಿಗೆ ನೆಮ್ಮದಿ ನೀಡಲಿ. ಆದಾಗ್ಯೂ, ಅವರ ಪತ್ನಿ ಹೇಳಿದರು: ನೀವು ಕೂಡಲೇ ಹಝ್‌ರತ್ ಖಲೀಫತುಲ್ ಮಸೀಹ್ ಅವರಿಗೆ ಸಮರ್ಪಣಾ ಪತ್ರ ಬರೆಯಿರಿ. ಮತ್ತು ಅಲ್ಲಾಹನ ಕೃಪೆ ಮತ್ತು ಅನುಗ್ರಹದಿಂದ, ಅವರು ವಖ್ಫ್‌ಗಾಗಿ ಈ

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 18 January 2024, Issue No. 03

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ವಿನಂತಿಯನ್ನು ಮಾಡಿದರು, ಇದು ಹಝ್ರತ್ ಖಲೀಫತುಲ್–ಮಸಿಹ್ ಅಲ್–ಸಾನಿಯ ಸಮಯದಲ್ಲಿ, ಅವರು ಒಪ್ಪಿಕೊಂಡರು ಮತ್ತು ಅವರು ರಬ್ವಾಗೆ ತೆರಳಿದರು.

ಇವರು ಹೇಳುತ್ತಾರೆ: ಪ್ರತಿ ತಿಂಗಳು ತಂದೆ ಸಂಬಳ ಪಡೆದಾಗ, ಅವರು ಮೊದಲು ಮಾಡುವ ಕೆಲಸವೆಂದರೆ ಸೆಕ್ರೆಟರಿ ಮಾಲ್ ಬಳಿಗೆ ಹೋಗಿ ಚಂದವನ್ನು ನೀಡುತ್ತಿದ್ದರು. ಆ ಬಳಿಕ ಉಳಿದ ಹಣವನ್ನು ತಾಯಿಗೆ ಕೊಟ್ಟು ಬರುತ್ತಿದ್ದರು. ರಬ್ವಾಗೆ ಬಂದ ನಂತರ, ಅವರು ತುಂಬಾ ಕಷ್ಟಕರ ಪರಿಸ್ಥಿತಿಗಳಲ್ಲಿ ವಾಸಿಸುತ್ತಿದ್ದರು ಮತ್ತು ಎಂದಿಗೂ ದೂರು ನೀಡಲಿಲ್ಲ. ಪ್ರಪಂಚದ ಬಯಕೆಯನ್ನು, ವಸ್ತುಗಳ ಬಯಕೆಯನ್ನು ಎಂದಿಗೂ ವ್ಯಕ್ತಪಡಿಸಲಿಲ್ಲ. ಸಮಯಕ್ಕೆ ಸರಿಯಾಗಿ ಪ್ರಾರ್ಥನೆ ಸಲ್ಲಿಸಲು ಮತ್ತು ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಹೊಂದಲು ಅವರು ಯಾವಾಗಲೂ ಸಹೋದರ ಸಹೋದರಿಯರಿಗೆ ಸಲಹೆ ನೀಡಿದರು. ಆಗಿನ ಜಮಾಅತ್ ನ ಆರ್ಥಿಕ ಸ್ಥಿತಿಯೂ ಹಾಗಿರಲಿಲ್ಲ, ಸಾಕಷ್ಟು ಕಷ್ಟಗಳು ಇದ್ದವು, ಆದರೂ ಸಹ ಬಹಳ ತಾಳ್ಮೆಯಿಂದ ಬದುಕುತ್ತಿದ್ದರು.

ನಾನು ಸ್ಕೂಲಿನಲ್ಲಿದ್ದಾಗ ಅವರು ಅಧ್ಯಾಪಕರಾಗಿ ಬಂದಿದ್ದರು ಮತ್ತು ನನು ಅವರನ್ನು ನೋಡಿದ್ದೇನೆ, ಇದು ಕೇವಲ ಮಕ್ಕಳ ಮಾತಲ್ಲ ಅಂದರೆ ಪುತ್ರ ಪಿತನನು ಹೊಗಳಿದ್ದಾನೆ ಎಂದು. ವಾಸ್ತವವಾಗಿ ಅವರಲ್ಲಿ ಈ ಗುಣಗಳಿದ್ದವು.

ಅಹ್ಮದೀಯರಲ್ಲದವರೂ ಅವರಿಂದ ಬಹಳ ಪ್ರಭಾವಿತರಾಗಿದ್ದರು. 1973 ಅಥವಾ 1974 ರಲ್ಲಿ ಅಥವಾ ಬಹುಶಃ ಶಾಲೆಗಳು ರಾಷ್ಟ್ರೀಕರಣಗೊಂಡ ನಂತರ, ಅವರು ಶಾಲೆಯಲ್ಲಿಯೇ ಇದ್ದರು ಮತ್ತು ಪ್ರೌಢಶಾಲೆಯಲ್ಲಿ ಸ್ವಲ್ಪ ಸಮಯ ಕಳೆದರು. ನಂತರ 1985 ರಲ್ಲಿ, ಸರ್ಕಾರವು ಇಸ್ಲಾಮಿಯಾ ಹೈಸ್ಕೂಲ್ನ ಮುಖ್ಯೋಪಾಧ್ಯಾಯರಾಗಿ ಬಡ್ತಿ ನೀಡಿದಾಗ, ಭೈರಾಹ್ಗೆ ಕಳುಹಿಸಿದಾಗ, ಅಲ್ಲಿ ಉಪ ಮುಖ್ಯೋಪಾಧ್ಯಾಯರು ಜಾಮಾ ಮಸೀದಿಯ ಇಮಾಮ್ ಆಗಿದ್ದು, ಮೇಲ್ನೋಟಕ್ಕೆ ಅವರು ಅಹ್ಮದಿ ಎಂಬ ಕಾರಣಕ್ಕೆ ಅವರನ್ನು ವಿರೋಧಿಸುತ್ತಾರೆ ಎಂದು ಭಾವಿಸಿದ್ದರು, ಆದರೆ ಅವರು ನಿಮ್ಮ ಉತ್ತಮ ನಡವಳಿಕೆಯಿಂದ ನಿಮ್ಮನ್ನು ತುಂಬಾ ಗೌರವಿಸುತ್ತಿದ್ದರು.

ಈ ವ್ಯಕ್ತಿ ಖಾದಿಯಾನಿಯಾಗಿದ್ದರೂ ದೇವದೂತರು ಎಂದು ಅವರು ಒಂದು ದಿನ ಇತರ ಶಿಕ್ಷಕರಿಗೆ ಹೇಳುವುದನ್ನು ನಾನು ಕೇಳಿದೆ ಎಂದು ನಿರೂಪಕರು ಹೇಳುತ್ತಾರೆ. ಹೀಗೆ ಈ ರೀತಿ ಮೌನ ತಬ್ಲೀಗ್ ಕೂಡ ಮಾಡುತ್ತಿದ್ದರು. ಶತ್ರುಗಳ ಮೇಲೂ ಪ್ರಭಾವ ಬೀರುತ್ತಿದ್ದರು. ಅನೇಕ ಬಾರಿ ನಿಮ್ಮ ಶಿಷ್ಯರು ನಿಮ್ಮನ್ನು ಭೇಟಿ ಮಾಡಲು ಬಂದು ನಾವು ನಿಮ್ಮ ಶಿಷ್ಯರು ಎಂದು ಹೇಳುತ್ತಿದ್ದರು, ಆದರೆ ನೀವು ಯಾರು ದೇವರ ಮಾರ್ಗದಲ್ಲಿ ತಮ್ಮ ಜೀವನವನ್ನು ವಖ್ಫ್ ಮಾಡಿದ ಆ ಶಿಷ್ಯರ ಬಗ್ಗೆ ಹೆಚ್ಚು ಹೆಮ್ಮೆಪಡುತ್ತಿದ್ದರು ಮತ್ತು ಅವರ ಬಗ್ಗೆ ಇವರು ತಮ್ಮ ಜೀವನವನ್ನು ವಖ್ಫ್ ಮಾಡಿದ್ದಾರೆ ಎಂದು ಬಹಳ ಸಂತೋಷದಿಂದ ಹೇಳುತ್ತಿದ್ದರು. ವಖಿಫೀನ್ ಝಿಂದಗೀ ಅವರನ್ನು ಬಹಳ ಗೌರವಿಸುತ್ತಿದ್ದರು. ದಿವಂಗತರ ಮೇಲೆ ಅಲ್ಲಾಹನು ಕರುಣೆ ಮತ್ತು ಮಗ್‌ಫಿರತ್ ಅನ್ನು ದಯಪಾಲಿಸಲಿ. ಅವರ ಶ್ರೇಣಿಯನ್ನು ಹೆಚ್ಚಿಸಲಿ. ಅವರ ಮಕ್ಕಳನ್ನು ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ತೌಫೀಖ್ ನೀಡಲಿ. ...*...*...*...

*(ಪುಟ ಸಂಖ್ಯೆ 06ರ ಉಳಿದ ಭಾಗ)*

(ಸಬ್ಲುಲ್‌ಹಿದಾ ವಾಲ್–ರಶಾದ್, ಸಂಪುಟ 4, ಪುಟ 186, ದಾರುಲ್ ಕುತುಬ್ ಅಲ್–ಇಲ್ಮೀಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಸೀರತ್ ಖತಮನ್ನಬೀಈನ್(ಸ.ಅ) ನಲ್ಲಿ ಅದರ ವಿವರಣೆಯಲ್ಲಿ ಹೀಗೆ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಒಟ್ಟುಗೂಡಿಸಿ ಖುರೈಷಿಗಳ ದಳಿಯ ಬಗ್ಗೆ ನಾವು ಮದೀನಾದಲ್ಲಿ ಇರಬೇಕೇ ಅಥವಾ ಹೊರಗೆ ಹೋಗಿ ಹೋರಾಡಬೇಕೆ ಎಂದು ಸಲಹೆ ಕೇಳಿದರು. ಸಮಾಲೋಚನೆಯ ಮೊದಲು, ಹಝ್ರತ್ ಪೈಗಂಬರ್(ಸ) ಖುರೈಷಿಗಳ ದಾಳಿ ಮತ್ತು ಅವರ ರಕ್ತಸಿಕ್ತ ಉದ್ದೇಶಗಳನ್ನು ಪ್ರಸ್ತಾಪಿಸಿದರು ಮತ್ತು ನಾನು ನಿನ್ನೆ ರಾತ್ರಿ ಒಂದು ಕನಸು ಕಂಡೆ ಮತ್ತು ನಂತರ ಈಗ ಉಲ್ಲೇಖಿಸಲಾದ ಕನಸನ್ನು ವಿವರಿಸಿದರು. ಸಹಚರರ ವ್ಯಾಖ್ಯಾನವನ್ನು ಕೇಳಿದಾಗ, ಹಝ್ರತ್ ಪೈಗಂಬರ್(ಸ) ಈ ಕನಸನ್ನು ಹೀಗೆ ವ್ಯಾಖ್ಯಾನಿಸಿದರು: ದನಕ್ಕೆ ಸಂಬಂಧಿಸಿ ಹೇಳುವುದಾದರೆ, ನನ್ನ ಕೆಲವು ಸಹಾಬಿಯರು ಶಹೀದ್ ಆಗುವರು ಎಂಬುದನ್ನು ಅದು ಸೂಚಿಸುತ್ತದೆ. ನನ್ನ ಖಡ್ಗದ ಹಿಡಿ ಬಿರುಕು ಬಿಡುವುದಕ್ಕೆ ಸಂಬಂಧಿಸಿ ಹೇಳುವುದಾದರೆ, ನನ್ನ ಮನೆಯವರಲ್ಲಿ ಅಥವಾ ಕುಟುಂಬದವರಲ್ಲಿ ಯಾರಾದರೂ ವಧಿಸಲ್ಪಡುವರು ಎಂಬುದನ್ನು ಅದು ಸೂಚಿಸುತ್ತದೆ. ಸುದೃಢವಾದ ಯುದ್ಧ ಅಂಗಿಯ ಅರ್ಥ ಮದೀನ ಆಗಿದೆ ಮತ್ತು ಕುರಿಯ ಮೇಲೆ ಸವಾರನಾಗುವುದರ ಅರ್ಥ ನಾನು ಶತ್ರುಗಳ ಬೆಂಬಲಿಗರನ್ನು ವಧಿಸುವೆನು ಎಂದಾಗಿದೆ. ಅಂತೂ ಹಝ್ರತ್ ಪೈಗಂಬರ್(ಸ) ಈ ಬಗ್ಗೆ ಸಲಹೆ ಕೇಳಿದರು ಮತ್ತು ಹೀಗೆ ಹೇಳಿದರು: ನೀವು ಅಭಿಪ್ರಾಯಪಡುವುದಾದರೆ ಮದೀನದಲ್ಲಿ ತಂಗಿ ಮಹಿಳೆಯರನ್ನು ಮತ್ತು ಮಕ್ಕಳನ್ನು ನಾವು ಕೋಟೆಗಳಿಗೆ ತಲುಪಿಸೋಣ. ಮದೀನ ಒಂದು ಕೋಟೆಯ ಹಾಗಿತ್ತು. ಹಝ್ರತ್ ಪೈಗಂಬರ್(ಸ) ನೀಡಿದ ಅದೇ ಅಭಿಪ್ರಾಯವೇ ಮುಹಾಜಿರ್ ಮತ್ತು ಅನ್ಸಾರರಾದ ಶ್ರೇಷ್ಠ ಸಹಾಬಿಯರ ಅಭಿಪ್ರಾಯವಾಗಿತ್ತು. ಆದರೆ ಬದ್ರ್ ಯುದ್ಧದಲ್ಲಿ ಭಾಗಿಯಾಗಿರದ ಮತ್ತು ತಮ್ಮ ಶಹಾದತ್ತಿನಿಂದ ಧರ್ಮದ ಸೇವೆಯ ಸದವಕಾಶವನ್ನು ಗಳಿಸುವ ತವಕದಲ್ಲಿದ್ದ ಮುಸ್ಲಿಂ ಯುವಕರ ಒಂದು ಸಂಘ ಹೀಗೆ ಒತ್ತಾಯಪಡಿಸುತ್ತಿದ್ದರು. ಶತ್ರುಗಳು ನಮ್ಮನ್ನು ಭೀರುಗಳು ಎಂದು ಭಾವಿಸದಿರಲು ನೀವು ನಮ್ಮನ್ನು ಮದೀನದಿಂದ ಹೊರಗೆ ಕೊಂಡು ಹೋಗಿರಿ.

ಹಝ್ರತ್ ಪೈಗಂಬರ್(ಸ) ಯುವಕರ ಸಲಹೆಯನ್ನು ಅಂಗೀಕರಿಸಿದರು ಮತ್ತು ತೆರೆದ ಮೈದಾನಕ್ಕೆ ಹೊರಟು ಸತ್ಯನಿಷೇಧಿಗಳೊಡನೆ ಸೆಣಸಾಡಲು ತೀರ್ಮಾನಿಸಿದರು. ಜುಮಾ ನಮಾಝಿನ ನಂತರ ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಸಾರ್ವಜನಿಕವಾಗಿ ಸಂಬೋಧಿಸುತ್ತಾ ಅಲ್ಲಾಹನ ಮಾರ್ಗದಲ್ಲಿ ಹೋರಾಡಲಿಕ್ಕಾಗಿ ಈ ಯುದ್ಧದಲ್ಲಿ ಭಾಗವಹಿಸಿಕೊಂಡು ಪುಣ್ಯವನ್ನು ಗಳಿಸಿರಿ ಎಂದು ಹೇಳಿದರು.

(ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟಗಳು 484–485)

ಈ ಉಳಿದ ವಿವರವನ್ನು ನಂತರ ವಿವರಿಸಲಾಗುವುದು, ಇನ್‌ಶಾಅಲ್ಲಾಹ್.

ಪೆಲಸ್ತೀನಿಯರಿಗಾಗಿ ದುಆಗಳನ್ನು ಮಾಡುತ್ತಿರಿ. ಯುದ್ಧವಿರಾಮದ ನಂತರ ಪುನಃ ಯಾವುದೇ ವ್ಯತ್ಯಾಸವಿಲ್ಲದೇ ಬಾಂಬ್‌ಗಳನ್ನು ವರ್ಷಿಸಲಾಗುವುದು ಮತ್ತು ಪುನಃ ಮುಗ್ಧರು ಶಹೀದಾಗುವರು. ಎಷ್ಟು ದೌರ್ಜನ್ಯ ನಡೆಯವುದು ಎಂದು ಅಲ್ಲಾಹನೇ ಬಲ್ಲನು. ಅವರ ಭವಿಷ್ಯದ ಬಗ್ಗೆ ದೊಡ್ಡ ಶಕ್ತಿ ರಾಷ್ಟ್ರಗಳ ಉದ್ದೇಶಗಳು ಬಹಳ ಅಪಾಯಕಾರಿಯಾಗಿದೆ. ಆದ್ದರಿಂದ ಅವರಿಗಾಗಿ ಬಹಳ ದುಆಗಳ ಅಗತ್ಯವಿದೆ. ಅಲ್ಲಾಹನು ಕೃಪೆದೋರಲಿ. ...*...*...*...

*(ಸಂಪುಟ–1,2ರ ಪುಟ ಸಂಖ್ಯೆ 12ರ ಉಳಿದ ಭಾಗ)*

ಮುಂದಿನ ಉಲ್ಲೇಖವು ಮಿಯಾಂ ರಫೀಕ್ ಅಹ್ಮದ್ ಗೊಂಡಲ್ ಸಾಹಿಬ್ ಅವರದ್ದಾಗಿದೆ ಅವರು ಇತ್ತೀಚೆಗೆ ಎಂಬತ್ತೊಂದನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯತ್ ಅವರ ಅಜ್ಜ ಮಿಯಾಂ ಬಖ್ಷ್ ಸಾಹಿಬ್ ಗೋಂಡಾಲ್ ಆಫ್ ಕೋಟ್ ಮೊಮಿನ್‌ನ ಮೂಲಕ ಪ್ರವೇಶೀಸಿತು. ಅವರ ಕುಟುಂಬದಲ್ಲಿ ಅವರು ಒಬ್ಬರೇ ಅಹ್ಮದಿಯಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲಘಟ್ಟದಲ್ಲಿ, ಪ್ಲೇಗ್ ಸಾಂಕ್ರಾಮಿಕರೋಗ ಹರಡಿದಾಗ, ಅವರು ಪ್ಲೇಗ್ನಿಂದ ಬಳಲುತ್ತಿದ್ದರು. ಈಗ ಚಿಹ್ನೆಗಳು ಪ್ರಸ್ತಾಪವಾಗುತ್ತಿವೆ, ಆದ್ದರಿಂದ ಅವರ ಈ ಘಟನೆಯೂ ಒಂದು ಸಂಕೇತವಾಗಿದೆ. ಚಿಕಿತ್ಸೆಗಾಗಿ ಅವರು ಭೈರಾಗೆ ಹೋಗುತ್ತಿದ್ದರು. ಭೇರಾದಲ್ಲಿ, ಅವರು ನನ್ನ ನಾಲ್ಕು ಗೋಡೆಗಳಲ್ಲಿ ಪ್ರವೇಶಿಸುವವನು ರಕ್ಷಿಸಲ್ಪಡುವನು ಎಂಬ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಪಠ್ಯವನ್ನು ಓದಿದರು. ಅವನು ಮನೆಗೆ ಹಿಂತಿರುಗಿ ಬಂದು ನಾನು ಖಾದಿಯಾನ್‌ಗೆ ಹೋಗುತ್ತಿದ್ದೇನೆ ಎಂದು ಹೇಳಿದರು. ಅವರು ಖಾದಿಯಾನ್‌ಗೆ ತಲುಪಿದಾಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮುಬಾರಕ್ ಮಸೀದಿಯಲ್ಲಿ ಕುಳಿತು ಏನೋ ಬರೆಯುತ್ತಿದ್ದರು. ಅವರು ಏನನ್ನಾದರೂ ಮಾತನಾಡಲು ಉದ್ದೇಶಿಸಿದ್ದರು ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರ ಕಾರ್ಯನಿರತತೆಯಿಂದಾಗಿ ಮಾತನಾಡಲು ಸಾಧ್ಯವಾಗಲಿಲ್ಲ. ಆದಾಗ್ಯೂ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಕೆಲವನ್ನು ಮುಗಿಸಿದ ನಂತರ, ಅವರು ತಮ್ಮನ್ನು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಪರಿಚಯ ಮಡಿಸಿಕೊಟ್ಟರು ಮತ್ತು ಪ್ಲೇಗ್ನಿಂದ ಸುರಕ್ಷಿತವಾಗಿರುತ್ತಾರೆ ಎಂಬ ನಿಮ್ಮ ಮಾತುಗಳನ್ನು ಕೇಳಿದ ನಂತರ, ಈ ಮನೆಯ ನಾಲ್ಕು ಗೋಡೆಗಳನ್ನು ಯಾರು ಪ್ರವೇಶಿಸುತ್ತಾರೆ ಪ್ಲೇಗ್‌ನಿಂದ ಸುರಕ್ಷಿತವಾಗಿರುತ್ತೇನೆ ಎಂಬ ಮಾತುಗಳನ್ನು ಕೇಳಿದ ನಂತರ ನಾನು ನಿಮ್ಮನ್ನು ಭೇಟಿಯಾಗಲು ಬಂದಿದ್ದೇನೆ. ಆದಗ್ಯೊ, ಅಲ್ಲಿ ಚರ್ಚಿಸಿದಾಗ, ಅವರು ಬೈಅತ್ ಮಾಡಿದರು ಮತ್ತು ಬೈಅತ್‌ನ ನಂತರ ಅವರ ಗಾಯಗಳೂ ವಾಸಿಯಾದವು. ಅವರು ಇದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯಾಸತ್ಯತೆಗೆ ಪುರಾವೆ ಎಂದು ಪರಿಗಣಿಸಿದರು ಮತ್ತು ಅದನ್ನು ವಿವರಿಸಲು ಬಳಸುತ್ತಿದ್ದರು. ಮಿಯಾಂ ರಫೀಕ್ ಗೊಂಡಾಲ್ ಮತ್ತು ಅವರ ಮಗನನ್ನು ಒಮ್ಮೆ ಲಾಹೋರ್‌ನಲ್ಲಿ ವಿದ್ಯಾರ್ಥಿಗಳು ಹಿಡಿದು ಕೆಟ್ಟದಾಗಿ ಥಳಿಸಿದರು. ಹುಡುಗರು ತಮ್ಮ ಮಗನನ್ನು ಹೊಡೆಯುತ್ತಿದ್ದಾಗ. ಮನೆಯಿಂದ ಹೊರಬಂದು ರಕ್ಷಿಸಲು ಮುಂದಾದಾಗ ಅವರೇ ಗಾಯಗೊಂಡು ಕೈ ಮುರಿದುಕೊಂಡರೂ ಜಮಾಅತ್ತಿನ ಹಿತದೃಷ್ಟಿಯಿಂದ ಥಳಿಸಿದ್ದಾರೆ. ಮಲಿಕ್ ಉಮರ್ ಅಲಿ ಸಾಹಿಬ್ ಖೋಖರ್ ಅವರ ಅಳಿಯ ಮತ್ತು ಮಲಿಕ್ ಉಮರ್ ಅಲಿ ಸಾಹಿಬ್ ಅವರ ಮೊದಲ ಪತ್ನಿ ಹಝ್ರತ್ ಮೀರ್ ಇಸ್ಹಾಕ್ ಸಾಹಿಬ್(ರ) ಅವರ ಪುತ್ರಿ ಮತ್ತು ಅವರ ಪತ್ನಿ ಹಝ್ರತ್ ಮೀರ್ ಇಸ್ಹಾಕ್ ಸಾಹಿಬ್(ರ) ಅವರ ಮೊಮ್ಮಗಳಾಗಿದ್ದಾರೆ. ಅವರಿಗೆ ಒಬ್ಬ ಮಗ ಮತ್ತು ಇಬ್ಬರು ಪುತ್ರಿಯರಿದ್ದು, ಒಬ್ಬ ಮಗ ಮತ್ತು ಮಗಳು ಅಮೆರಿಕದಲ್ಲಿದ್ದಾರೆ. ಒಬ್ಬ ಮಗಳು ರಿಫಾತ್ ಸುಲ್ತಾನಾ ಡಾ. ಮಶ್ಹೂದ್ ಅಹ್ಮದ್ ಅವರು ರಬ್ವಾಹ್ ಫಝುಲ್ ಉಮರ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.